ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 23 ಭಾನುವಾರ 2023

ಸಂಪುಟ: 44 | ಸಂಚಿಕೆ: 98 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಹಾರಂಗಿ ಜಲಾಶಯ ಭರ್ತಿ; ಐದು ಸಾವಿರ ಕ್ಯುಸೆಕ್ ನೀರು ಬಿಡುಗಡೆ





ಮಡಿಕೇರಿ, ಜು. 22– ಕೊಡಗಿನಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರೀ ಮಳೆಗೆ ಜಿಲ್ಲೆಯ ನದಿ–ತೊರೆಗಳು ತುಂಬಿ ಹರಿಯುತ್ತಿದ್ದು, ಹಾರಂಗಿ ಜಲಾಶಯ ಬಹುತೇಕ ಭರ್ತಿಯಾಗಿದೆ. ಜಲಾಶಯದ ಭದ್ರತಾ ದೃಷ್ಟಿಯಿಂದ ಶನಿವಾರ ಸಂಜೆ ಐದು ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗಿದೆ.

ಅಲ್ಲದೇ, ಮಳೆಯ ತೀವ್ರತೆ ಮತ್ತಷ್ಟು ಹೆಚ್ಚಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಜ.24ರವರೆಗೆ ಜಿಲ್ಲಾದ್ಯಂತ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 115.6ರಿಂದ 204.4 ಮಿಲಿ ಮೀಟರ್ ಮಳೆಯಾಗುವ ಸಾಧ್ಯತೆ ಇದೆ. ಗಾಳಿ ಸಹಿತ ಧಾರಾಕಾರವಾಗಿ ಮಳೆ ಸುರಿಯಲಿದ್ದು, ಗಾಳಿಯು ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಭಾಗಮಂಡಲ, ತಲಕಾವೇರಿ, ಬ್ರಹ್ಮಗಿರಿ ಬೆಟ್ಟದ ಸಾಲು, ಚೇರಂಗಾಲ, ಕೋರಂಗಾಲ ಪ್ರದೇಶಗಳಲ್ಲಿ ಧಾರಾಕಾರವಾಗಿ ಮಳೆಯಾಗುತ್ತಿರುವ ಪರಿಣಾಮ ತ್ರಿವೇಣಿ ಸಂಗಮ ಜಲಾವೃತಗೊಂಡಿದೆ. ನಾಪೋಕ್ಲು, ಕುಂಜಿಲ, ಕಕ್ಕಬ್ಬೆ ವ್ಯಾಪ್ತಿಯಲ್ಲಿ ಎಡೆಬಿಡದೇ ಮಳೆ ಸುರಿಯುತ್ತಿದೆ. ಇದರ ಪರಿಣಾಮವಾಗಿ ಕೂಟುಹೊಳೆ, ಹಟ್ಟಿಹೊಳೆ, ಮಾದಾಪುರ ಹೊಳೆ, ಕಾವೇರಿ, ಲಕ್ಷ್ಮಣತೀರ್ಥ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಹಾರಂಗಿ ಜಲಾನಯನ ಪ್ರದೇಶಗಳಾದ ಮಡಿಕೇರಿ ನಗರ, ಗಾಳಿಬೀಡು, ವಣಚಲು, ಕಾಲೂರು, ಹಮ್ಮಿಯಾಲ, ಸೂರ್ಲಬ್ಬಿ, ಹಚ್ಚಿನಾಡು, ಮಾದಾಪುರ ವ್ಯಾಪ್ತಿಯಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಇಂದು ಸಂಜೆ ವೇಳೆಗೆ ಹಾರಂಗಿ ಜಲಾಶಯದ ಒಳಹರಿವು 20,730 ಕ್ಯುಸೆಕ್‌ಗೆ ಏರಿಕೆ ಕಂಡ ಪರಿಣಾಮ ಜಲಾಶಯದ ಭದ್ರತೆ ದೃಷ್ಟಿಯಿಂದ ಕಾರ್ಯಪಾಲಕ ಅಭಿಯಂತರ ಪುಟ್ಟಸ್ವಾಮಿಯವರು ಮುನ್ನೆಚ್ಚರಿಕಾ ಕ್ರಮವಾಗಿ ಸೈರನ್ ಮೊಳಗಿಸಿದ ನಂತರ 4 ಕ್ರೆಸ್ಟ್ ಗೇಟ್‌ಗಳ ಮೂಲಕ 5 ಕ್ಯುಸೆಕ್ ನೀರನ್ನು ಕಾವೇರಿ ನದಿಗೆ ಹರಿಯಬಿಟ್ಟರು. ಇದಕ್ಕೂ ಮುನ್ನ ಶಾಸಕ ಮಂತರ್‌ಗೌಡ ಕ್ರೆಸ್ಟ್ ಗೇಟ್‌ಗಳಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿದರು.

6 ಮನೆಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿದ್ದು, ಕಳೆದ 24 ಗಂಟೆಗಳಲ್ಲಿ 23 ವಿದ್ಯುತ್ ಕಂಬಗಳು ಹಾಗೂ ಹಲವೆಡೆ ಮರಗಳು ಧರೆಗುರುಳಿವೆ. ಮಡಿಕೇರಿ ತಾಲೂಕು ಜೋಡುಪಾಲ ಬಳಿ ಮರ ಬಿದ್ದು, ಮನೆಯ ಚಾವಣಿಗೆ ಹಾನಿಯಾಗಿದ್ದು ಮನೆ ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಬ್ಬಿಫಾಲ್ಸ್ ರಸ್ತೆಯಲ್ಲಿ ಮರ ಉರುಳಿ ಬಿದ್ದ ಪರಿಣಾಮ ಕೆಲ ಗಂಟೆಗಳ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪೊನ್ನಂಪೇಟೆ ವಿಭಾಗದ ಅರಣ್ಯ ಇಲಾಖೆ ಸಿಬ್ಬಂದಿ ಮರ ತೆರವುಗೊಳಿಸುವ ಮೂಲಕ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಭಾಗಮಂಡಲ ಹೋಬಳಿ ಅವಂದೂರು ಗ್ರಾಮದ ಯೋಗೇಶ್ ಆಚಾರಿ, ಮದೆ ಗ್ರಾಮದ ತಳೂರು ಸೀತಾರಾಮ, ಚೆಂಬು ಗ್ರಾಮದ ಇಬ್ರಾಹಿಂ, ಸೋಮವಾರಪೇಟೆಯ ಶಾಂತಳ್ಳಿ ಹೋಬಳಿ ತೋಳೂರು ಶೆಟ್ಟಳ್ಳಿಯ ಪಾರ್ವತಿ ಎಂಬುವರ ಮನೆಗಳ ಮೇಲೆ ಮರ ಬಿದ್ದು ಹಾನಿಯಾಗಿದೆ. ಹಾನಗಲ್ ಶೆಟ್ಟಳ್ಳಿ ಗ್ರಾಮದ ● 9ನೇ ಪುಟಕ್ಕೆ

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	91.50 ಅಡಿ
ಒಳಹರಿವು	7914 ಕ್ಯುಸೆಕ್
ಹೊರಹರಿವು	5248 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶನಿವಾರ	2274.34 ಅಡಿ
ಒಳ ಹರಿವು	9221 ಕ್ಯುಸೆಕ್
ಹೊರ ಹರಿವು	2500 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶನಿವಾರ	2854.71 ಅಡಿ
ಒಳ ಹರಿವು	20,730 ಕ್ಯುಸೆಕ್
ಹೊರ ಹರಿವು	5000 ಕ್ಯುಸೆಕ್

ಹಾಲಿನ ಪರಿಷ್ಕೃತ ದರ ವಿವರ



ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಕೆಎಂಎಫ್ ಸೇರಿದಂತೆ ಎಲ್ಲಾ ಹಾಲು ಒಕ್ಕೂಟಗಳ ಪದಾಧಿಕಾರಿಗಳ ಸಭೆಯಲ್ಲಿ ನಂದಿನಿ ಹಾಲಿನ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಏರಿಕೆ ಮಾಡಲು ನಿರ್ಧರಿಸಿದ್ದು, ಪರಿಷ್ಕೃತ ದರ ಆಗಸ್ಟ್ 1ರಿಂದ ಅನ್ವಯವಾಗಲಿದೆ. ಎಲ್ಲಾ ಮಾದರಿ ಹಾಲಿನ ಪ್ರಸ್ತುತ ಹಾಗೂ ಪರಿಷ್ಕೃತ ದರ ಪಟ್ಟಿ ಹೀಗಿದೆ.

ಪ್ರಸ್ತುತ ದರ	ಪರಿಷ್ಕೃತ ದರ
■ ಟೋನ್ಡ್ ಹಾಲು 39	42 ರೂ.
■ ಹೋಮೋಜಿನೈಸ್ಡ್ ಹಾಲು 40	43 ರೂ.
■ ಹೊಮೊಜಿನೈಸ್ಡ್ ಹಸುವಿನ ಹಾಲು 44	47 ರೂ.
■ ಸ್ಪೆಷಲ್ ಹಾಲು 46	49 ರೂ.
■ ಶುಭಂ ಹಾಲು 46	49 ರೂ.

ತಮಿಳುನಾಡಿಗೆ ಕಾವೇರಿ ನೀರು!

ಬೆಂಗಳೂರು: ರಾಜ್ಯದಲ್ಲಿ ಮಳೆಯ ಕೊರತೆ ಇದ್ದರೂ, ಕುಡಿಯುವ ನೀರಿನ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡಿಗೆ ಕಾವೇರಿ ನೀರು ಹರಿಸುವುದಕ್ಕೆ ಚಿಂತನೆ ನಡೆಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಮಳೆಯ ಕೊರತೆಯಿಂದಾಗಿ ರಾಜ್ಯದಲ್ಲಿ ಸಾಕಾಗುವಷ್ಟು ನೀರಿಲ್ಲ. ಇನ್ನೂ ಕೆಲವು ದಿನಗಳಲ್ಲಿ ನದಿ ಪ್ರದೇಶಗಳಲ್ಲಿ ಮಳೆಯನ್ನು ನಿರೀಕ್ಷಿಸಲಾಗುತ್ತಿದೆ ಎಂದೂ ಜಲಸಂಪನ್ಮೂಲ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ● 9ನೇ ಪುಟಕ್ಕೆ

ಮುಖ್ಯಮಂತ್ರಿ ಮಾಡೋದು ಗೊತ್ತು ಕೆಳಗೆ ಇಳಿಸೋದು ಗೊತ್ತು...!

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪರೋಕ್ಷ ವಾಗ್ದಾಳಿ ● ಸಚಿವ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದು ಅವಕಾಶ ವಂಚಿತರಲ್ಲಿ ಹರಿಪ್ರಸಾದ್ ಪ್ರಮುಖರು ● ದಕ್ಷಿಣ ಕನ್ನಡದಲ್ಲಿ ನಡೆದ ಈಡಿಗ, ಬಿಲ್ಲವ, ನಾಮಧಾರಿ, ದೀವರ ಜನಾಂಗದ ಮುಖಂಡರ ಸಭೆಯಲ್ಲಿ ಅಸಮಾಧಾನ ● ಹಿಂದುಳಿದ ವರ್ಗವೆಂದರೆ ಒಂದೇ ಸಮುದಾಯವಲ್ಲ ● ಅವಕಾಶ ಸಿಗದಿದ್ದರೂ ಯಾರ ಬಳಿಯೂ ಭಿಕ್ಷೆ ಕೇಳುವುದಿಲ್ಲ



ಮಂಗಳೂರು, ಜು.22–ನನಗೆ ಮುಖ್ಯಮಂತ್ರಿ ಆಯ್ಕೆ ಮಾಡೋದೂ ಗೊತ್ತು, ಕೆಳಗೆ ಇಳಿಸುವುದೂ ಗೊತ್ತು ಎಂದು ಹೇಳುವ ಮೂಲಕ ಕಾಂಗ್ರೆಸ್ ಹಿರಿಯ ನಾಯಕರೂ ಆದ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಈ ಬಾರಿ ಕೂಡ ತಮಗೆ ಸೂಕ್ತ ಸ್ಥಾನಮಾನ ಸಿಕ್ಕಿಲ್ಲ ಎಂದು ಬಹಿರಂಗವಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲೆ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

ಮಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಈಡಿಗ, ಬಿಲ್ಲವ, ನಾಮಧಾರಿ, ದೀವರ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ನಾನು ಯಾವುದೇ ಮಂತ್ರಿ ಬಳಿಯಾಗಲೀ, ಮುಖ್ಯಮಂತ್ರಿ ಬಳಿಯಾಗಲೀ ಭಿಕ್ಷೆ ಬೇಡಲು ಹೋಗುವುದಿಲ್ಲ. ನನಗೂ ಶಕ್ತಿ ಇದೆ. ಐದು ಮುಖ್ಯಮಂತ್ರಿಗಳನ್ನು ಮಾಡಿದ್ದೇನೆ. ಅದರಲ್ಲಿ ಪಾಂಡಿಚೇರಿ, ಗೋವಾ ಮತ್ತು ಛತ್ತೀಸ್‌ಗಢದಲ್ಲಿ ನಾನೊಬ್ಬನೇ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಿದ್ದೇನೆ. ಇನ್ನು ಎರಡು ರಾಜ್ಯಗಳಲ್ಲಿ ನನ್ನ ಜೊತೆ ತಂಡವಿತ್ತು ಎಂದರು. ನಾನು ಯಾರ ಬಳಿಯೂ ಭಿಕ್ಷೆ ಕೇಳುವುದಿಲ್ಲ. ಆದರೆ, ನಮಗೆ ಅನ್ಯಾಯವಾದರೆ ಎದೆ ಕೊಟ್ಟು ಹೋರಾಟಕ್ಕೆ ನಿಲ್ಲುತ್ತೇನೆ ಎಂದರು. ಹಿಂದುಳಿದ ವರ್ಗದವರು ಅದರಲ್ಲೂ ಈಡಿಗರು, ಬಿಲ್ಲವರು, ನಾಮಧಾರಿಗಳು ಹಾಗೂ ದೀವರ ಸಮುದಾಯದವರು ಏಕೆ ಮುಂದೆ ಬಂದಿಲ್ಲ ಎಂದು ಕಳೆದ ಎರಡು ವರ್ಷದಿಂದ ಆಳವಾಗಿ ಚರ್ಚೆ ಮಾಡಲಾಗುತ್ತಿದೆ. ನಾವು ಏನೇ ಪ್ರಯತ್ನ ಮಾಡಿದರೂ ಅವಕಾಶ ವಂಚಿತರಾಗುತ್ತಿದ್ದೇವೆ. ಎಲ್ಲೋ, ಯಾರದೋ ಷಡ್ಯಂತ್ರಕ್ಕೆ ಬಲಿಯಾಗುತ್ತಿದ್ದೇವೆ ಎಂದು ನನಗೆ ಅನ್ನಿಸುತ್ತಿದೆ ಎಂದರು.

ಸಿದ್ದರಾಮಯ್ಯನವರೂ ಹಿಂದುಳಿದ ವರ್ಗದವರು, ನೀವೂ ಹಿಂದುಳಿದ ವರ್ಗದವರು. ನೀವೆಲ್ಲಾ ಒಟ್ಟಿಗೆ ಸೇರಬೇಕು ಎಂದು ಕೆಲವರು ಹೇಳುತ್ತಾರೆ. ಹೀಗಾಗಿಯೇ ● 9ನೇ ಪುಟಕ್ಕೆ

> “ ಸಿದ್ದರಾಮಯ್ಯನವರು ನನಗೆ ಏನೂ ಮಾಡುವುದು ಬೇಡ. ಅವರಿಂದ ರಾಜಕೀಯವಾಗಿ ನನಗೆ ಏನೂ ಮಾಡಲೂ ಸಾಧ್ಯವಿಲ್ಲ. ಆದರೆ ನಾನು ಅವರಿಗೆ ಸಹಾಯ ಮಾಡಬಹುದೇನೋ? ಎಂದು ಮಾರ್ಮಿಕವಾಗಿ ಹೇಳಿದರು. 11 ಕ್ಷೇತ್ರಗಳಲ್ಲಿ ಈಡಿಗ, ಬಿಲ್ಲವ, ನಾಮಧಾರಿ ಹಾಗೂ ದೀವರ ಸಮುದಾಯಗಳು ಪ್ರಬಲವಾಗಿವೆ. ಈ ಕ್ಷೇತ್ರಗಳಲ್ಲಿ ಚುನಾವಣಾ ಕಣದಲ್ಲಿ ನಾವಿದ್ದೆವು. ಆದರೆ, ಈಗ ನಾನೇ ಚುನಾವಣಾ ಕಮಿಟಿಯಲ್ಲಿದ್ದರೂ ತಮ್ಮ ಸಮುದಾಯದ ನಾಲ್ವರು ಅವಕಾಶ ವಂಚಿತರಾದರು.

ಡಿಸೆಂಬರ್‌ನಿಂದ ನಿರುದ್ಯೋಗಿ ಪದವೀಧರರು, ಡಿಪ್ಲೊಮಾದಾರರಿಗೆ ಭತ್ಯೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
● ಉದ್ಯೋಗಕ್ಕೆ ಅಗತ್ಯವಾದ ಕೌಶಲ್ಯ ತರಬೇತಿ
● ಸದ್ಯದಲ್ಲೇ ಹೊಸ ಕೈಗಾರಿಕಾ ನೀತಿ ರೂಪಿಸ್ತೇವೆ





ಬೆಂಗಳೂರು, ಜು. 22(ಕೆಎಂಶಿ)– ನಿರುದ್ಯೋಗಿ ಪದವೀಧರರಿಗೆ ಡಿಸೆಂಬರ್ ತಿಂಗಳಿನಿಂದ ಭತ್ಯೆ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಸರ್ಕಾರ 5 ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದು, ಅವುಗಳಲ್ಲಿ ನಾಲ್ಕನ್ನು ಈಗಾಗಲೇ ಅನುಷ್ಠಾನಗೊಳಿಸಿದ್ದೇವೆ. ಯುವನಿಧಿಯಡಿಯಲ್ಲಿ 2022–23ರಲ್ಲಿ ಪದವೀಧರರಾಗಿ ನಿರುದ್ಯೋಗಿಗಳಾಗಿರುವವರಿಗೆ 3 ಸಾವಿರ ಹಾಗೂ ಡಿಪ್ಲೊಮಾ ಹೊಂದಿದವರಿಗೆ 1500 ರೂ.ಗಳ ಭತ್ಯೆ ನೀಡಲಾಗುವುದು. ಅಷ್ಟೇ ಅಲ್ಲ, ಕೌಶಲ್ಯ ಇಲಾಖೆಯಿಂದ ಕೈಗಾರಿಕೆಗಳಿಗೆ ಅಗತ್ಯವಿರುವ ಉದ್ಯೋಗಿಗಳನ್ನು ತಯಾರು ಮಾಡುವ ಸಲುವಾಗಿ ತರಬೇತಿ ಕಾರ್ಯಕ್ರಮವನ್ನು ● 9ನೇ ಪುಟಕ್ಕೆ

ಸದನದಲ್ಲಿ ಜನರ ಸಮಸ್ಯೆ ಚರ್ಚಿಸದೆ ಗದ್ದಲದಲ್ಲೇ ಕಾಲ ಕಳೆದರು

● ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ● ನೈಸ್ ವಿರುದ್ಧ ಕುಮಾರಸ್ವಾಮಿ ಸಿಎಂ ಆಗಿದ್ದಾಗಲೇ ಕ್ರಮ ಕೈಗೊಳ್ಳಬಹುದಿತ್ತು

ಬೆಂಗಳೂರು, ಜು. 22(ಕೆಎಂಶಿ)–ತಮ್ಮ 40 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಹಾಗೂ 14 ಬಾರಿ ಬಜೆಟ್ ಮಂಡಿಸಿದ ಸಂದರ್ಭದಲ್ಲಿ ಇದೇ ಮೊದಲ ಬಾರಿ ವಿರೋಧ ಪಕ್ಷದ ಉಪಸ್ಥಿತಿಯಿಲ್ಲದೇ ಬಜೆಟ್ ಚರ್ಚೆಗೆ ಉತ್ತರ ನೀಡುವಂತಹ ಪರಿಸ್ಥಿತಿ ಒದಗಿಬಂದಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ಕೈಗೊಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ವಿಧಾನಮಂಡಲದ ಅಧಿವೇಶನದಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ಬಿಟ್ಟು, ● 9ನೇ ಪುಟಕ್ಕೆ

ಮೊಬೈಲ್‌ನಿಂದಲೇ ನೀರಿನ ಬಿಲ್ ಪಾವತಿ

● ಪ್ರತಿ ತಿಂಗಳ ಬಿಲ್‌ನಲ್ಲಿರುವ QR ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ಬಿಲ್ ಪಾವತಿಸಿ ● ಮೈಸೂರು ನಗರದ 1,70,000 ಗ್ರಾಹಕರಿಗೂ ಪ್ರತೀ ತಿಂಗಳೂ ಬೇರೆ ಬೇರೆ QR ಕೋಡ್ ● ಬಿಲ್ ಮೇಲೆ ಮುದ್ರಿತ ಕೋಡ್ ಸ್ಕ್ಯಾನ್ ಮಾಡಿ 30 ಸೆಕೆಂಡ್‌ನಲ್ಲಿ ಮೊಬೈಲ್ ಫೋನ್ ಮೂಲಕ ಪಾವತಿ ● ರಾಜ್ಯದಲ್ಲೇ ಮೈಸೂರು ಮಹಾ ನಗರಪಾಲಿಕೆ ವಿನೂತನ ಪ್ರಯೋಗ ● ವಾರದೊಳಗಾಗಿ ಹೊಸ ಯೋಜನೆ ಅನುಷ್ಠಾನ

■ ಎಸ್.ಟಿ.ರವಿಕುಮಾರ್







ಮೈಸೂರು, ಜು.22–ಇನ್ನು ಮುಂದೆ ಕುಡಿಯುವ ನೀರಿನ ಮಾಸಿಕ ಬಿಲ್ ಪಾವತಿಗೆ ತೊಂದರೆ ತೆಗೆದುಕೊಳ್ಳಬೇಕಿಲ್ಲ. ಗ್ರಾಹಕರ ಅನುಕೂಲಕ್ಕಾಗಿ ಮೈಸೂರು ಮಹಾ ನಗರಪಾಲಿಕೆಯು ವಿನೂತನ ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆ. ಹೊಸ ಸಾಫ್ಟ್‌ವೇರ್ ಬಳಸಿ ಡೈನಾಮಿಕ್ QR ಕೋಡ್ ಅನ್ನು ಅಭಿವೃದ್ಧಿಪಡಿಸಲಾಗಿದ್ದು, ವಾರದೊಳಗಾಗಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ. ನೀರಿನ ಸಂಪರ್ಕ ಹೊಂದಿರುವ ಅಧಿಕೃತ ಗ್ರಾಹಕರ ನೀರಿನ ಬಿಲ್ ಮೇಲೆ QR ಕೋಡ್ ಮುದ್ರಣವಾಗಿರುತ್ತದೆ. ಗ್ರಾಹಕರು ತಮ್ಮ ಆಂಡ್ರಾಯ್ಡ್ ಫೋನ್‌ನಿಂದ ಕುಳಿತಲ್ಲೇ QR ಕೋಡ್ ಸ್ಕ್ಯಾನ್ ಮಾಡಿದರೆ ಸಾಕು, ಅದರಲ್ಲಿ ನೀರಿನ ತಿಂಗಳ ಬಿಲ್‌ನ ಮಾಹಿತಿ ಎಲ್ಲವೂ ಬರುತ್ತದೆ. 'ಪೇ' ಎನ್ನುವ ಸ್ಥಳದಲ್ಲಿ ಕ್ಲಿಕ್ಕಿಸಿದರೆ ಸಾಕು, ಕೇವಲ 30 ಸೆಕೆಂಡುಗಳಲ್ಲಿ ನೀರಿನ ಆ ತಿಂಗಳ ಬಿಲ್ ಹಣ ಪಾವತಿಯಾಗುತ್ತದೆ.

ಪ್ರತೀ ಗ್ರಾಹಕರ ಬಿಲ್ ಮೇಲೂ ಬೇರೆ ಬೇರೆ QR ಕೋಡ್ ಸೃಜನವಾಗಿರುತ್ತದೆ. ಅದೇ ರೀತಿ ಪ್ರತೀ ತಿಂಗಳೂ ಬದಲಾಗುತ್ತದೆ. ಒಬ್ಬರ ಬಿಲ್ ಮೇಲಿರುವ ಕೋಡ್ ಅನ್ನು ಬೇರೆ ಗ್ರಾಹಕರು ಸ್ಕ್ಯಾನ್ ಮಾಡಿದರೆ ಬಿಲ್ ಬರುವುದಿಲ್ಲ. ಅದೇ ರೀತಿ ಒಂದು ತಿಂಗಳ ಬಿಲ್ ಮೇಲಿರುವ ಕೋಡ್ ಬಳಸಿ ಬೇರೆ ತಿಂಗಳ ಬಿಲ್ ಪಾವತಿಸಲೂ ಸಾಧ್ಯವಾಗುವುದಿಲ್ಲ.

ಆಯಾ ಬಿಲ್ ಮೇಲೆ ಮುದ್ರಣವಾಗುವ QR ಕೋಡ್ ಬಳಸಿ ಆ ಗ್ರಾಹಕ ಅದೇ ತಿಂಗಳ ಬಿಲ್ ಹಣ ಮಾತ್ರ ಪಾವತಿಸಬಹುದಾಗಿದೆ. ಗ್ರಾಹಕರು ಕುಳಿತಲ್ಲೇ ಮೊಬೈಲ್ ಫೋನ್‌ನಿಂದ ಸ್ಕ್ಯಾನ್ ಮಾಡಿ 30 ಸೆಕೆಂಡ್‌ನಲ್ಲಿ ನೀರಿನ ಬಿಲ್ ಪಾವತಿಸಬಹುದಾಗಿದೆ. ಈವರೆಗೆ ಆನ್‌ಲೈನ್‌ನಲ್ಲಿ ವಾಣಿವಿಲಾಸ ವಾಟರ್ ವರ್ಕ್ಸ್ ಸಾಫ್ಟ್‌ವೇರ್‌ನಲ್ಲಿ ನೀರಿನ ಬಿಲ್‌ನಲ್ಲಿರುವ ಮಾಹಿತಿಗಳನ್ನೆಲ್ಲಾ ಭರ್ತಿ ಮಾಡಿ ಬಿಲ್ ಹಣವನ್ನು ನಮೂದಿಸಿ ಪಾವತಿಸಬೇಕಾಗಿತ್ತು ಅಥವಾ ಕ್ಯಾಶ್ ಕೌಂಟರ್‌ಗಳಿಗೆ ಹೋಗಿ ನಗದು ರೂಪದಲ್ಲಿ ಪಾವತಿಸುವ ವ್ಯವಸ್ಥೆ ಇತ್ತು.

ಇದೀಗ ಗ್ರಾಹಕರಿಗೆ ಮತ್ತಷ್ಟು ಅನುಕೂಲ ಮಾಡಿಕೊಡುವ ಸಲುವಾಗಿ ಮೈಸೂರು ಮಹಾ ನಗರಪಾಲಿಕೆ ಹಾಗೂ ವಾಣಿವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ಡೈನಾಮಿಕ್ QR ಕೋಡ್ ಪದ್ಧತಿಯನ್ನು ಜಾರಿಗೆ ತರುತ್ತಿದ್ದು, ಇದು ರಾಜ್ಯದಲ್ಲೇ ಪ್ರಥಮ ಪ್ರಯೋಗವಾಗಿದೆ. ಈಗಾಗಲೇ ಬ್ಯಾಂಕ್ ಅಧಿಕಾರಿಗಳು ಹಾಗೂ ಸಾಫ್ಟ್‌ವೇರ್ ಕಂಪನಿ ಇಂಜಿನಿಯರ್‌ಗಳೊಂದಿಗೆ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ಹಾಗೂ ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುವರ್ಣ ಅವರು ಜುಲೈ 6ರಂದು ಸಭೆ ನಡೆಸಿ QR ಕೋಡ್ ಪದ್ಧತಿ ಜಾರಿಗೊಳಿಸುವ ಬಗ್ಗೆ ಚರ್ಚಿಸಿ ಅಂತಿಮ ಹಂತಕ್ಕೆ ತಂದಿದ್ದಾರೆ.

ಒಂದು ವಾರದೊಳಗಾಗಿ ನೀರಿನ ಶುಲ್ಕ ಪಾವತಿಗೆ ಡೈನಾಮಿಕ್ QR ಕೋಡ್ ಬಳಸುವ ಹೊಸ ಯೋಜನೆ ಜಾರಿಗೆ ಬರಲಿದ್ದು, ಮೈಸೂರು ನಗರದಲ್ಲಿರುವ ಸುಮಾರು 1,70,000 ಅಧಿಕೃತ ಗ್ರಾಹಕರಿಗೆ ಈ QR ಕೋಡ್ ಮುದ್ರಿತಗೊಂಡ ತಿಂಗಳ ನೀರಿನ ಬಿಲ್ ತಲುಪಲಿದೆ. ಉಳಿದಂತೆ 19ರಿಂದ 25 ಸಾವಿರ ಅನಧಿಕೃತ ನೀರಿನ ಸಂಪರ್ಕವನ್ನೂ ಅಧಿಕೃತಗೊಳಿಸಲೂ ಪಾಲಿಕೆಯು ಸುಲಭ ಮಾರ್ಗೋಪಾಯ ಕಲ್ಪಿಸಲು ಮುಂದಾಗಿದ್ದು, ಅದನ್ನು ಅನುಷ್ಠಾನಗೊಳಿಸಿದಲ್ಲಿ ಆ ಗ್ರಾಹಕರೂ ಸಹ ಡೈನಾಮಿಕ್ QR ಕೋಡ್ ಬಿಲ್ ವ್ಯಾಪ್ತಿಗೆ ಬರಲಿದ್ದಾರೆ.

ತೆರವುಗೊಳಿಸಿದ ಫುಟ್‌ಪಾತ್ ಮೇಲೆ ಮತ್ತೆ ವ್ಯಾಪಾರ ಆರಂಭಿಸಿದರೆ ದಂಡ

ವ್ಯಾಪಾರಿಗಳಿಗೆ ಪಾಲಿಕೆ ಖಡಕ್ ಎಚ್ಚರಿಕೆ



ಮೈಸೂರು, ಜು.22(ಆರ್‌ಕೆ)– ತೆರವುಗೊಳಿಸಿದ ಫುಟ್‌ಪಾತ್ ಮೇಲೆ ಮತ್ತೆ ವ್ಯಾಪಾರ ಆರಂಭಿಸಿದರೆ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗುವುದು ಎಂದು ಮೈಸೂರು ಮಹಾ ನಗರಪಾಲಿಕೆ ಅಧಿಕಾರಿಗಳು ಖಡಕ್ ಎಚ್ಚರಿಕೆ ನೀಡಿದ್ದಾರೆ.

ತಾವು ಮೇಯರ್ ಶಿವಕುಮಾರ್ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದೇವೆ. ಅವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆಂಬ ಸಬೂಬು ನೀಡಿ ಕೆಲವರು ಇಂದು ಮತ್ತೆ ಫುಟ್‌ಪಾತ್ ಮೇಲೆ ಅಂಗಡಿ ಹಾಕಿ ವ್ಯಾಪಾರ ಮಾಡಲು ಮುಂದಾಗಿದ್ದರಾದರೂ, ಅದನ್ನು ಗಮನಿಸಿದ ಪಾಲಿಕೆ ಅಧಿಕಾರಿಗಳು, ಸ್ಥಳಕ್ಕೆ ತೆರಳಿ, ತೆರವುಗೊಳಿಸಿ ಫುಟ್‌ಪಾತ್‌ನಲ್ಲಿ ಮತ್ತೆ ವ್ಯಾಪಾರ ಮಾಡಬಾರದೆಂದು ಎಚ್ಚರಿಕೆ ನೀಡಿದರು. ಅರಮನೆ ಸುತ್ತಲಿನ ಪ್ರದೇಶ, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ (ಬಾಟಾ ಶೋ ರೂಂವರೆಗೆ), ಓಲ್ಡ್ ಬ್ಯಾಂಕ್ ರಸ್ತೆ, ಮಕ್ಕಾಜಿ ಚೌಕ, ಗಾಂಧಿ ವೃತ್ತ, ಪುರಭವನದ ಮುಂಭಾಗದ ಪಾದಚಾರಿ ರಸ್ತೆಗಳಲ್ಲಿ ಕಳೆದ ನಾಲ್ಕು ದಿನಗಳಿಂದ ಕಾರ್ಯಾಚರಣೆ ನಡೆಸಿದ ಪಾಲಿಕೆ ಅಧಿಕಾರಿಗಳು ಫುಟ್‌ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸಿದ್ದರು.

ಇಂದು ಸಹ ಕಾರ್ಯಾಚರಣೆ ಮುಂದುವರಿಸಿದ ಅವರು, ಪುನಃ ಅಂಗಡಿ ಹಾಕಿಕೊಂಡಿದ್ದವರನ್ನು ತೆರವುಗೊಳಿಸಿ, ವ್ಯಾಪಾರಿಗಳಿಗೆ ದಂಡ ವಿಧಿಸುವ ಎಚ್ಚರಿಕೆ ನೀಡಿದರು. ಇನ್ನೂ ಒಂದು ವಾರದವರೆಗೂ ಡಿ.ದೇವರಾಜ ಅರಸು ರಸ್ತೆ, ಶಿವರಾಂಪೇಟೆ ರಸ್ತೆ, ಧನ್ವಂತರಿ ರಸ್ತೆ, ಅಶೋಕ ರಸ್ತೆ, ಇರ್ವಿನ್ ರಸ್ತೆ ಕೆ.ಟಿ. ಸ್ಟ್ರೀಟ್, ಬಿ.ಎನ್. ರಸ್ತೆಗಳಲ್ಲಿ ಫುಟ್‌ಪಾತ್ ಅಂಗಡಿ ತೆರವು ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ಹೊಸ ಸಂಗ್ರಹ ಸ್ಪಾರ್ಕಲ್ ಆಫ್ ಹೆವನ್ ಬಿಡುಗಡೆ



ಮೈಸೂರು, ಜು. 22– ಮೈಸೂರು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ವಿಶ್ವದ ಅತ್ಯಂತ ವಿಶ್ವಾಸಾರ್ಹ ಮತ್ತು ಪ್ರಮುಖ ಆಭರಣ ಚಿಲ್ಲರೆ ಕಂಪನಿಗಳಲ್ಲಿ ಒಂದಾಗಿದ್ದು, ಮೈನ್ ಡೈಮಂಡ್ ಜ್ಯುವೆಲ್ಲರಿ ಎಂಬ ಉಪ–ಬ್ರಾಂಡ್‌ನಿಂದ ತನ್ನ ಇತ್ತೀಚಿನ ಸಂಗ್ರಹವಾದ 'ಸ್ಪಾರ್ಕಲ್ ಆಫ್ ಹೆವನ್' ಅನ್ನು ಬಿಡುಗಡೆ ಮಾಡಿದೆ.

ಈ ಸಂದರ್ಭದಲ್ಲಿ ಗ್ರಾಹಕರು ಹಾಗೂ ರೂಪದರ್ಶಿಗಳಾದ ಅಂಕಿತ, ನಿತ್ಯ, ಎಚ್.ಎಸ್. ನಿಧಿ, ಸೌಂದರ್ಯಾ, ಲಕ್ಷ್ಯ, ದಕ್ಷಿಣ ವಲಯ ಮತ್ತು ಮೈಸೂರು ಶೋ ರೂಂ ಮಳಿಗೆ ಮುಖ್ಯಸ್ಥ ಶರಪುದ್ದೀನ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಅಧ್ಯಕ್ಷ ಎಂ.ಪಿ.ಅಹಮ್ಮದ್ ಮಾತನಾಡಿ, ಗ್ರಾಹಕರಿಗೆ 'ಸ್ಪಾರ್ಕಲ್ ಆಫ್ ಹೆವನ್' ಸಂಗ್ರಹವನ್ನು ಪರಿಚಯಿಸಲು ಸಂತಸವಾಗುತ್ತಿದೆ. ಮಲಬಾರ್‌ನ ಎಲ್ಲಾ ವಿಶೇಷ ಸಂಗ್ರಹಗಳಂತೆ ಈ ಸಂಗ್ರಹದ ಪ್ರತಿಯೊಂದು ಆಭರಣವನ್ನು ಪಾಲಿಸಲಾಗುವುದು. ಗುಣಮಟ್ಟದಲ್ಲಿ ಯಾವುದೇ ರಾಜಿಯಿಲ್ಲದ ವಜ್ರದ ಆಭರಣಗಳು ನಮ್ಮ ಗ್ರಾಹಕರ ವಿಶ್ವಾಸವನ್ನು ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದರು.

'ಸ್ಪಾರ್ಕಲ್ ಆಫ್ ಹೆವನ್' ಸಂಗ್ರಹವು ಮಲಬಾರ್‌ನ ವಿನ್ಯಾಸದ ತೇಜಸ್ಸು ಮತ್ತು ಸಾಟಿಯಿಲ್ಲದ ಕರಕುಶಲತೆಯನ್ನು ಪ್ರತಿನಿಧಿಸುತ್ತದೆ. ಆಧುನಿಕ ತಂತ್ರಜ್ಞಾನದೊಂದಿಗೆ ಸಮಕಾಲೀನ, ಟೈಮ್ಲೆಸ್, ಟ್ರೆಂಡ್–ಸೆಟ್ಟಿಂಗ್ ಆಭರಣಗಳನ್ನು ರೂಪಿಸಲು ಬ್ರ್ಯಾಂಡ್‌ನ ಬದ್ಧತೆ ಪ್ರತಿಬಿಂಬಿಸುತ್ತದೆ. ಅಸಾಧಾರಣ ಕಲಾತ್ಮಕತೆಯು ಈ ಸಂಗ್ರಹವನ್ನು ನಿಜವಾದ ಮೇರುಕೃತಿಯನ್ನಾಗಿ ಮಾಡುತ್ತದೆ. ಪ್ರಪಂಚದಾದ್ಯಂತದ ಆಭರಣ ಉತ್ಸಾಹಿಗಳ ಆಸೆಗಳನ್ನು ಪೂರೈಸುತ್ತದೆ ಎಂದರು.

ಮನೆ ಯಜಮಾನ, ಸಮುದಾಯ ನಾಯಕರಿಗೆ ತಾಯ್ತನದ ಹೃದಯವಿರಲಿ



ಮೈಸೂರು,ಜು.22(ಎಸ್‌ಪಿಎನ್)– ಕುಟುಂಬದ ಯಜಮಾನ ಹಾಗೂ ಸಮುದಾಯದ ಪ್ರಮುಖರಿಗೆ ತಾಯ್ತನದ ಹೃದಯವಿರಬೇಕು. ಆಗ ಮಾತ್ರ ಕುಟುಂಬ ಮತ್ತು ಸಮುದಾಯದಲ್ಲಿ 'ಸಮಾನತೆ' ಕಾಣಲು ಸಾಧ್ಯ ಎಂದು ಆಧ್ಯಾತ್ಮ ಚಿಂತಕ ಮತ್ತು ನಿವೃತ್ತ ಮುಖ್ಯ ಅಭಿಯಂತರ ಶಂಕರ ದೇವನೂರು ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದಲ್ಲಿನ ಕಿರು ರಂಗಮಂದಿರದಲ್ಲಿ ಪಯಣ ಸಂಸ್ಥೆ ಕಲಾವಿದರು ಅಭಿನಯಿಸಿರುವ, ರಂಗಕರ್ಮಿ ಶ್ರೀಜಿತ್ ಸುಂದರಂ ನಿರ್ದೇಶಿಸಿರುವ 'ತಲ್ಕಿ' ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದರು. 12ನೇ ಶತಮಾನದ ಶರಣರು ಕುಟುಂಬದಲ್ಲಿ, ಸಮಾಜದಲ್ಲಿ ಹಾಗೂ ಇಡೀ ಜಗತ್ತಿನಲ್ಲಿ ಸಮಾನತೆಗಾಗಿ ಹೋರಾಟ ರೂಪಿಸಿದ್ದರು. ಅವರು ಪ್ರತಿಪಾದಿಸಿದ ಸಮಾನತೆ ಹೋರಾಟ ಇಂದಿಗೂ ವಿವಿಧ ಮಜಲುಗಳನ್ನು ಪಡೆದುಕೊಂಡಿದೆ. ಆದರೆ, ಮನೆಯ ಯಜಮಾನರು ತಾಯ್ತನದ ಗುಣಗಳನ್ನು ಬೆಳೆಸಿಕೊಂಡರೆ ಮಾತ್ರ ಸಮಾನತೆ ಕಾಣಲು ಸಾಧ್ಯ ಎಂದು ಹೇಳಿದರು.

12ನೇ ಶತಮಾನದ ವಚನಕಾರರು, ತಮ್ಮ ಅನುಭವಗಳನ್ನು ವಚನಗಳ ಮೂಲಕ ಪ್ರಸ್ತುತಪಡಿಸಿದ್ದಾರೆ. ಇಂದಿಗೂ ಅದರ ಮಹತ್ವ ಅರಿವಿಗೆ ಬರುತ್ತಿದೆ. ಜಗತ್ತಿನಲ್ಲಿ ತಾಯ್ತನದ ಕುರಿತು ಅನೇಕ ವಿಮರ್ಶೆಗಳು ಬಂದಿವೆ. ತಾಯಿ ಹೃದಯ ಎಲ್ಲರನ್ನೂ ಆಕರ್ಷಿಸುತ್ತದೆ ಎಂದರು.

ತಲ್ಕಿ ನಾಟಕ ಕುರಿತು: ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ನೋವು, ನಲಿವು, ಸಂಸ್ಕೃತಿಯನ್ನು ಈ ನಾಟಕ ಒಳಗೊಂಡಿದೆ. ಈ ನಾಟಕದಲ್ಲಿ ಅಭಿನಯಿಸುವವರೆಲ್ಲಾ 50 ವರ್ಷ ಮೀರಿದವರೇ ಆಗಿದ್ದು, ಈ ನಾಟಕದಲ್ಲಿ ಕೆಲವೊಮ್ಮೆ ಈ ಸಮುದಾಯದವರೇ ಬಳಸುವ ವಿಶಿಷ್ಟವಾದ ಲಿಪಿ ಇಲ್ಲದ ಪದ ಬಳಕೆಯೂ ಇದೆ. 'ತಲ್ಕಿ' ಎಂದರೆ ಲೈಂಗಿಕ ಅಲ್ಪಸಂಖ್ಯಾತರ ಭಾಷೆಯಲ್ಲಿ 'ಒಂದು ಊಟದ ಪದ್ಧತಿ'. ಈ ವೇಳೆ ಪಯಣ ಸಂಸ್ಥೆಯ ಸದಸ್ಯರಾದ ಸವಿತಾ, ತ್ರಿಮೂರ್ತಿ ಇದ್ದರು.

ನಿಧನ

ಕೆ.ಚಂದ್ರಶೇಖರಯ್ಯ



ಮೈಸೂರು,ಜು.22–ಮೈಸೂರಿನ ಜೆ.ಪಿ.ನಗರ ನಿವಾಸಿ ಕೆಲ್ಲಂಗೆರೆ ಚಂದ್ರಶೇಖರಯ್ಯ (96) ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಮೈಸೂರಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ಕೆಲ್ಲಂಗೆರೆ ಗ್ರಾಮದವರಾಗಿದ್ದು, ಹಾಸನ ಮತ್ತು ಹೊಳೆನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸಿದ್ದರು.

ಜಿ. ಮೋಹನ್‌ರಾವ್



ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಹಾಗೂ ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ ಜಿ.ಮೋಹನ್‌ರಾವ್ (74) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಎನ್.ಆರ್. ಮೊಹಲ್ಲಾದ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2024ರ ಲೋಕಸಭೆ ಚುನಾವಣೆ: ನಾಳೆ ಹೈದರಾಬಾದ್‌ನಿಂದ ಮೈಸೂರಿಗೆ ಬರಲಿವೆ ಹೊಸ ಇವಿಎಂ, ವಿವಿ ಪ್ಯಾಟ್‌ಗಳು

ಮುಂದಿನ ವಾರ ತಜ್ಞ ಇಂಜಿನಿಯರ್‌ಗಳ ತಂಡದಿಂದ ಯಂತ್ರಗಳ ಪರಿಶೀಲನೆ, ನೋಡಲ್ ಅಧಿಕಾರಿಯಾಗಿ ಮತ್ತೆ ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್‌ಗೆ ಜವಾಬ್ದಾರಿ



ದಿನೇಶ್‌ಕುಮಾರ್

ಮೈಸೂರು, ಜು. 22(ಆರ್‌ಕೆ)– 2024ರ ಲೋಕಸಭಾ ಚುನಾವಣೆಗೆ ಭಾರತ ಚುನಾವಣಾ ಆಯೋಗ ಮತ್ತು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳು ಸಿದ್ಧತೆ ಆರಂಭಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ರಾಘವೇಂದ್ರ ನಿರ್ದೇಶನದಂತೆ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಮುಂಬರುವ ಲೋಕಸಭಾ ಚುನಾವಣಾ ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ. ಕಳೆದ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಇವಿಎಂ ನೋಡಲ್ ಅಧಿಕಾರಿಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರಿಗೆ ಮುಂಬರುವ ಲೋಕಸಭಾ ಚುನಾವಣೆಯ ಇವಿಎಂ (ವಿದ್ಯುನ್ಮಾನ ಮತ ಯಂತ್ರ) ನೋಡಲ್ ಅಧಿಕಾರಿ ಜವಾಬ್ದಾರಿ ವಹಿಸಲಾಗಿದೆ. ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ತರಲೆಂದು ಅಧಿಕಾರಿಗಳು ಹಾಗೂ ಪೊಲೀಸರೊಂದಿಗೆ ದಿನೇಶ್‌ಕುಮಾರ್ ಹೈದರಾಬಾದ್‌ಗೆ ತೆರಳಿದರು. ಬೆಂಗಳೂರಿಗೆ ರಸ್ತೆ ಮೂಲಕ ತೆರಳಿದ ಅವರು, ಅಲ್ಲಿಂದ ವಿಮಾನದಲ್ಲಿ ರಾತ್ರಿ ಹೈದರಾಬಾದ್ ತಲುಪಿದ್ದಾರೆ. ಹೈದರಾಬಾದ್‌ನ ಮೆ॥



ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (ECIL)ನಲ್ಲಿ 3 ಟ್ರಕ್‌ಗಳಿಗೆ ತಲಾ 500 ಇವಿಎಂ, ವಿವಿ ಪ್ಯಾಟ್‌ಗಳಂತೆ 1,500 ಯಂತ್ರಗಳನ್ನು ಲೋಡ್ ಮಾಡಿಸಿಕೊಂಡು ನಾಳೆ ಸಂಜೆ ಹೊರಟು, ಭಾನುವಾರ ಮಧ್ಯಾಹ್ನದ ವೇಳೆಗೆ ಮೈಸೂರು ತಲುಪುವರು. ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಂಕೀರ್ಣದ ಬಳಿಯಿರುವ ಮತಯಂತ್ರಗಳ ಉಗ್ರಾಣದಲ್ಲಿ ಇರಿಸಲಾಗುವುದು. ಮುಂದಿನ ವಾರ ಮೆ॥ ಎಲೆಕ್ಟ್ರಾನಿಕ್ಸ್ ಕಾರ್ಪೋ ರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ ತಜ್ಞ ಇಂಜಿನಿಯರ್‌ಗಳು ಮೈಸೂರಿಗೆ ಬಂದು ಇವಿಎಂ, ವಿವಿ ಪ್ಯಾಟ್‌ಗಳ ಪ್ರಥಮ ಹಂತದ ಪರಿಶೀಲನೆ (First Level Checking) ಮಾಡುವರು. ಮೈಸೂರು ಜಿಲ್ಲೆಯಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ 5,594 ಬ್ಯಾಲೆಟ್ ಯೂನಿಟ್, 3,901 ಕಂಟ್ರೋಲ್ ಯೂನಿಟ್, 4,138 ವಿವಿ ಪ್ಯಾಟ್‌ಗಳನ್ನು ಬಳಸಲು ನಿಗದಿಪಡಿಸಲಾಗಿದೆ.

ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಎಲೆಕ್ಷನ್ ಪಿಟಿಷನ್ (ಸಂಖ್ಯೆ 13/2023) ಬಾಕಿ ಇರುವುದರಿಂದ ವರುಣ ಕ್ಷೇತ್ರ ಹೊರತುಪಡಿಸಿ 2023ರ ವಿಧಾನಸಭಾ ಚುನಾವಣೆಯಲ್ಲಿ ಬಳಸಿಕೊಳ್ಳುವಂತೆ ಚುನಾವಣಾ ಆಯೋಗವು ನಿರ್ದೇಶನ ನೀಡಿರುವುದರಿಂದ ಅಗತ್ಯವಿರುವ ವಿದ್ಯುನ್ಮಾನ ಮತಯಂತ್ರಗಳನ್ನು ಹೈದರಾಬಾದ್‌ನಿಂದ ತರಲಾಗುತ್ತಿದೆ.

ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಅವಧಿ ಆಗಸ್ಟ್ 1ರವರೆಗೆ ವಿಸ್ತರಣೆ





ಮೈಸೂರು,ಜು.22(ಆರ್‌ಕೆ)– ಮೈಸೂರಿನ ಹೊರಪರಿಧಿಯ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಯೋಜನೆಗಾಗಿ ಡಿಪಿಆರ್ (Detailed Project Report) ತಯಾರಿಸಲು ಕರೆದಿದ್ದ ಟೆಂಡರ್ ಅವಧಿಯನ್ನು ಆಗಸ್ಟ್ 1ರವರೆಗೆ ವಿಸ್ತರಿಸಲಾಗಿದೆ.

ಉದ್ದೇಶಿತ ಯೋಜನೆಯ ವಿನ್ಯಾಸದಂತೆ ಸಮಗ್ರ ಯೋಜನಾ ವರದಿ ತಯಾರಿಸಲು ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳಿಗೆ ಡಿಪಿಆರ್ ತಯಾರಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಗೆ ಜವಾಬ್ದಾರಿ ವಹಿಸಲು ಜುಲೈ 8ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಗ್ಲೋಬಲ್ ಟೆಂಡರ್ ಕರೆದಿತ್ತು. ಅದರಲ್ಲಿ ಸುಮಾರು 105ರಿಂದ 110 ಕಿ.ಮೀ. ಉದ್ದದ ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ಸಲ್ಲಿಸಲು ಆಸಕ್ತಿ ಇರುವ ಅರ್ಹ ಸಂಸ್ಥೆಗಳು ಜುಲೈ 23ರೊಳಗಾಗಿ ಟೆಂಡರ್‌ನಲ್ಲಿ ಭಾಗವಹಿಸಬಹುದೆಂದು ತಿಳಿಸಲಾಗಿತ್ತು.

ಆದರೆ ಈವರೆಗೆ ಒಂದು ಸಂಸ್ಥೆ ಮಾತ್ರ ಆಸಕ್ತಿ ತೋರಿರುವ ಕಾರಣ, ಜುಲೈ 23ಕ್ಕೆ ಇದ್ದ ಕಡೇ ದಿನವನ್ನು ಆಗಸ್ಟ್ 1ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ಪೆರಿಫೆರಲ್ ರಿಂಗ್ ರಸ್ತೆ ಹಾದು ಹೋಗುವ ಜಾಗ ಗುರ್ತಿಸಲಾಗಿದ್ದು, ತಾತ್ಕಾಲಿಕ ಅಲೈನ್‌ಮೆಂಟ್ ಮಾಡಿರುವುದರಿಂದ ಯಾವುದೇ ಗ್ರಾಮದೊಳಗೆ ಹಾದು ಹೋಗದಂತೆ, ನದಿ, ಅರಣ್ಯ ಪ್ರದೇಶ, ಕಾಲುವೆ, ಕೆರೆ ಕಟ್ಟೆಗಳು ಅಡ್ಡ ಬಂದಲ್ಲಿ ಪರ್ಯಾಯ ವ್ಯವಸ್ಥೆ, ಹಾಲಿ ಇರುವ ರಸ್ತೆಗಳನ್ನು ಬಳಸಿಕೊಳ್ಳಲು ಸಾಧ್ಯವಾದರೆ ಆ ಮಾದರಿಯ ರಸ್ತೆಗಳು ಎಷ್ಟು ದೂರ ಲಭ್ಯವಿದೆ, ಸರ್ಕಾರಿ ಜಾಗವನ್ನು ಹೊರತುಪಡಿಸಿ ಪೆರಿಫೆರಲ್ ರಿಂಗ್ ರಸ್ತೆಗೆ ಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಭೂಮಿಯ ಪ್ರಮಾಣ, ತಗಲುವ ವೆಚ್ಚದ ಬಗ್ಗೆ ಡಿಪಿಆರ್‌ನಲ್ಲಿ ಮಾಹಿತಿ ನೀಡಬೇಕಾಗಿದೆ.

ವಿದ್ಯುತ್ ಸ್ಥಾವರ, ಹೈಟೆನ್ಷನ್ ಮಾರ್ಗ ಸ್ಥಳಾಂತರದ ವೆಚ್ಚ, ಫಲ ಬಿಡುವ ಮರಗಳು, ಬೆಲೆಬಾಳುವ ಮರಗಳು, ಕಟ್ಟಡ, ಯಾವುದೇ ಬಗೆಯ ನಿರ್ಮಾಣಗಳನ್ನು ತೆರವುಗೊಳಿಸಬೇಕಾದಲ್ಲಿ ಪರಿಹಾರದ ಹಣ, ಪೆರಿಫೆರಲ್ ರಿಂಗ್ ರಸ್ತೆ ಮೇನ್ ಕಾರಿಡಾರ್, ಸರ್ವಿಸ್ ರಸ್ತೆ ಮೇಲ್ಸೇತುವೆ, ಕೆಳ ಸೇತುವೆ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಒದಗಿಸಲು ತಗಲುವ ವೆಚ್ಚದ ಬಗ್ಗೆ ಹಾಗೂ ಕಾರ್ಯಸಾಧ್ಯತಾ ವರದಿ ಒಳಗೊಂಡಂತೆ ಡಿಪಿಆರ್ ತಯಾರಿಸಲು ಮುಡಾ ಟೆಂಡರ್ ಆಹ್ವಾನಿಸಿದೆ.

ಡಿಪಿಆರ್ ತಯಾರಿಸುವ ಸಂಬಂಧ ಮುಡಾ ವಾರ್ಷಿಕ ಆಯ–ವ್ಯಯದಲ್ಲಿ 10 ಕೋಟಿ ರೂ. ಅನುದಾನ ಮೀಸಲಾಗಿರಿಸಲಾಗಿದ್ದು, ಯಾವ ಸಂಸ್ಥೆ ಕಡಿಮೆ ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಲು ಮುಂದೆ ಬರುತ್ತದೋ ಆ ಸಂಸ್ಥೆಗೆ ಪೆರಿಫೆರಲ್ ರಿಂಗ್ ರೋಡ್ ಸಮಗ್ರ ಯೋಜನಾ ವರದಿ ತಯಾರಿಸುವ ಜವಾಬ್ದಾರಿ ಒಪ್ಪಿಸಲಾಗುವುದು.

ಯಶಸ್ವಿ ಬಿಡ್ಡುದಾರ ಸಂಸ್ಥೆಯ ತಜ್ಞ ಇಂಜಿನಿಯರ್‌ಗಳು ಸ್ಥಳದಲ್ಲಿ ಸಮೀಕ್ಷೆ ನಡೆಸಿ ಪ್ರಾಯೋಗಿಕವಾಗಿ ಪರಿಶೀಲನೆ ಮಾಡಿ ಯೋಜನೆ ಅನುಷ್ಠಾನಕ್ಕೆ ಸ್ಪಷ್ಟ ಚಿತ್ರಣದೊಂದಿಗೆ ವರದಿ ಸಿದ್ಧಪಡಿಸಿ ಮುಡಾಗೆ ಒಪ್ಪಿಸಬೇಕಾಗಿದೆ.

ಎನ್‌ಸಿಸಿಎ ಐಡಿಎಸ್‌ಎಸ್‌ಸಿ ಶಿಬಿರದಲ್ಲಿ ಕೆ.ತೇಜಸ್ವಿನಿ ಉತ್ತಮ ಪ್ರದರ್ಶನ

ಮೈಸೂರು, ಜು. 22– ಮೈಸೂರಿನ ಗೋಕುಲಂ ಮೂರನೇ ಹಂತದಲ್ಲಿರುವ ಮೈಸೂರು ವೆಸ್ಟ್ ಲಯನ್ಸ್ ಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಕೆ. ತೇಜಸ್ವಿನಿ ಎನ್‌ಸಿಸಿ ವತಿಯಿಂದ ಏರ್ಪಡಿಸಿರುವ ಐಡಿಎಸ್‌ಎಸ್‌ಸಿ ಶಿಬಿರದಲ್ಲಿ ಕರ್ನಾಟಕ ಮತ್ತು ಗೋವಾ ವತಿಯಿಂದ ಭಾಗವಹಿಸಿದ್ದರು.

ಈ ರಾಷ್ಟ್ರೀಯ ಮಟ್ಟದ ಶಿಬಿರದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಈಕೆಯು ಐಡಿಎಸ್‌ಎಸ್‌ಸಿ ಶಿಬಿರದಲ್ಲಿ ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ಈಕೆಯ ಮುಂದಿನ ಭವಿಷ್ಯ ಉಜ್ವಲವಾಗಿರಲೆಂದು ಶಾಲೆಯ ಪ್ರಾಂಶುಪಾಲ ಶಿವಕುಮಾರ್, ಶಾಲಾ ಆಡಳಿತಾಧಿಕಾರಿ ತ್ರಿನೇಶ್, 14 ಕೆಎಆರ್ ಬಿಎನ್ ಕಮ್ಯಾಂಡಿಂಗ್ ಆಫೀಸರ್ ಮನೀಷ್ ಪ್ರಸಾದ್, ಸುಬ್ಬೇದರ್, ಮೇಜರ್ ಗೋವಿಂದಪ್ಪ ಶುಭ ಹಾರೈಸಿದ್ದಾರೆ.




ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜು.22–2023–24ನೇ ಸಾಲಿನ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಾಗಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಶಿಕ್ಷಕರು ಅರ್ಜಿ ಸಲ್ಲಿಸಲು ಆ.7 ಕೊನೆಯ ದಿನವಾಗಿದೆ ಎಂದು ಟಿನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಾಮಂದಿರದಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಅಭಿನಂದಿಸಿದರು. ಈ ವೇಳೆ ಚೆಟ್ಟಿಹುಂಡಿ ಸುನಿಲ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.7.2023 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಗೋಲ್ಡನ್ ಕ್ರೀಪರ್ ಎಂಟರ್‌ಪ್ರೈಸಸ್ :** ವಿನೂತನ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳ 'ದಿ ಜ್ಯುವೆಲರಿ ಶೋ', ಸ್ಥಳ: ರ್‍ಯಾಡಿಸನ್ ಬ್ಲೂ ಪ್ಲಾಜಾ, ಬೆಳಗ್ಗೆ 10 ರಿಂದ.

■ **ಡಾ. ವಿ.ಲಕ್ಷ್ಮೀನಾರಾಯಣ್ ಅಭಿನಂದನಾ ಸಮಿತಿ :** ಅಭಿನಂದನಾ ಸಮಾರಂಭ ಮತ್ತು 'ನಾರಾಯಣ ನಮನ' ಅಭಿನಂದನಾ ಗ್ರಂಥ ಲೋಕಾರ್ಪಣೆ, ಉದ್ಘಾಟನೆ: ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಅಭಿನಂದನಾ ಗ್ರಂಥ ಲೋಕಾರ್ಪಣೆ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ, ಅಧ್ಯಕ್ಷತೆ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ತ ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ವಿಶೇಷ ಆಹ್ವಾನಿತರು: ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಮಾಜಿ ಅಧ್ಯಕ್ಷ ರಘು ಆರ್.ಕೌಟಿಲ್ಯ, ಕರ್ನಾಟಕ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಸ್ಥಳ: ಗಾನಭಾರತಿ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಅಖಿಲ ಭಾರತ ಅಂಚೆ ಇಲಾಖೆ ಎಸ್‌ಸಿ, ಎಸ್‌ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ, ಉದ್ಘಾಟನೆ : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಲಕ್ಷ್ಮಿನಾರಾಯಣ, ಉಪಸ್ಥಿತರು : ಸಂದೇಶ್ ಮಹದೇವಪ್ಪ, ಡಾ. ಏಂಜಲ್‌ರಾಜ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10ಕ್ಕೆ.

■ **ಶ್ರೀ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯ ವ್ರತ ಸಮಾರಂಭ:** ಬೃಹತ್ ಉಚಿತ ಆಯುರ್ವೇದ ತಪಾಸಣಾ ಶಿಬಿರ, ಸಾನ್ನಿಧ್ಯ ಶ್ರೀ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಆರ್‌ಜಿಯುಹೆಚ್‌ಎಸ್, ಬೆಂಗಳೂರು ಉಪಕುಲಪತಿ ಡಾ.ಎಂ.ಕೆ.ರಮೇಶ್, ಎಂಎಂಸಿಆರ್‌ಐ ನಿರ್ದೇಶಕಿ ಡಾ.ದಾಕ್ಷಾಯಿಣಿ, ಜಿಎಎಂಸಿ ಪ್ರಾಚಾರ್ಯ ಡಾ.ರಾಧಾಕೃಷ್ಣ ರಾಮರಾವ್, ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ

■ **ಡಾ.ಎಚ್.ತಿಪ್ಪೇರುದ್ರಸ್ವಾಮಿ ಸಂಸ್ಮರಣಾ ಸಮಿತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ನಗರ ಹಾಗೂ ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ, ಸಂವಹನ ಪ್ರಕಾಶನ:** ಡಾ.ಎಚ್.ತಿಪ್ಪೇರುದ್ರಸ್ವಾಮಿ 95ರ ಸಂಸ್ಮರಣೆ ದತ್ತಿ ಉಪನ್ಯಾಸ ಮತ್ತು ಸಂಸ್ಮರಣಾ ಕೃತಿಗಳ ಲೋಕಾರ್ಪಣೆ, ಸಾನ್ನಿಧ್ಯ ಮತ್ತು ಬಯಲು ಬೆಳಗು ಕೃತಿ ಲೋಕಾರ್ಪಣೆ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ ಮತ್ತು ನೆನಪಿನ ಬುತ್ತಿ ಕೃತಿ ಲೋಕಾರ್ಪಣೆ: ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿಗಳು: ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ, ಅಧ್ಯಕ್ಷತೆ: ಸಾಹಿತಿ ಡಾ.ವೀರಣ್ಣ ರಾಜೂರ, ಗೌರವ ಅತಿಥಿಗಳು: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಶ್ರೀ ಚಾಮರಾಜೇಂದ್ರ ಮೃಗಾಲಯ:** 31ನೇ ಯುವ ಸಂಘಟನೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಸ್ಥಳ: ಮೃಗಾಲಯದ ಆಂಫಿಥಿಯೇಟರ್, ಬೆಳಗ್ಗೆ 10.30ಕ್ಕೆ.

■ **ಶ್ರೀ ಜಲವಾಸುದೇವ ನಾಟಕ ಸಭಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಸ್ತ್ರೀಯರಿಂದ ಅಭಿನಯಿಸಲ್ಪಡುತ್ತಿರುವ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ, ಅಧ್ಯಕ್ಷತೆ: ಶ್ರೀ ಜಿ.ವಿ.ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಅದಮ್ಯ ಚೇತನ ಫೌಂಡೇಷನ್ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ವಿಶೇಷ ಆಹ್ವಾನಿತರು: ಶಾಸಕ ಟಿ.ಎಸ್.ಶ್ರೀವತ್ಸ, ಆಹ್ವಾನಿತರು: ಎಸ್.ನಾರಾಯಣ್, ಡಾ.ಪೂರ್ಣಿಮಾ ಮಧುಸೂದನ್, ಬಿ.ನೀಲಾಂಬಿಕೆ ಮಹೇಶ್, ಕೆ.ಪಿ.ನಾಗು ಕೆಂಪಣ್ಣ, ಓಂ ಶ್ರೀನಿವಾಸ್, ಅನನ್ಯ ಭಟ್, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ನಗರ ಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘ :** ಸರ್ವಸದಸ್ಯರ ಸಭೆ, ಸ್ಥಳ: ನಗರಪಾಲಿಕೆ ಆವರಣದ ಕಚೇರಿ, ಬೆಳಗ್ಗೆ 11ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು, ತಿಲಕ್‌ನಗರ:** ಮೈಸೂರಿನ ತಿಲಕ್‌ನಗರದಲ್ಲಿರುವ ಲಯನ್ಸ್ ಕ್ಲಬ್ ಮೈಸೂರಿನ 2023–24ನೇ ಸಾಲಿನ ಪದಗ್ರಹಣ ಸಮಾರಂಭ ಮತ್ತು ವೈದ್ಯರ ದಿನಾಚರಣೆ, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಪದಗ್ರಹಣ ಅಧಿಕಾರಿ: ಮಾಜಿ ರಾಜ್ಯಪಾಲರಾದ ಲಯನ್ ಡಾ.ಜಿ.ಎ. ರಮೇಶ್, ಉಪಸ್ಥಿತರು: ಸುಬ್ರಮಣ್ಯ, ಡಾ.ಪ್ರೀತಿ, ಮತಿದೇವಕುಮಾರ್, ಗಿರೀಶ್, ಹೆಚ್.ಬಿ.ಸುರೇಶ್, ಶಿವಕುಮಾರ್, ಮುಕೇಶ್, ಲೋಕೇಶ್, ಶಿವಣ್ಣ, ಸ್ಥಳ: ದಿ ಕಬಾನ ಗಾರ್ಡನ್, ಬೆಳಗ್ಗೆ 11ಕ್ಕೆ.

■ **ಕನ್ನಡ ಸಾಹಿತ್ಯ ಜಾಗೃತಿ ಸಮಿತಿ :** ರಾಜ್ಯ ಮಟ್ಟದ ಸಾಹಿತ್ಯಾತ್ಮಕ ಜಾನಪದ ಹಾಗೂ ಸಾಂಸ್ಕೃತಿಕ ಸದಂಸ್ಥೆ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಜಿ. ಓಂಪ್ರಕಾಶ್, ಹಿರಿಯ ಸಾಹಿತಿ ಭೇರ್ಯ ರಾಮಕುಮಾರ್, ನಗರಸಭೆ ಸದಸ್ಯೆ ಶ್ರೀಮತಿ ಲತಾ ಚಂದ್ರಶೇಖರ್, ಗೌರೀಶ ಗಾಂವಕರ್, ಅಧ್ಯಕ್ಷತೆ : ಸಮಿತಿ ಅಧ್ಯಕ್ಷೆ ಎಂ.ಡಿ. ಛಾಯಾ, ಸ್ಥಳ:ಬೃಂದಾವನ ಹಾಲ್, ಎ.ವಿ. ಆಸ್ಪತ್ರೆ ಹತ್ತಿರ, ಸಿದ್ಧಾರ್ಥನಗರ, ಬೆಳಗ್ಗೆ 11ಕ್ಕೆ.

■ **ಹೆಚ್.ವಿ. ರಾಜೀವ್ ಸ್ನೇಹ ಬಳಗ :** ಔಷಧಿ ಗಿಡಗಳನ್ನು ವಿತರಿಸುವ ಕಾರ್ಯಕ್ರಮ, ಸ್ಥಳ: ಸುಮಸೋಪಾನ ಉದ್ಯಾನವನ, ವಿಶ್ವಮಾನವ ಜೋಡಿ ರಸ್ತೆ, ಸಂಜೆ 4.30ಕ್ಕೆ.

■ **ಮುದ್ದುರಾಮ ಪ್ರತಿಷ್ಠಾನ :** ಮುದ್ದುರಾಮ ಪ್ರಶಸ್ತಿ ಪ್ರದಾನ, ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು : ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್, ಎಂ. ಮುತ್ತುಸ್ವಾಮಿ, ಮುಖ್ಯ ಅತಿಥಿಗಳು : ಶಿಕ್ಷಣ–ಸಂವಹನ ತಜ್ಞ, ಅಂಕಣಕಾರ ಡಾ. ಗುರುರಾಜ ಕರಜಗಿ, ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 4.15ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಸ್ವಾಮೀಜಿ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಶ್ರೀ ವ್ಯಾಸರಾಜ ಮಠ ಸೋಸಲೆ, ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಜೆ 6ರಿಂದ 7ರವರೆಗೆ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ ಪ್ರವಚನ, ಸ್ಥಳ: ಶ್ರೀ ಸೋಸಲೆ ವ್ಯಾಸರಾಜ ಮಠ, ಕೃಷ್ಣಮೂರ್ತಿಪುರಂ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ :** ಪಂಡಿತ್ ಕೆ.ಎಸ್. ಹಡಪದ ಇವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ ಹಾಗೂ ಕೆ.ಎಸ್. ಹಡಪದ ಪ್ರಶಸ್ತಿ ಪ್ರದಾನ ಸಮಾರಂಭ, ಸಂಜೆ 5.30ಕ್ಕೆ ಸಮೂಹ ತಬಲಾ ವಾದನ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಸಹಾಯಕ ಪ್ರಾಧ್ಯಾಪಕಿ ಡಾ. ಜಯದೇವಿ ಜಂಗಮಶೆಟ್ಟಿ, ಅಧ್ಯಕ್ಷತೆ : ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಮುಖ್ಯ ಅತಿಥಿಗಳು : ಗಾನಭಾರತೀ ಖಜಾಂಚಿ ಸಿ.ಎಸ್. ಜನಾರ್ಧನ್, ಸಂಜೆ 7ಕ್ಕೆ ಕು. ವಿಜಯಲಕ್ಷ್ಮಿ ಪೂಜೇರ ಅವರಿಂದ ಗಾಯನ, ಭೀಮಶಂಕರ ಬಿದನೂರ –ತಬಲಾ, ಮೃತ್ಯುಂಜಯ ಹಿರೇಮಠ–ಹಾರ್ಮೋನಿಯಂ, ಸಂಜೆ 7.30ಕ್ಕೆ ತಬಲಾ ಸೋಲೋ, ಕೆ.ಎಸ್. ಹಡಪದ ಪ್ರಶಸ್ತಿ ಪುರಸ್ಕೃತರಾದ ಸಾತಲಿಂಗಪ್ಪ ದೇಸಾಯಿಕಲ್ಲೂರ ಹಾಗೂ ಕು. ಮಳೆಮಲ್ಲೇಶ್ ಹೂಗಾರ ಮತ್ತು ರಘುನಂದನಗೋಪಾಲ್ ಹೂಗಾರ ಅವರಿಂದ ತಬಲಾ ತ್ರಯೋ ವಾದನ (ಜುಗಲ್‌ಬಂದಿ), ಭಾಗ್ಯಶ್ರೀ ಹೂಗಾರ–ಲೆಹರಾ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ.

■ **ರಂಗಾಯಣ:** ನುಡಿರಂಗ ಕಲಾವಿದರಿಂದ ಸಕುಬಾಯಿ ನಾಟಕ ಪ್ರದರ್ಶನ, ಬೆಳಕು: ಅರುಣ್ ಮೂರ್ತಿ, ವಿನ್ಯಾಸ, ನಿರ್ದೇಶನ: ಹುಲುಗಪ್ಪ ಕಟ್ಟೀಮನಿ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ–ಬಿ.ವಿ.ಜಯತೀರ್ಥ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ 8.30 ಕನ್ನಡದ ಲೇಖಕ ಹಾಗೂ ಇಂಗ್ಲೆಂಡಿನಲ್ಲಿ ವಿಮಾನ ಶಾಸ್ತ್ರ ತಂತ್ರಜ್ಞರಾಗಿರುವ ಯೋಗೀಂದ್ರ ಮರವಂತೆ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಶುದ್ಧೀಕರಣ ವಿಧಾನಗಳು ಕುರಿತು ಆಯುಷ್ ವೈದ್ಯಾಧಿಕಾರಿ ಡಾ.ಶಿವಕುಮಾರ್ ಟಿ.ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುವವರು ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಶ್ರೀ ಗುರುಕ್ಲಾಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30ಮಕ್ಕಳ ಮಂಟಪ– ಮುಖಾ ಮುಖಿ–ರಂಗ ಶಿಕ್ಷಣ ಅಥವಾ ನಾಟಕದಲ್ಲಿ ಅಭಿನಯ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ ರಂಗ ಶಿಕ್ಷಕಿ ಚಿತ್ರಾ ವೆಂಕಟರಾಜು ಭಾಗವಹಿಸುವ ಮಕ್ಕಳು ನಂದಿನಿ ಹಾಗೂ ಹೇಮಂತ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪುಷ್ಪಾ ವಿ.ಶಂಕರ್, 12.45 ಜನಪದ ಸಂಗೀತ–ಚಿಕ್ಕತಾಯಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಲಕ್ಷ್ಮೀಶ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಸುಂದರ ಕಾಂಡ–ಚೂಡಾಮಣಿ, ಪ್ರಸ್ತುತಿ–ಧರ್ಮಸ್ಥಳದ ಭುಜಬಲಿ ಮತ್ತು ತಂಡದವರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಕೆ.ಆರ್.ನಗರ ತಾಲೂಕು ಅಡಗೂರಿನ ಪಶುಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ.ವಿ.ಸುಷ್ಮಾ ಅವರೊಂದಿಗೆ ಸಂದರ್ಶನ, 7.45 ಕನ್ನಡದ ಲೇಖಕ ಹಾಗೂ ಇಂಗ್ಲೇಂಡಿನಲ್ಲಿ ವಿಮಾನ ಶಾಸ್ತ್ರ ತಂತ್ರಜ್ಞರಾಗಿರುವ ಯೋಗೀಂದ್ರ ಮರವಂತೆ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ ವೇದವಾಙ್ಮಯಕ್ಕೆ ಡಿಜಿಟಲ್ ವೇದಿಕೆ ಕಲ್ಪಿಸುವ ಪ್ರೊ.ಯೋಗಾನಂದ ಅವರೊಂದಿಗೆ ಸಂವಾದ ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ರವಿ ವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಪಂಡಿ ಫಲ್ಗುಣಿ ಮಿತ್ರಾ, ಧ್ರುಪದ್–ದಮಾರ್

ಮೈಸೂರು ಮಿತ್ರ

ಸಂವಿಧಾನ ನನ್ನ ರಕ್ಷಿಸಿತು, ಭೀಮ ಪರಿವಾರ ಬೆಂಬಲಕ್ಕೆ ನಿಂತಿತು

● ಹಿಂದಿನ ಪ್ರಕರಣವೊಂದರಲ್ಲಿ ಪ್ರಬಲ ಸಮುದಾಯದ ವಿರೋಧ ಎದುರಿಸಬೇಕಾಗಿ ಬಂದ ಪರಿಸ್ಥಿತಿ ನೆನೆದ ಸಂಗೀತ ನಿರ್ದೇಶಕ ಹಂಸಲೇಖ

● ಪ್ರಗತಿಪರರನ್ನು ದೂರ ಇಡಬೇಡಿ, ಅವಮಾನಿಸಬೇಡಿ ● ಸಚಿವ ಡಾ.ಹೆಚ್.ಸಿ.ಮಹದೇವಪ್ಪರ 'ಸಂವಿಧಾನದ ನೆರಳಿನಲ್ಲಿ' ಪುಸ್ತಕ ಬಿಡುಗಡೆ





ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ರಚಿಸಿರುವ "ಸಂವಿಧಾನದ ನೆರಳಿನಲ್ಲಿ" ಪುಸ್ತಕವನ್ನು ಚಲನಚಿತ್ರ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಸಾಹಿತಿ ಹಂಸಲೇಖ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಸಚಿವ ಹೆಚ್.ಸಿ.ಮಹದೇವಪ್ಪ, ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್ ಇನ್ನಿತರರನ್ನು ಕಾಣಬಹುದು. ಬಲಚಿತ್ರದಲ್ಲಿ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಿಕ್ಕಿರಿದು ತುಂಬಿದ್ದ ಸಭಿಕರು.

ಮೈಸೂರು,ಜು.22(ಬಿಎಲ್ ಯು)–ಇದೇ ಮೈಸೂರಿನಲ್ಲಿ ನಾನು ಊಟದ ವಿಚಾರವಾಗಿ ಆಡಿದ ಮಾತು ಕಿಡಿಯಾಗಿ ಹೊತ್ತಿ ದೊಡ್ಡ ವಿವಾದದ ಅಲೆ ಎದ್ದಾಗ ಸಂವಿಧಾನ ನನ್ನ ರಕ್ಷಿಸಿದರೆ, ಭೀಮ ಪರಿವಾರ ನನ್ನ ಬೆಂಬಲಕ್ಕೆ ನಿಂತಿತು ಎಂದು ಚಲನಚಿತ್ರ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಹಿಂದಿನ ಘಟನೆಯನ್ನು ಮೆಲುಕು ಹಾಕಿದರು.

ಮೈಸೂರಿನ ಕಲಾಮಂದಿರದಲ್ಲಿ ಇಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ರಚಿಸಿರುವ "ಸಂವಿಧಾನದ ನೆರಳಿನಲ್ಲಿ" ಪುಸ್ತಕ ಬಿಡುಗಡೆ ಮಾಡಿದ ನಂತರ ಮಾತನಾಡಿದ ಅವರು, ಊಟದ ವಿಚಾರವಾಗಿ ನಾನು ಆಡಿದ ಮಾತು ಕರೆಂಟ್‌ನಂತೆ ಜನರಿಗೆ ಅನುಭವವಾಯಿತು. ಆಗ ದೊಡ್ಡ ಸಮುದಾಯ ನನ್ನ ವಿರುದ್ಧವಾಗಿ ನಿಂತಿತು. ಆ ವೇಳೆ ಸಂವಿಧಾನ ನನ್ನ ರಕ್ಷಿಸಿತು. ಜೊತೆಗೆ ಚಾಮರಾಜನಗರದಿಂದ ಬೀದರ್ ತನಕ ಭೀಮ ಪರಿವಾರ ನನ್ನ ಬೆಂಬಲವಾಗಿ ನಿಂತಿತು ಎಂದು ಹಂಸಲೇಖ ಹೇಳಿದರು.

ಸಂವಿಧಾನ ದೊಡ್ಡ ವೃಕ್ಷ. ಇದರ ನೆರಳಿನಲ್ಲಿ ನಾವು ಮಲಗಿ ಕಣ್ಣು ಬಿಟ್ಟು ಕನಸು ಕಾಣಬೇಕು. ತರುವಾಯ ಆ ಕನಸನ್ನು ಸಾಕಾರಗೊಳಿಸಬೇಕು. ಈ ಮೂಲಕ ವ್ಯವಹರಿಸಬೇಕು, ಜೀವಂತವಾಗಿರಬೇಕು. ಶಿಕ್ಷಣ, ಸಂಘಟನೆ, ಹೋರಾಟದ ಘೋಷ ವಾಕ್ಯದಲ್ಲಿ ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ವೃಕ್ಷದಂತೆ ಇರುವ ಸಂವಿಧಾನದ ನೆರಳಿನಲ್ಲಿ ನಾವು ಸುಖವಾಗಿ ಬದುಕಿದ್ದೇವೆ. ಈ ಮೂಲಕ ಸಂವಿಧಾನ ನಮ್ಮ ಬದುಕನ್ನು ಬಂಗಾರವಾಗಿಸಿದೆ. ಇಂತಹ ಸಂವಿಧಾನವನ್ನು ನಾವು ರಕ್ಷಿಸಬೇಕು, ಸಂವಿಧಾನದ ತಿರುಳನ್ನು ನಾಡಿನ ಎಲ್ಲಾ ಜನರಿಗೆ ಅರ್ಥ ಮಾಡಿಸಬೇಕು. ಇದರ ಮೂಲಕ ತಳ ಸಮುದಾಯಗಳು ಮೇಲೆ ಬರಲು ಅವಕಾಶ ಮಾಡಿ ಕೊಡಬೇಕು ಎಂದು ಹಂಸಲೇಖ ಕರೆ ನೀಡಿದರು.

ಸೇವಾ ಮನೋಭಾವ ಇರುವ ರಾಜಕಾರಣಿ ಖಾತೆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ

● ಸಾಹಿತಿ, ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಮತ ● ಈಗಂತೂ ಪ್ರಬಲ ಖಾತೆಯೇ ಬೇಕೆಂದು ಮುನಿಸಿಕೊಳ್ಳುವವರ ಸಂಖ್ಯೆ ಜಾಸ್ತಿ ಇದೆ

ಮೈಸೂರು, ಜು.22(ಬಿಎಲ್ ಯು)– ಸರ್ಕಾರದಲ್ಲಿ ಪ್ರಬಲವಾದ ಖಾತೆ ಬೇಕೆಂದು ಬಹಳಷ್ಟು ರಾಜಕಾರಣಿಗಳು ಮುನಿಸಿಕೊಳ್ಳುತ್ತಾರೆ. ಪ್ರಬಲ ಖಾತೆ ಅಂದರೆ ಹಣ ಮಾಡುವುದೇ ಆಗಿರುತ್ತದೆ. ಆದರೆ ಸೇವಾ ಮನೋಭಾವ ಇರುವ ಯಾವ ರಾಜಕಾರಣಿಯು ಪ್ರಬಲ ಖಾತೆ ಬೇಕೆಂದು ಪಟ್ಟು ಹಿಡಿಯುವುದಿಲ್ಲ ಎಂದು ಸಾಹಿತಿ ಹಾಗೂ ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ನಾಡಿನ ಜನರ ಸೇವೆ ಮಾಡುವ ಮನೋಭಾವ ಇರುವ ರಾಜಕಾರಣಿ ಖಾತೆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಂತವರ ಸಾಲಿನಲ್ಲಿ ಡಾ.ಮಹದೇವಪ್ಪ ನಿಲ್ಲುತ್ತಾರೆ. ರಾಜಕಾರಣಿ ಆದವನು ಸಾಹಿತ್ಯದ ಸಹವಾಸಕ್ಕೆ ಬರಬೇಕು. ಲೇಖಕನಾಗಿ ರೂಪುಗೊಳ್ಳಬೇಕು. ಓದಬೇಕು, ಬರೆಯಬೇಕು. ಚಿಂತನಾಶೀಲ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಜನ ಸಾಮಾನ್ಯರ ಸರ್ವೋದಯ ಬಯಸಬೇಕು. ಅಷ್ಟೇ ಅಲ್ಲದೆ ಯಾವುದೇ ಕಾರ್ಯ ಯೋಜನೆ ರೂಪಿಸುವ ವೇಳೆ ಪ್ರಜ್ಞಾವಂತರ ಜೊತೆ ಚರ್ಚಿಸಬೇಕು ಎಂದು ಸಲಹೆ ನೀಡಿದರು.

ಮಣಿಪುರದಲ್ಲಿ ನಿರಂತರ ಹಿಂಸಾಚಾರ ನಡೆಯುತ್ತಿದೆ. ಸಂವಿಧಾನವನ್ನು ಕಾಪಾಡುವ ಸರ್ಕಾರ ಎರಡು ಪಂಗಡಗಳು ಕಲಹದಲ್ಲಿ ತೊಡಗಲು ಪರೋಕ್ಷವಾಗಿ ಪ್ರಚೋದಿಸುತ್ತಿದೆ ಎಂದು ಬಂಜಗೆರೆ ಜಯ ಪ್ರಕಾಶ್ ಕಿಡಿಕಾರಿದರು.

ಮನುವಾದ, ಕೋಮುವಾದ, ಜಾತಿವಾದ ಹಾಗೂ ಖಾಸಗೀಕರಣದ ವಿರುದ್ಧ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಬುದ್ಧತೆ ಬೆಳೆಸಿಕೊಳ್ಳಬೇಕು. ಸಾಮಾಜಿಕ ಕಳಕಳಿ ಎಂಬುದು ಏಕಮುಖವಾಗದೆ ಸರ್ವ ಜನಾಂಗದ ಶಾಂತಿಯ ತೋಟವಾಗಬೇಕು. ಸಂವಿಧಾನದ ನೆರಳು ಎಲ್ಲರಿಗೂ ಸಿಗುವಂತಾಗಬೇಕು ಎಂದು ಬಂಜಗೆರೆ ಜಯಪ್ರಕಾಶ್ ಆಶಿಸಿದರು.

ಇದೇ ವೇಳೆ ಮಾತನಾಡಿದ ವಿಮರ್ಶಕ ಡಾ.ಕೆ.ವೈ.ನಾರಾಯಣಸ್ವಾಮಿ, ಮಣಿಪುರದ ಹೇಯ ಕೃತ್ಯವನ್ನು ಖಂಡಿಸದೆ ಇರುವುದು ಯಾರಿಗೂ ಸಾಧ್ಯವಿಲ್ಲ. ಇಂತಹ ಅಮಾನವೀಯ ಕೃತ್ಯ ಆಘಾತ ಉಂಟು ಮಾಡುತ್ತದೆ ಎಂದರು. ಸಂವಿಧಾನ ತಾಯಿ ಇದ್ದಂತೆ. ಸಂವಿಧಾನದ ನೆರಳು ಅಂದರೆ ತಾಯಿಯ ಮಡಿಲು ಇದ್ದಂತೆ. ತಾಯಿ ತಾರತಮ್ಯ ನೋಡದೆ ಎಲ್ಲಾ ಮಕ್ಕಳನ್ನು ಒಂದೇ ರೀತಿ ಕಾಣುತ್ತಾಳೆ. ಈ ನಿಟ್ಟಿನಲ್ಲಿ ಸಂವಿಧಾನದ ಭರವಸೆಯನ್ನು ಹುಸಿಗೊಳಿಸದೆ ರಾಜಕಾರಣಿಗಳು ಸಮಾಜವನ್ನು ಸಮಾನತೆಯ ದೃಷ್ಟಿಯಲ್ಲಿ ನೋಡಬೇಕು ಎಂದು ಹೇಳಿದರು.

ಗೋಸುಂಬೆತನ ಹಾಗೂ ಬೌದ್ಧಿಕತೆ ಇಲ್ಲದ ರಾಜಕಾರಣಿಗಳ ಮಧ್ಯೆ ನಿಷ್ಠೂರವಾಗಿ ವಿಚಾರಗಳನ್ನು ಹೇಳುವುದು ಕಷ್ಟ, ಈ ನಿಟ್ಟಿನಲ್ಲಿ ಡಾ.ಹೆಚ್.ಸಿ.ಮಹದೇವಪ್ಪ ಅವರು ನೇರ ನಡೆ ನುಡಿಯಿಂದ ಪುಸ್ತಕದಲ್ಲಿ ಹಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಹಿಜಾಬ್, ಹಲಾಲ್ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತನಾಡದ ಕೆಲವು ರಾಜಕಾರಣಿಗಳು ಅನು ಕೂಲಸಿಂಧು ವರ್ತನೆ ತೋರುತ್ತಾರೆ. ಆದರೆ ಯಾವುದೇ ಸಮಸ್ಯೆಗಳು ಎದುರಾದಾರೂ ಅದಕ್ಕೆ ಸ್ಪಂದಿಸುವಂತಾಗಬೇಕು ಎಂದು ಡಾ.ನಾರಾಯಣಸ್ವಾಮಿ ಹೇಳಿದರು.

ಇದೇ ವೇಳೆ ಮಾತನಾಡಿದ ಡಾ.ಹೆಚ್.ಸಿ.ಮಹದೇವಪ್ಪ ಅವರು, ನಾನು ಬರೆದಿರುವ ಪುಸ್ತಕವನ್ನು ಓದಿ, ವಿಮರ್ಶೆ ಮಾಡಿ. ಈ ಪುಸ್ತಕ ಯುವ ಜನರಿಗೆ ಉಪಯುಕ್ತವಾದರೆ ಅಷ್ಟೆ ಸಾಕು ಎಂದು ಹೇಳಿದರು.

ವಿಧಾನಸೌಧ ನಿರ್ಮಿಸಿದ ಕೆಂಗಲ್ ಹನುಮಂತಯ್ಯ, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಸೇರಿದಂತೆ ಹಲವು ನಾಯಕರು ತಾವು ಬಿತ್ತಿದ ಆದರ್ಶ ಹಾಗೂ ಸಾಮಾಜಿಕ ಮೌಲ್ಯವನ್ನು ಪುಸ್ತಕದ ರೂಪದಲ್ಲಿ ದಾಖಲಿಸಬೇಕಿತ್ತು. ಹಾಗೆ ಅವರು ದಾಖಲಿಸಿದ್ದರೆ ಈಗಿನ ಪೀಳಿಗೆಗೆ ಅವರ ತತ್ವಾದರ್ಶ ಮಾರ್ಗದರ್ಶನವಾಗುತ್ತಿತ್ತು. ಈ ನಿಟ್ಟಿನಲ್ಲಿ ಪ್ರಗತಿಪರ ಚಿಂತಕರು ತಮ್ಮ ಅನುಭವವನ್ನು ಪುಸ್ತಕ ರೂಪದಲ್ಲಿ ದಾಖಲಿಸಬೇಕು. ಈ ಮೂಲಕ ಯುವ ಪೀಳಿಗೆಗೆ ಅವರ ಅನುಭವ ತಲುಪಿಸಬೇಕು ಎಂದು ಸಲಹೆ ನೀಡಿದ ಹಂಸಲೇಖ ಅವರು, ಎಂದಿಗೂ ಪ್ರಗತಿಪರರನ್ನು ದೂರ ಇಡುವುದು ಅಥವಾ ಅವಮಾನಿಸುವುದು ಮಾಡಬಾರದು ಎಂದು ಹೇಳಿದರು.

ಡಾ.ಮಹದೇವಪ್ಪ ಅವರು ತಮ್ಮ ಅನುಭವಗಳನ್ನು ಪುಸ್ತಕದ ರೂಪದಲ್ಲಿ ದಾಖಲಿಸಿರುವುದು ಸ್ವಾಗತಾರ್ಹವಾಗಿದೆ. ಈ ಪುಸ್ತಕ ಆಡು ಮಾತಿನ ಅಡುಗೆ ಹಾಗೂ ನೇರ ಮಾತಿನ ಬಡಿಗೆ ಇದ್ದ ಹಾಗೆ. ಒಬ್ಬ ರಾಜಕಾರಣಿ ಆದವನು ನೇರ ಮಾತಿನ ಬಡಿಗೆಯಿಂದ ಸಮಾಜ ತಿದ್ದುವ ಕೆಲಸ ಮಾಡಬೇಕು. ಈ ಕೆಲಸ ಮಾಡಿದ್ದಾರೆ. ಈ ಹಿನ್ನೆಲೆ ಇಂತಹ ಪುಸ್ತಕಗಳು ಯುವ ಪೀಳಿಗೆಗೆ ಕೈಪಿಡಿ ಆಗಲಿದೆ ಎಂದು ಹಂಸಲೇಖ ಆಶಿಸಿದರು.

ಚಾ.ನಗರ ಲೋಕಸಭಾ ಕ್ಷೇತ್ರದ ಟಿಕೆಟ್‌ಗೆ ನಾನೂ ಪ್ರಬಲ ಆಕಾಂಕ್ಷಿ

● ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಪುತ್ರ, ಯುವ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಪ್ರತಿಪಾದನೆ ● ನಾನೆಂದೂ ಜಿಲ್ಲೆಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ

ಮೈಸೂರು, ಜು.22(ಬಿಎಲ್‌ಯು)– ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ನಾನು ಕೂಡ ಕಾಂಗ್ರೆಸ್ ಪಕ್ಷದ ಟಿಕೆಟ್ ಪ್ರಬಲ ಆಕಾಂಕ್ಷಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಹಾಗೂ ಯುವ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತ ನಾಡಿದ ಅವರು, ಕಾಂಗ್ರೆಸ್ ಪಕ್ಷಕೊಟ್ಟ ಜವಾಬ್ದಾರಿಯನ್ನು 2008ರಿಂದ ಚಾಚೂ ತಪ್ಪದೆ ಪಾಲಿಸುತ್ತಾ ಬಂದಿದ್ದೇನೆ. ಈ ಹಿನ್ನೆಲೆಯಲ್ಲಿ ನಾನು ಕೂಡ ಪ್ರಬಲ ಆಕಾಂಕ್ಷಿಯಾಗಿ ಟಿಕೆಟ್ ಕೇಳಿದ್ದೇನೆ. ಆದರೆ ಪಕ್ಷ ಯಾರಿಗೆ ಗುರುತಿಸಿ ಟಿಕೆಟ್ ನೀಡುತ್ತದೆಯೋ ಅವರ ಪರ ನಿಂತು ಗೆಲ್ಲಿಸುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಹಿಂದೆ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿಲ್ಲ: ನಮ್ಮ ತಂದೆ ಈ ಜಿಲ್ಲೆಯ ಉಸ್ತುವಾರಿ ಸಚಿವರಾಗಿರಬಹುದು. ಆದರೆ ನಾನು ಎಂದೂ ಜಿಲ್ಲೆಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ. ಜೆಡಿಎಸ್ ಬೆಂಬಲಿಗರೆಂಬ ಕಾರಣಕ್ಕೆ ರಾಜಕೀಯ ವೈಷಮ್ಯದಿಂದ ಇಬ್ಬರನ್ನು ಕೆಲಸದಿಂದ ತೆಗೆಸಿದ್ದೇನೆ ಎಂಬ ಆರೋಪ ಶುದ್ಧ ಸುಳ್ಳು. ಹೊರ ಗುತ್ತಿಗೆಯಲ್ಲಿ ಕೆಲಸ ಮಾಡುವವರ ನಿಗದಿತ ಅವಧಿ ಮುಗಿದ ನಂತರ ಕೆಲಸದಿಂದ ತೆಗೆಯುವುದು, ಮುಂದುವರೆಸುವುದು ಆಯಾ ಇಲಾಖೆಯ ವಿವೇಚನೆಗೆ ಬಿಟ್ಟ ವಿಚಾರ. ಆದರೆ ನಾನು ಕೆಲಸದಿಂದ ತೆಗೆಸಿದ್ದೇನೆ ಎಂಬುದು ಆಧಾರರಹಿತ ಆರೋಪ ಎಂದು ಸುನೀಲ್ ಬೋಸ್ ಸ್ಪಷ್ಟಪಡಿಸಿದರು.

ಇಂತಹ ಕೀಳು ಮಟ್ಟದ ರಾಜಕಾರಣ ನಾನು ಮಾಡಿಲ್ಲ, ಮಾಡುವುದೂ ಇಲ್ಲ. ಈ ಪ್ರಕರಣದಲ್ಲಿ ನನ್ನ ಹಸ್ತಕ್ಷೇಪ ವಿಲ್ಲ. ರಾಜಕೀಯದಲ್ಲಿ ಬೆಳೆಯುವವರಿಗೆ ಇಂತಹ ಆರೋಪಗಳು ಸರ್ವೆ ಸಾಮಾನ್ಯ. ಚುನಾವಣೆಯಲ್ಲಿ ಕ್ಷೇತ್ರದಾದ್ಯಂತ ಸಂಚಾರ ಮಾಡಿ ನಮ್ಮ ತಂದೆಯನ್ನು ಗೆಲ್ಲಿಸಿದ್ದೇನೆ. ಈಗ ಜನರಿಗೆ ಕೊಟ್ಟ ಮಾತಿನಂತೆ ಕೆಲಸ ಮಾಡುತ್ತಿದ್ದೇನೆ. ಆಡಿಯೋ ವೈರಲ್ ಆಗಿರುವ ವಿಚಾರ ನನಗೆ ಈಗ ತಾನೆ ಗೊತ್ತಾಯಿತು. ಆ ಅಧಿಕಾರಿ ಯಾರು, ಯಾಕೆ ನನ್ನ ಹೆಸರು ಬಳಸಿದ್ದಾರೆ ಎಂಬುದು ನನಗೆ ತಿಳಿದಿಲ್ಲ ಎಂದು ತಿಳಿಸಿದರು.

ರಾಜಕೀಯ ವೈಷಮ್ಯದಿಂದ ಜೆಡಿಎಸ್ ಬೆಂಬಲಿಗರನ್ನು ಕೆಲಸದಿಂದ ತೆಗೆಸಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಲು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ನಿರಾಕರಿಸಿದರು. ಈ ಬಗ್ಗೆ ಪ್ರಶ್ನೆ ಕೇಳುತ್ತಲೆ ಸಿಡಿಮಿಡಿಗೊಂಡ ಡಾ.ಮಹದೇವಪ್ಪ ಅವರು, ಇದೆಲ್ಲಾ ಬೇಸ್ ಲೆಸ್ ಆರೋಪ, ಇದನ್ನು ಬಿಟ್ಟು ಬೇರೆ ಪ್ರಶ್ನೆ ಕೇಳಿ ಎಂದರು.

ಧಮ್ ಎಳೆಯೋರಿಗೆ ದಂಡದ ಬಿಸಿ; 13,800 ರೂ. ವಸೂಲಿ



ಮೈಸೂರು, ಜು. 22(ಜಿಎ)–ಸಾರ್ವಜನಿಕ ಸ್ಥಳದಲ್ಲಿ ಸಿಗರೇಟ್ ಸೇದುವವರಿಗೆ ಪೊಲೀಸರು ದಂಡದ ಬಿಸಿ ಮುಟ್ಟಿಸುತ್ತಿದ್ದು, ಕುವೆಂಪು ನಗರ ಪೊಲೀಸರು 13,800 ರೂ. ದಂಡ ವಸೂಲಿ ಮಾಡಿದ್ದಾರೆ.

ನಗರ ಪೊಲೀಸ್ ಆಯುಕ್ತರ ನಿರ್ದೇಶನದಂತೆ ಕುವೆಂಪುನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಿಗರೇಟ್ ಸೇದುತ್ತ ಸಾರ್ವಜನಿಕ ಸ್ಥಳಗಳಲ್ಲಿ ಕಾಲಹರಣ ಮಾಡುತ್ತಿರುವ ಪಡ್ಡೆ ಹುಡುಗರಿಗೆ ಮತ್ತು ಟೀ ಅಂಗಡಿಯವರಿಗೆ ದಂಡ ವಿಧಿಸುವ ಮೂಲಕ ಪೊಲೀಸ್ ಇಲಾಖೆ ಶಾಕ್ ನೀಡಿದೆ.

ಸಂಜೆ ನಂತರ ವಿವಿಧ ಬಡಾವಣೆಯ ಯುವಕರು ಕುವೆಂಪುನಗರದ ವ್ಯಾಪ್ತಿಯಲ್ಲಿರುವ ಟೀ ಅಂಗಡಿಗಳ ಮುಂದೆ ಗುಂಪು ಕಟ್ಟಿಕೊಂಡು ರಾತ್ರಿ 11 ಗಂಟೆ ಆದರೂ ಸಿಗರೇಟ್ ಸೇದಿಕೊಂಡು ಹರಟೆ, ಪುಂಡಾಟ ಮಾಡುತ್ತಿರುವುದು ಪೊಲೀಸರ ಗಮನಕ್ಕೆ ಬಂದಿದೆ. ಇವರಿಗೆ ಬಿಸಿ ಮುಟ್ಟಿಸಲು ಕಳೆದ 15 ದಿನಗಳಿಂದ ಕಾರ್ಯಾಚರಣೆ ನಡೆಸಿ, ಸಿಗರೇಟ್ ಸೇದುವವರಿಗೆ 100 ರೂ. ಮತ್ತು ಅಂಗಡಿ ಮಾಲೀಕರಿಗೆ 200 ರೂ. ದಂಡ ವಿಧಿಸುವ ಮೂಲಕ ಬರೋಬ್ಬರಿ 13,800 ರೂ. ವಸೂಲಿ ಮಾಡಿದ್ದಾರೆ.

ಈ ಕಾರ್ಯಾಚರಣೆಯ ನಂತರ ಪಡ್ಡೆ ಯುವಕರು ಎಚ್ಚೆತ್ತುಕೊಂಡಿದ್ದು, ಗುಂಪು ಗೂಡುವುದು ಕಡಿಮೆ ಆಗಿದೆ. ನಗರ ಪೊಲೀಸ್ ಆಯುಕ್ತ ಡಾ.ಬಿ.ರಮೇಶ್, ಡಿಸಿಪಿ ಮುತ್ತುರಾಜ್ ಹಾಗೂ ಜಾಹ್ನವಿ ಅವರ ಸೂಚನೆ ಮೇರೆಗೆ ಹಾಗೂ ಕೆ.ಆರ್. ಉಪವಿಭಾಗದ ಎಸಿಪಿ ಗಂಗಾಧರಸ್ವಾಮಿ ಮಾರ್ಗದರ್ಶನದಂತೆ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಎಲ್. ಅರುಣ್ ಹಾಗೂ ಸಿಬ್ಬಂದಿ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಕಲೆ, ಕಲೆಗಾರರಿಗೆ ಆಶ್ರಯ ನೀಡಿದ ಮೈಸೂರು ಒಡೆಯರು ಸದಾ ಸ್ತುತ್ಯಾರ್ಹರು

ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅಭಿಮತ



ಮೈಸೂರು, ಜು.22(ಎಂಕೆ)– ಎಲ್ಲಾ ರೀತಿಯ ಕಲೆಗಳು ಹಾಗೂ ಕಲಾವಿದರಿಗೆ ಆಶ್ರಯ ನೀಡಿದ ಮೈಸೂರು ಒಡೆಯರನ್ನು ಸ್ಮರಿಸುವುದು ಮುಖ್ಯವಾಗಿದೆ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿದರು.

ಮೈಸೂರು ಗೋಕುಲಂನಲ್ಲಿರುವ ಶ್ರೀ ಕೃಷ್ಣ ಗಾನಸಭಾದಲ್ಲಿ ಆಯೋಜಿಸಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರ 105ನೇ ಜನ್ಮ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀ ಕೃಷ ಗಾನಲೋಲ. ಸ್ವತಃ ಕೊಳಲು ಹಿಡಿದು ನುಡಿಸುತ್ತಿದ್ದರೆ ಪ್ರಕೃತಿಯೇ ಸ್ಪಂದನೆ ನೀಡುತ್ತಿತ್ತು. ಅಂತಹ ಕೃಷ್ಣನ ಸನ್ನಿಧಾನದಲ್ಲಿ ಮೈಸೂರು ಒಡೆಯರ ಜಯಂತಿ ಆಚರಿಸುತ್ತಿರುವುದು ಸಂತೋಷ ತಂದಿದೆ ಎಂದರು.

ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್ ಮಾತನಾಡಿ, ಉಡುಪಿ ಪೇಜಾವರ ಮಠದ ಸ್ವಾಮೀಜಿಯವರನ್ನು ಶ್ರೀ ಕೃಷ್ಣ ಗಾನಸಭಾಗೆ ಕರೆದುಕೊಂಡು ಬರಬೇಕು ಎಂಬುದು ಬಹುದಿನಗಳ ಆಸೆಯಾಗಿದ್ದು, ಇಂದು ಈಡೇರಿದೆ ಎಂದು ಹರ್ಷ ವ್ಯಕ್ತಪಡಿಸಿದರಲ್ಲದೆ, ಕಪ್ಪಡಿ ಮಠಾಧಿಪತಿಗಳಾದ ಶ್ರೀ ವರ್ಚಸ್ವಿ ಸಿದ್ದಲಿಂಗ ರಾಜೇ ಅರಸ್ ಅವರು ಮುಂದಿನ ವರ್ಷ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಫೋಟೋ ಜೊತೆಗೆ ಮೂರು ಲಕ್ಷ ರೂ.ದತ್ತಿ ನೀಡುವುದಾಗಿ ತಿಳಿಸಿದ್ದು, ಅವರ ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು. ಇದೇ ವೇಳೆ ಶ್ರೀ ಜಯಚಾಮರಾಜ ಒಡೆಯರ್ ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಸಂಗೀತ ಲಹರಿ: ಬಳಿಕ ವಿದ್ವಾನ್ ಎನ್.ಆರ್.ಪ್ರಶಾಂತ ಅವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು. ಪಿಟೀಲು ವಾದನಲ್ಲಿ ವಿದುಷಿ ಪೃಥ್ವಿ ಭಾಸ್ಕರ್, ಮೃದಂಗ ವಾದನದಲ್ಲಿ ತುಮಕೂರು ರವಿ ಶಂಕರ್ ಹಾಗೂ ಘಟಂನಲ್ಲಿ ವಿದ್ವಾನ್ ಶರತ್ ಕೌಶಿಕ್ ಉತ್ತಮ ಸಹಕಾರ ನೀಡಿದರು. ಪಾಲಿಕೆ ಸದಸ್ಯ ಎಸ್.ಬಿ.ಎಂ. ಮಂಜು ಮತ್ತಿತರರು ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ಮೈಸೂರು,ಜು.22– ಸುಬ್ರೋತ್ ಸರ್ಕಾರ್ ಎಂಬ 33 ವರ್ಷದ ವ್ಯಕ್ತಿಯು ಜುಲೈ 13ರಂದು ಮಧ್ಯಾಹ್ನ 1.30ಕ್ಕೆ ಹೆಬ್ಬಾಳ್‌ನಲ್ಲಿರುವ ಸ್ಟಾರ್ ಬಜಾಜ್ ಶೋರೂಂಗೆ ಕೆಲಸಕ್ಕೆಂದು ಹೋಗಿದ್ದಾಗ ಕಾಣೆಯಾಗಿರುವ ಪ್ರಕರಣ ಹೆಬ್ಬಾಳ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಖಲಾಗಿದೆ. ವ್ಯಕ್ತಿಯು ಎಣ್ಣೆಗೆಂಪು ಮೈಬಣ್ಣ, ದುಂಡು ಮುಖ, ಸಾಧಾರಣ ಶರೀರ ಹೊಂದಿದ್ದು 5.7 ಅಡಿ ಎತ್ತರವಿರುತ್ತಾರೆ. ಬ್ಲೂ ಕಲರ್ ಶರ್ಟ್ ಬಿಸ್ಕೆಟ್ ಕಲರ್ ಪ್ಯಾಂಟ್ ಧರಿಸಿದ್ದು ಕನ್ನಡ, ಇಂಗ್ಲಿಷ್, ಹಿಂದಿ ಹಾಗೂ ಬೆಂಗಾಲಿ ಭಾಷಾ ಮಾತನಾಡುತ್ತಾರೆ. ವ್ಯಕ್ತಿಯು ಪತ್ತೆಯಾದಲ್ಲಿ ಹೆಬ್ಬಾಳ್ ಪೊಲೀಸ್ ಠಾಣೆ ದೂ.ಸಂ:2418318, ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂ.ಸಂ:2418339 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಆ.21, ಸುತ್ತೂರಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಜು. 22– ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆ.21 ರಂದು ಮಾಸಿಕ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ಹರಗುರು ಚರಮೂರ್ತಿಗಳು, ವಧುವರರ ಬಂಧುಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ.

ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರುವುದಿಲ್ಲ. ವಿವಾಹವಾಗಲು ಇಚ್ಛಿಸುವವರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಹಾಸ್ಯ ಚಕ್ರವರ್ತಿ ಚಾರ್ಲಿ ಚಾಪ್ಲಿನ್ ಪುತ್ರಿ ಜೋಸೆಫೀನ್ ಚಾಪ್ಲಿನ್ ವಿಧಿವಶ

ವಾಷಿಂಗ್ಟನ್: ಕಾಮಿಡಿ ದಂತಕಥೆ ಚಾರ್ಲಿ ಚಾಪ್ಲಿನ್ ಅವರ ಪುತ್ರಿ ಹಾಗೂ ನಟಿ ಜೋಸೆಫೀನ್ ಚಾಪ್ಲಿನ್ ಅವರು 74 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ಅಮೆರಿಕ ಮೂಲದ ಮೀಡಿಯಾ ಔಟ್ ಲೆಟ್ ವರೈಟಿ ಪ್ರಕಾರ, ಚಾಪ್ಲಿನ್ ಜುಲೈ 13 ರಂದು ಪ್ಯಾರಿಸ್ನಲ್ಲಿ ನಿಧನರಾದರು ಎಂದು ಅವರ ಕುಟುಂಬ ತಿಳಿಸಿದೆ. ಜೋಸೆಫೀನ್ ಅವರು ಮೂವರು ಗಂಡು ಮಕ್ಕಳನ್ನು ಅಗಲಿದ್ದಾರೆ.

1949ರ ಮಾ.28ರಂದು ಕ್ಯಾಲಿಫೋರ್ನಿಯಾದ ಸಾಂಟಾ ಮೋನಿಕಾದಲ್ಲಿ ಜನಿಸಿದ ಜೋಸೆಫೀನ್, ಚಾರ್ಲಿ ಚಾಪ್ಲಿನ್ ಮತ್ತು ಊನಾ ದಂಪತಿಗೆ ಜನಿಸಿದ ಎಂಟು ಮಕ್ಕಳಲ್ಲಿ ಮೂರನೆಯವರಾಗಿದ್ದಾರೆ. 1952ರಲ್ಲಿ ಚಾಪ್ಲಿನ್ ಅವರ 'ಲೈಮ್‌ಲೈಟ್' ಚಿತ್ರದಲ್ಲಿ ನಟಿಸುವ ಮೂಲಕ ಜೋಸೆಫೀನ್ ಸಿನಿಮಾ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದರು. ಬಳಿಕ ಅವರು ಅನೇಕ ಚಿತ್ರಗಳಲ್ಲಿ ನಟಿಸಿದ್ದರು.

1972ರಲ್ಲಿ ಪಿಯರ್ ಪಾವೊಲೊ ಪಸೋಲಿನಿಯ ಪ್ರಶಸ್ತಿ ವಿಜೇತ 'ದಿ ಕ್ಯಾಂಟರ್ಬರಿ ಟೇಲ್ಸ್' ಮತ್ತು ರಿಚರ್ಡ್ ಬಾಲ್ಡುಸಿಯ 'ಎಲ್' ಒಡೆರ್ ಡೆಸ್ ಫೌವ್ಸ್ ಚಿತ್ರಗಳಲ್ಲಿ ಅಭಿನಯಿಸಿದ್ದರು. ಅದೇ ವರ್ಷ ಮೆನಾಹೆಮ್ ಗೋಲನ್ ನಾಟಕ 'ಎಸ್ಕೇಪ್ ಟು ದಿ ಸನ್' ಸೋವಿಯತ್ ಯೂನಿಯನ್ ಬಗ್ಗೆ ಲಾರೆನ್ಸ್ ಹಾರ್ವೆ ಅವರೊಂದಿಗೆ ನಟಿಸಿದ್ದರು. ಬಳಿಕ 1984ರಲ್ಲಿ ಕೆನಡಾದ ನಾಟಕ 'ದಿ ಬೇ ಬಾಯ್'ನಲ್ಲಿ ನಟಿಸಿದ್ದರು.

ಇಸ್ರೊ: ಗಗನಯಾತ್ರಿಗಳನ್ನು ಸುರಕ್ಷಿತವಾಗಿ ಇಳಿಸಲು ತಾಲೀಮು

ಬೆಂಗಳೂರು : 'ಚಂದ್ರಯಾನ–3'ರ ಯಶಸ್ವಿ ಉಡ್ಡಯನದಿಂದ ಬೀಗುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ), ಮಾನವಸಹಿತ ಚೊಚ್ಚಲ ಗಗನಯಾನಕ್ಕೂ ಭರದ ಸಿದ್ಧತೆ ನಡೆಸಿದೆ.

ಗಗನಯಾನ ಮುಗಿಸಿ ಭೂಮಿಗೆ ಮರಳುವ ಗಗನಯಾತ್ರಿಗಳನ್ನು ಸುರಕ್ಷಿತವಾಗಿ ನಿಗದಿತ ಪ್ರದೇಶಕ್ಕೆ ಕರೆತರುವ ಬಗ್ಗೆ ಭಾರತೀಯ ನೌಕಾಪಡೆ ಮತ್ತು ಇಸ್ರೊ ಜಂಟಿಯಾಗಿ ಪರೀಕ್ಷಾರ್ಥ ಪ್ರಯೋಗಗಳಲ್ಲಿ ಮುಳುಗಿವೆ. ಕೇರಳದ ಕೊಚ್ಚಿಯಲ್ಲಿರುವ ಐಎನ್‌ಎಸ್ ಗರುಡ ನೌಕಾ ನೆಲೆಯಲ್ಲಿ ಈ ಸಂಬಂಧ ಮೊದಲ ಪರೀಕ್ಷೆ ನಡೆದಿತ್ತು.

ಆಂಧ್ರಪ್ರದೇಶದ ವಿಶಾಖಪಟ್ಟಣ ಪೂರ್ವ ಭಾಗದ ನೌಕಾ ನೆಲೆಯಲ್ಲಿ ಇತ್ತೀಚೆಗೆ ದ್ವಿತೀಯ ಹಂತದ ಪರೀಕ್ಷೆಯೂ ಯಶಸ್ವಿಯಾಗಿ ಮುಗಿದಿದೆ. ಗಗನಯಾನಿಗಳನ್ನು ಹೊತ್ತೊಯ್ಯುವ ಕೃತಕ ಮ್ಯಾಡ್ಯೂಲ್ ಅನ್ನು ಸಮುದ್ರದಲ್ಲಿ ಇಳಿಸಲಾಯಿತು. ಬಳಿಕ ಅದನ್ನು ಸುರಕ್ಷಿತವಾಗಿ ನಿರ್ದಿಷ್ಟ ಸ್ಥಳಕ್ಕೆ ತರುವ ಬಗ್ಗೆ ತಾಲೀಮು ನಡೆಯಿತು. ಇದರಲ್ಲಿ ಚಾಲಕರು, ನೌಕಾಪಡೆ ಕಮಾಂಡೊಗಳು, ವೈದ್ಯಕೀಯ ತಜ್ಞರು, ಸಂವಹನಕಾರರು, ತಂತ್ರಜ್ಞರು ಪಾಲ್ಗೊಂಡಿದ್ದರು ಎಂದು ಇಸ್ರೊ ಶನಿವಾರ ಹೇಳಿಕೆಯಲ್ಲಿ ತಿಳಿಸಿದೆ.

ಸಮುದ್ರದಲ್ಲಿ ಕೃತಕ ಮ್ಯಾಡ್ಯೂಲ್ ಅನ್ನು ತೇಲಾಡುವ ಸ್ಥಿತಿಯಲ್ಲಿಡಲಾಯಿತು. ಬಳಿಕ ಅದನ್ನು ನಿಗದಿತ ಪ್ರದೇಶದಲ್ಲಿದ್ದ ಹಡಗಿನ ಮೇಲಕ್ಕೆ ತರಲಾಯಿತು. ಮ್ಯಾಡ್ಯೂಲ್ ನೀರಿಗೆ ಬಿದ್ದ ತಕ್ಷಣವೇ ಅದನ್ನು ಹೇಗೆ ಹೊರಗೆ ತರಬೇಕು ಎಂಬ ಬಗ್ಗೆ ರಕ್ಷಣಾ ತಂಡದ ಸದಸ್ಯರಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದೆ.

ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಮುಂದಿನ ವರ್ಷ ಗಗನಯಾನ ನೌಕೆಯ ಉಡ್ಡಯನಕ್ಕೆ ಇಸ್ರೊ ತಯಾರಿ ನಡೆಸಿದೆ. ಭೂಮಿಯಿಂದ 400 ಕಿ.ಮೀ ಕೆಳಕಕ್ಷೆಗೆ ಮೂವರು ಗಗನಯಾತ್ರಿಗಳನ್ನು ಹೊತ್ತ ನೌಕೆ ಕಳುಹಿಸಲಾಗುತ್ತದೆ. ಈ ನೌಕೆಯು ಭೂಕಕ್ಷೆಯಲ್ಲಿ ಮೂರು ದಿನಗಳ ಕಾಲ ಪರಿಭ್ರಮಿಸಲಿದೆ. ಬಳಿಕ ಅದನ್ನು ಸುರಕ್ಷಿತವಾಗಿ ಭೂಮಿಗೆ ಕರೆತರಲಾಗುತ್ತದೆ.

ಶ್ರೀ ಸ್ಥಾನಿಕವಾಸಿ ಜೈನ್ ಯುವ ಸಂಘಟನೆಯಿಂದ ಮಕ್ಕಳಿಗೆ ಲೇಖನ ಸಾಮಗ್ರಿ ಕೊಡುಗೆ



ಮೈಸೂರು,ಜು.22–ಮೈಸೂರಿನ ಶ್ರೀ ಸ್ಥಾನಿಕವಾಸಿ ಜೈನ್ ಯುವ ಸಂಘಟನೆ ವತಿಯಿಂದ ಲಷ್ಕರ್ ಮೊಹಲ್ಲಾದ ದೊಡ್ಡ ಪೇಟೆ ಸರ್ಕಾರಿ ಪ್ರಾಥಮಿಕ ಶಾಲೆಗೆ ನೀರಿನ ಬಾಟಲ್ಸ್, ಬ್ಯಾಗ್ಸ್ ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ (ಮೈಸೂರು ಉತ್ತರ) ಕೃಷ್ಣ, ಸಿಇಓ ನಾಗೇಂದ್ರ, ಕಾಂತರಾಜು, ಸಿಆರ್‌ಪಿ ಬಿ.ರಘು, ಮುಖ್ಯೋಪಾಧ್ಯಾಯ ಹೆಚ್.ಡಿ. ರವೀಶ್, ಉಪಮುಖ್ಯೋಪಾಧ್ಯಾಯ ವಿಶ್ವನಾಥ್, ಯುವ ಸಂಘಟನೆ ಮಾಜಿ ಅಧ್ಯಕ್ಷ ರಾಜನ್ ಬಾಗ್‌ಮಾರ್, ಮನೋಹರ್ ಶಂಕ್ಲ, ಅಧ್ಯಕ್ಷ ರಾಕೇಶ್ ಬಾಂಟಿಯಾ, ಕಾರ್ಯದರ್ಶಿ ಕಿರಣ್ ಸಲೇಚಾ, ಉಪಾಧ್ಯಕ್ಷ ನವರತ್ನ ಡಲ್ಲಾ, ಖಜಾಂಚಿ ವಿಕಾಸ್ ಡಲ್ಲಾ, ಜಂಟಿ ಕಾರ್ಯದರ್ಶಿ ದಿನೇಶ್ ಪಿಪಾಡ, ಶಾಲಾ ಸಮಿತಿ ಅಧ್ಯಕ್ಷ ಅಭಿಷೇಕ್ ಸಿಂಗಾವಿ, ಭರತ್ ಪಟ್ವಾ ಮತ್ತಿತರರು ಹಾಜರಿದ್ದರು.

ಪ್ರಾಥಮಿಕ ಶಾಲೆ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ



ಮೈಸೂರು,ಜು. 22(ಎಂಟಿವೈ)– ಮೈಸೂರು ತಾಲೂಕಿನ ಸಾತಗಳ್ಳಿ ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ 74 ಮಕ್ಕಳಿಗೆ ಶಾಲಾ ಬ್ಯಾಗ್ ಸೇರಿದಂತೆ ಪಠ್ಯ ಸಾಮಗ್ರಿ ವಿತರಿಸಲಾಯಿತು.

ಮೈಸೂರಿನ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಲ್‌ಹೆಚ್‌ಪಿ) ಹಾಗೂ ಕ್ಲುಬರ್ ಲೂಬ್ರಿಕೇಶನ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಡಾ. ಅಂಬೇಡ್ಕರ್ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಪೆನ್ನು, ನೋಟ್ ಬುಕ್, ಬ್ಯಾಗ್, ಜಾಮಿಟ್ರಿ ಬಾಕ್ಸ್, ಕ್ರಯಾನ್ಸ್, ಸ್ಕೆಚ್ ಪೆನ್, ಪೆನ್ಸಿಲ್, ಡ್ರಾಯಿಂಗ್ ಬುಕ್ ಸೇರಿದಂತೆ ಇನ್ನಿತರ ಪಠ್ಯ ಸಾಮಗ್ರಿ ವಿತರಿಸಿ ಶುಭ ಕೋರಲಾಯಿತು.

ಇದೇ ವೇಳೆ ಆರ್‌ಎಲ್‌ಹೆಚ್‌ಪಿ ನಿರ್ದೇಶಕಿ ಸರಸ್ವತಿ ಮಾತನಾಡಿ, ಡಾ.ಅಂಬೇಡ್ಕರ್ ನಗರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಬಡ ಕುಟುಂಬದ ಮಕ್ಕಳೇ ಬರುತ್ತಾರೆ. ಸಾತಹಳ್ಳಿ, ಹಂಚ್ಯಾ ನಡುವೆ ಇರುವ ಅನೇಕ ಕುಟುಂಬಗಳ ಮಕ್ಕಳು ಪ್ರಾಥಮಿಕ ಶಿಕ್ಷಣಕ್ಕೆ ಈ ಶಾಲೆಯನ್ನೇ ಅವಲಂಬಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅರ್ಹರಿಗೆ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಬ್ಯಾಗ್ ಸೇರಿ ಪಠ್ಯ ಸಾಮಗ್ರಿ ವಿತರಣೆಗೆ ಈ ಶಾಲೆಯನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಇಂತಹ ಮಕ್ಕಳಿಗೆ ಬೆಂಬಲ ಹಾಗೂ ಪ್ರೋತ್ಸಾಹ ನೀಡಿದರೆ ಸಾಧನೆ ಮಾಡಲು ಪ್ರೇರಣೆ ಸಿಕ್ಕಂತಾಗುತ್ತದೆ ಎಂದರು.

ಶಿಕ್ಷಣ ಇಲಾಖೆ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿ ಶಿವಮೂರ್ತಿ ಮಾತನಾಡಿ, ಶಿಕ್ಷಣ ಪ್ರತಿಯೊಂದು ಮಕ್ಕಳ ಮೂಲ ಹಕ್ಕು ಎಲ್ಲರೂ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಅದರಲ್ಲೂ ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಯಾರಾದರೂ ಶಾಲೆಯಿಂದ ದೂರ ಇರುವುದು ಗಮನಿಸಿದರೆ, ಮರಳಿ ಶಾಲೆ ಸೇರಿಸುವ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವ ಮೂಲಕ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಪಠ್ಯ ಸಾಮಗ್ರಿ ವಿತರಿಸುವ ಮೂಲಕ ಸಂಘ ಸಂಸ್ಥೆಗಳು ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ಸೌಲಭ್ಯ ಬಳಸಿಕೊಂಡು ಉತ್ತಮ ಸಾಧನೆಯತ್ತ ಗಮನಹರಿಸಿ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆ ಕಾರ್ಯದರ್ಶಿ ಫ್ರೆಜೋಸ್, ಶಿಕ್ಷಣ ಸಂಯೋಜಕ ಶಿವಕುಮಾರ ಆರಾಧ್ಯ, ಬಿಆರ್‌ಪಿ ಶಿವಣ್ಣ ಸಿಆರ್‌ಪಿ ಚಂದ್ರಶೇಖರ್, ಮುಖ್ಯ ಶಿಕ್ಷಕಿ ವಸಂತಾ, ಮುಖಂಡ ಗಂಗಪ್ಪ ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಡಾಕ್ಟರರಿಗೂ ಮತ್ತು ದೇವರಿಗೂ ಕೋಪ ಬರಿಸಬಾರದು.
ತಿಮ್ಮ : ಯಾಕೆ?
ಗುಂಡ : ದೇವರಿಗೆ ಕೋಪ ಬಂದ್ರೆ ಡಾಕ್ಟರ್ ಹತ್ತಿರ ಕಳಿಸ್ತಾನೆ. ಡಾಕ್ಟರಿಗೆ ಕೋಪ ಬಂದ್ರೆ ದೇವರ ಹತ್ರ ಕಳಿಸ್ತಾನೆ... ಅಷ್ಟೇ!

ಮೈಸೂರು ಮಿತ್ರ

ಭಾನುವಾರ, 23 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಾಳೆ ಎಂಬುದೇ ಸಾವು, ಇವತ್ತು ಎಂಬುದೇ ಬದುಕು,
ಈಗ ಎಂಬುದೇ ಸಾಧನೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾವಿಲ್ಲದ ಮನೆಯಲ್ಲಿ ಸಾಸಿವೆ ಸಿಗುವುದೇ?

ನಿಮ್ಮ ಪತ್ರಗಳು

ಕುವೆಂಪು ಉದ್ಯಾನವನದ ಗ್ರಂಥಾಲಯ ರಕ್ಷಿಸಿ

ಮಾನ್ಯರೆ,



ಸಾಂಸ್ಕೃತಿಕ ನಗರಿ ಮೈಸೂರಿನ ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯ ಎ–ಟು ಜೆಡ್ ವೃತ್ತದ ಮಧ್ಯ ಭಾಗದಲ್ಲಿರುವ ಕುವೆಂಪು ಉದ್ಯಾನವನದಲ್ಲಿ ಇರುವ ಗ್ರಂಥಾಲಯ ಚಿಕ್ಕದಾದರೂ ಪ್ರತಿದಿನ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು ಸೇರಿದಂತೆ ಓದುಗರು ಬರುತ್ತಾರೆ.

ಈ ಗ್ರಂಥಾಲಯದ ಮೇಲೆ ರಾಷ್ಟ್ರಕವಿ ಕುವೆಂಪುರವರ ಸ್ಮಾರಕ ಇದ್ದು, ಗ್ರಂಥಾಲಯದ ಗೋಡೆಯ ಒಂದೊಂದೆ ಇಟ್ಟಿಗೆಗಳು ಬೀಳುತ್ತಿವೆ. ಮಳೆಗಾಲ ಇರುವುದರಿಂದ ಹೆಚ್ಚಿನ ಗಾಳಿ–ಮಳೆಯ ರಭಸಕ್ಕೆ ಈ ಗೋಡೆಗೆ ಹೆಚ್ಚಿನ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಕೂಡಲೇ ಈ ಕ್ಷೇತ್ರದ ಶಾಸಕರು, ನಗರಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳು ಕುವೆಂಪು ಸ್ಮಾರಕ ಮತ್ತು ಗ್ರಂಥಾಲಯವನ್ನು ರಕ್ಷಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಅಹಿತಕರ ಘಟನೆಗಳು ಮರುಕಳಿಸದಿರಲಿ

ಮಾನ್ಯರೆ,

ರಾಜ್ಯ ವಿಧಾನಸಭೆಯಲ್ಲಿ ಇತ್ತೀಚೆಗೆ ನಡೆದ ಕೆಲವು ಅಹಿತಕರ ಘಟನೆಗಳು ವಿಷಾದನೀಯ. ಉಪ ಸಭಾಪತಿ (ಡೆಪ್ಯುಟಿ ಸ್ಪೀಕರ್) ರುದ್ರಪ್ಪ ಲಮಾಣಿ ಅವರ ಮೇಲೆ ಭಾರತೀಯ ಜನತಾ ಪಕ್ಷಕ್ಕೆ ಸೇರಿದ ಕೆಲವು ಶಾಸಕರು ಕಾಗದ ಪತ್ರಗಳನ್ನು ಹರಿದು ಅವರ ಪೀಠದತ್ತ ಎಸೆದು, ಸಭಾಪತಿಗಳ ಗೌರವಕ್ಕೆ ಚ್ಯುತಿ ತಂದಿದ್ದಾರೆ ಎಂಬ ಕಾರಣದಿಂದ ಸ್ಪೀಕರ್ ಯು.ಟಿ.ಖಾದರ್ ಅವರು ಬಿಜೆಪಿಗೆ ಸೇರಿದ ಹತ್ತು ಶಾಸಕರನ್ನು ಈ ಅಧಿವೇಶನ ಮುಗಿಯುವ ತನಕ ಅಮಾನತ್ತುಗೊಳಿಸಿ, ತಮ್ಮ ರೂಲಿಂಗ್ ನೀಡಿದ್ದಾರೆ. ಸಭಾಪತಿಗಳ ಈ ರೂಲಿಂಗ್ ಅನ್ನು ವಿರೋಧಿಸಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಅಧಿವೇಶನವನ್ನೇ ಬಹಿಷ್ಕರಿಸಿದ್ದಾರೆ. ಈಗಾಗಲೇ ಬಜೆಟ್ ಅಧಿವೇಶನ ಮುಕ್ತಾಯಗೊಂಡಿರುವುದರಿಂದ, ಬಿಜೆಪಿ ಸದಸ್ಯರ ಅಮಾನತ್ತಿನ ಅವಧಿ ಸಹಾ ತಾರ್ಕಿಕವಾಗಿ ಮುಕ್ತಾಯಗೊಂಡಿದೆ. ಈ ಹಿಂದೆ ಕೂಡ ಇಂತಹ ಅಥವಾ ಇದಕ್ಕಿಂತ ಹೆಚ್ಚಿನ ಪ್ರಮಾಣದ ಹಲವಾರು ಅಹಿತಕರ ಘಟನೆಗಳು ನಡೆದಿವೆ. ಸದನದಲ್ಲಿ ಕೈ ಕೈ ಮಿಲಾಯಿಸಿದ್ದೂ ಇದೆ. ಸದನದಲ್ಲಿ ಅಹೋರಾತ್ರಿ ಧರಣಿ ನಡೆಸಿದ ಉದಾಹರಣೆ ಇದೆ.

ಯಾವುದೇ ಪಕ್ಷದ ಸದಸ್ಯರಿರಲಿ, ಸಭಾಪತಿಗಳಿಗೆ ಅಗೌರವ ಸೂಚಿಸುವುದು ಸರಿಯಾದ ಕ್ರಮವಲ್ಲ. ಎಂತಹ ಉದ್ರೇಕಕಾರಿ ಪರಿಸ್ಥಿತಿ ಇದ್ದರೂ ಸಹಾ ಸಭಾಪತಿಗಳ ಪೀಠಕ್ಕೆ ಅಗೌರವ ಉಂಟು ಮಾಡಬಾರದು. ಏಕೆಂದರೆ ಸ್ಪೀಕರ್ ಸ್ಥಾನಕ್ಕೆ ತನ್ನದೇ ಆದ ಹಿರಿಮೆ ಗರಿಮೆಗಳಿವೆ. ಸ್ಪೀಕರ್, ಅಧಿಕಾರ ವಹಿಸಿಕೊಂಡ ತಕ್ಷಣ ಪಕ್ಷಾತೀತರಾಗುತ್ತಾರೆ. ಸದನದ ಎಲ್ಲಾ ಸದಸ್ಯರ ಹಕ್ಕುಗಳನ್ನು ರಕ್ಷಿಸಬೇಕಾದ್ದು ಅವರ ಜವಾಬ್ದಾರಿ. ಯಾವುದೇ ರೀತಿಯ ರಾಗ ದ್ವೇಷಗಳಿಗೆ ಬಲಿಯಾಗದೇ ಪಕ್ಷೇತರರೂ ಸೇರಿದಂತೆ ಎಲ್ಲಾ ಪಕ್ಷಗಳಿಗೆ ಸೇರಿದ ಸದಸ್ಯರನ್ನು ಸಮಾನ ದೃಷ್ಟಿಯಿಂದ ನೋಡಿ, ಸದನದ ಕಲಾಪಗಳನ್ನು ಪ್ರಜಾಪ್ರಭುತ್ವದ ಆಶಯಗಳಿಗೆ ತಕ್ಕಂತೆ ನಡೆಸುವ ಜವಾಬ್ದಾರಿ ಸ್ಪೀಕರ್ ಮೇಲಿದೆ. ಸದನದಲ್ಲಿ ಅವರೊಬ್ಬ ನ್ಯಾಯಾಧೀಶರಿದ್ದ ಹಾಗೆ. ಈ ಹಿಂದೆ ವೈಕುಂಠ ಬಾಳಿಗಾ, ಕೆ.ಎಸ್.ನಾಗರತ್ನಮ್ಮ, ಕೆ.ಹೆಚ್.ರಂಗನಾಥ, ಡಿ.ಬಿ.ಚಂದ್ರೇಗೌಡ, ವಿ.ಎಸ್.ಕೌಜಲಗಿ, ಪಿ.ವೆಂಕಟರಮಣ, ಎಸ್.ಎಂ. ಕೃಷ್ಣ, ಎಂ.ವಿ.ವೆಂಕಟಪ್ಪ, ಕೆ.ಆರ್.ಪೇಟೆ ಕೃಷ್ಣ, ರಮೇಶ್‌ಕುಮಾರ್, ಕೆ.ಜಿ.ಬೋಪಯ್ಯ, ಜಗದೀಶ್‌ಶೆಟ್ಟರ್, ಕಾಗೋಡು ತಿಮ್ಮಪ್ಪ, ಕೆ.ಬಿ.ಕೋಳಿವಾಡ್ ಸೇರಿದಂತೆ ಹಲವಾರು ಮಹನೀಯರು ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಕೆಲವರು ಅಸಂವಿಧಾನಿಕ ರೀತಿಯಲ್ಲಿ ನಡೆದುಕೊಂಡಿದ್ದೂ ಇದೆ. ಸ್ಪೀಕರ್ ಯು.ಟಿ.ಖಾದರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಕೆಲವು ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಈಗಾಗಲೇ ನೋಟಿಸ್ ನೀಡಿದ್ದಾರೆ.

ರಾಜ್ಯ ವಿಧಾನಸಭೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕನ ಅನುಪಸ್ಥಿತಿಯಲ್ಲಿ ಇಡೀ ಸದನದ ಕಲಾಪ ನಡೆದಿದ್ದು, ಇದೂ ಸಹ ಪ್ರಜಾತಂತ್ರ ವ್ಯವಸ್ಥೆಗೆ ಮಾರಕ. ಆದ್ದರಿಂದ ಮುಂದಿನ ಅಧಿವೇಶನದ ಹೊತ್ತಿಗಾದರೂ ಬಿಜೆಪಿ ಶಾಸಕಾಂಗ ಪಕ್ಷ ತನ್ನ ನಾಯಕನನ್ನು ಆರಿಸಿಕೊಳ್ಳುತ್ತದೆ ಎಂದು ಭಾವಿಸೋಣ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಕರೆಯಲ್ಪಡುವ ನಮ್ಮ ದೇಶ ಇತರ ದೇಶಗಳಿಗೆ ಮಾದರಿಯಾಗಬೇಕಾಗಿದೆ. ನಮಗೆ ಒಂದು ಸದೃಢವಾದ ಹಾಗೂ ಆಡಳಿತ ಪಕ್ಷದ ಲೋಪದೋಷಗಳನ್ನು ಎತ್ತಿ ತೋರಿಸಿ, ಸರ್ಕಾರ ಅಡ್ಡದಾರಿ ಹಿಡಿಯದಂತೆ ನೋಡಿಕೊಳ್ಳುವುದರ ಜೊತೆಗೆ ಜನರ ಸಮಸ್ಯೆಗಳನ್ನು ಸದನದಲ್ಲಿ ವಸ್ತುನಿಷ್ಠವಾಗಿ ಚರ್ಚಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವಂತಹ ವಿರೋಧ ಪಕ್ಷ ಬೇಕಾಗಿದೆ. ಇನ್ನು ಮುಂದಾದರೂ ಆಡಳಿತ ಹಾಗೂ ವಿರೋಧ ಪಕ್ಷಗಳು ತಮ್ಮ ಜವಾಬ್ದಾರಿ ಅರಿತು ನಡೆಯಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕೃತ್ಯ ಎಸಗಿದವರಿಗೆ ಘೋರ ಶಿಕ್ಷೆಯಾಗಲಿ

ಮಾನ್ಯರೆ,

ಕೆಲವು ತಿಂಗಳುಗಳಿಂದ ಮಣಿಪುರ ರಾಜ್ಯದಲ್ಲಿ ಮೀಸಲಾತಿ ಸಂಘರ್ಷ ವಿಷಯವಾಗಿ ಎರಡು ಸಮುದಾಯಗಳ ನಡುವೆ ಸಂಘರ್ಷದ ಜ್ವಾಲೆಯ ಹಿಂಸಾಚಾರದಿಂದ 150 ಕ್ಕೂ ಹೆಚ್ಚು ಸಾವನ್ನು ಕಂಡಿದೆ.

ಮೇ ತಿಂಗಳ ಹಿಂಸಾಚಾರದ ವೇಳೆ ಮಣಿಪುರದ ಕಾಂಗ್ಪೋಕ್ಪಿ ಜಿಲ್ಲೆಯಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ, ಸಾಮೂಹಿಕ ಅತ್ಯಾಚಾರ ವೆಸಗಿರುವ ವಿಡಿಯೋ ಈಗ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿರುವುದು ಮಣಿಪುರದಲ್ಲಿ ಮತ್ತಷ್ಟು ದುಷ್ಕೃತ್ಯ ಸೃಷ್ಟಿಸಿದೆ. ಈ ಘಟನೆ ಮನುಕುಲ ತಲೆತಗ್ಗಿಸುವ ಹೇಯಕೃತ್ಯ. ಸುಪ್ರೀಂಕೋರ್ಟ್ ಕೂಡ ಕಳವಳ ವ್ಯಕ್ತ ಪಡಿಸಿದೆ. ನಿಮ್ಮ ಕೈಯಲ್ಲಿ ಆಗಲಿಲ್ಲ ಎಂದರೆ ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಚಾಟಿ ಬೀಸಿದೆ. ಈ ಹೆಣ್ಣು ಮಕ್ಕಳಿಗೆ ಆದ ಅನ್ಯಾಯ ಘನಘೋರ. ಇಂತಹ ಘಟನೆ ಮರುಕಳಿಸದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿ ಹಾಗೂ ಈ ಕೃತ್ಯ ಎಸಗಿದವರನ್ನು ಘೋರ ಶಿಕ್ಷೆಗೆ ಒಳಪಡಿಸಲಿ.

–ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಆಡಳಿತ–ವಿರೋಧ ಪಕ್ಷಗಳ ಪ್ರತಿಷ್ಠೆಗೆ ಬಲಿಯಾದ ವಿಧಾನಮಂಡಲ ಕಲಾಪ



ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಬಜೆಟ್ ಅಧಿವೇಶನ 'ಯಶಸ್ವಿ' ಆದರೂ ವಿರೋಧ ಪಕ್ಷದ ನಾಯಕನೇ ಇಲ್ಲದೇ ಅಧಿವೇಶನ ನಡೆದಿದ್ದು ರಾಜ್ಯದ ಇತಿಹಾಸದಲ್ಲೇ ಇದೇ ಮೊದಲು. ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿ ಸದನದಲ್ಲಿ ಮಿಂಚಿದ್ದೇ ಕಲಾಪದ ಹೈಲೈಟ್.

ಇನ್ನೂ ಸಾಕಷ್ಟು ಸಂಖ್ಯಾ ಬಲ ಇದ್ದರೂ ವಿರೋಧ ಪಕ್ಷದ ನಾಯಕನ ಆಯ್ಕೆಗೆ ಬಿಜೆಪಿ ಹೈಕಮಾಂಡ್ ಮುಂದಾಗದೇ ಇರುವುದು ನಾಚಿಕೆಗೇಡಿನ ಸಂಗತಿ. ಮುಂಬರುವ ಕನಸಿನ ಲೋಕಸಭಾ ಚುನಾವಣಾ ಹೊಂದಾಣಿಕೆ ಮೇಲೆ ಕಣ್ಣಿಟ್ಟು ತಾನೇ ನಿಂತ ಕಾಲಿನ ಮೇಲೆ ಕಲ್ಲು ಹಾಕಿಕೊಂಡದ್ದಂತೂ ಕ್ಷಮಿಸಲಾಗದ ಅಪರಾಧ.

ನಿರೀಕ್ಷೆಗೂ ಮೀರಿ ಸೋತ ಜೆಡಿಎಸ್ ಹೊಂದಾಣಿಕೆಯ ಬಗ್ಗೆ ಹಪಹಪಿಸುತ್ತಿರುವುದರಲ್ಲಿ ಅರ್ಥವಿದೆ. ಆದರೆ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದುಕೊಂಡು ರಾಜ್ಯದಲ್ಲಿ ನಾಲ್ಕು ವರ್ಷ ಆಡಳಿತ ನಡೆಸಿದ ಬಿಜೆಪಿಗೆ ಬಂದಂತಹ ಇಂತಹ ಹೀನಾಯ ಸ್ಥಿತಿ ಜನಸಾಮಾನ್ಯರಲ್ಲಿ ಆಶ್ಚರ್ಯ ತಂದಿದೆ.

ವಿಧಾನ ಮಂಡಲ ಅಧಿವೇಶನ ಅಂತೂ–ಇಂತೂ ತೆರೆ ಕಂಡಿತು. ಆದರೆ, ಸಾಧನೆ ಮಾತ್ರ ಶೂನ್ಯ. ಏಕೆಂದರೆ ಸದನದಲ್ಲಿ ಅರ್ಥಗರ್ಭಿತ ಚರ್ಚೆ ಯಾವ ವಿಷಯದ ಮೇಲೂ ನಡೆಯಲೇ ಇಲ್ಲ. ಉಭಯ ವಿರೋಧ ಪಕ್ಷಗಳಿಗೆ 'ಅಸ್ತ್ರ'ವೇ ಇಲ್ಲದಂತಾಗಿ ಗಾಳಿಯಲ್ಲಿ ಗುದ್ದಾಡಿದಂತಾಗಿತ್ತು. ಇನ್ನು ಆಡಳಿತ ಪಕ್ಷಕ್ಕೆ ಸದನವೇ ಪಕ್ಷದ ವೇದಿಕೆಯಂತಾಗಿ ತಾವು ಹೇಳಿದ್ದೇ ಫೈನಲ್ ಎಂಬಂತಾಯಿತು.

ಬರ, ಮಳೆ, ತರಕಾರಿ ಬೆಲೆ ಗಗನಕ್ಕೇರಿರುವುದು ಹೀಗೆ ಒಂದಲ್ಲಾ ಒಂದು ಕಾರಣಕ್ಕೆ ಜನಸಾಮಾನ್ಯರು, ಮತ್ತೊಂದೆಡೆ ರೈತರು ಬೀದಿಗೆ ಬಂದಿದ್ದಾರೆ. ಈ ವಿಚಾರದಲ್ಲಿ ಆಡಳಿತ ಇಲ್ಲವೇ ವಿರೋಧ ಪಕ್ಷದ ಶಾಸಕರು ಚರ್ಚೆ ಎತ್ತದೆ ಧರಣಿ, ಗದ್ದಲ, ಗಲಾಟೆಯಲ್ಲಿ ಮೈಮರೆತಿದ್ದು ಕ್ಷಮಿಸಲಾರದ ವರ್ತನೆಯಾಗಿದೆ.

ಕೈಲಾಗದವನು ಮೈ ಪರಚಿಕೊಂಡ ಎಂಬಂತೆ ವಿರೋಧ ಪಕ್ಷಗಳ ಪಾತ್ರ ಕಳಾಹೀನವಾಗಿತ್ತು. ಉಭಯ ಪಕ್ಷಗಳು ಎಚ್ಚೆತ್ತುಕೊಳ್ಳುವಂತೆ ಮಾಡಿ, ಸದನದ ಕಾರ್ಯಕಲಾಪಗಳನ್ನು ರಚನಾತ್ಮಕವಾಗಿ ನಡೆಸುವಲ್ಲಿ ಸಿದ್ದರಾಮಯ್ಯ ಎಚ್ಚರ ವಹಿಸಬೇಕಾಗಿತ್ತು. ಏಕೆಂದರೆ ಸದನದಲ್ಲಿ 'ಮುಖ್ಯಮಂತ್ರಿ' ಒಂದು ರೀತಿಯಲ್ಲಿ 'ಸಾರ್ವಭೌಮ'. ತಾವು ಮಾತ್ರ ಮಿಂಚಿದರೆ ಸಾಲದು. ವಿರೋಧ ಪಕ್ಷಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕೆಂಬ ಅರಿವು ಇರಬೇಕು.

ಜೆಡಿಎಸ್ ಶಾಸಕರ ಸಂಖ್ಯಾಬಲ ಬದಿಗಿಟ್ಟು ನೋಡಿದರೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಹೋರಾಟದ ಹಾದಿ ಜನ ಮೆಚ್ಚುವಂತಿತ್ತು. ಫೈಲನ್ನು ಮೇಜಿನ ಮೇಲೆ ಕುಕ್ಕುವುದು, ಜೇಬಿನಲ್ಲಿರುವ 'ಪೆನ್‌ಡ್ರೈವ್' ತೋರಿಸಿ, ಬುಟ್ಟಿಯಲ್ಲಿ ಹೆಬ್ಬಾವಿದೆ ಎಂದು ಹೆದರಿಸುವುದು ವಿರೋಧ ಪಕ್ಷಕ್ಕೆ ಶೋಭೆ ತರುವಂತಹ ವಿಚಾರವಲ್ಲ. ಇದೆಲ್ಲಾ ಹಳಸಲು ಆಟ. ಹೀಗಾಗಿ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ.

ಹೆಚ್.ಡಿ.ಕುಮಾರಸ್ವಾಮಿ, ತಮ್ಮ ಪಕ್ಷದ ಶಕ್ತಿ ಮೀರಿ ಹೋರಾಡುತ್ತಿದ್ದರೂ, ಬಿಜೆಪಿ ಅವರ ಕೈಗೊಂಬೆಯಂತೆ ಬಾಲ ಅಲ್ಲಾಡಿಸುತ್ತಿದ್ದುದು ಅದರ ಘನತೆಗೆ ತಕ್ಕ ನಡೆಯಲ್ಲ. ಮುಂದೆ ಎರಡೂ ಪಕ್ಷಗಳು ಹೊಂದಾಣಿಕೆ ಮಾಡಿಕೊಳ್ಳುವ ವಿಚಾರ ಬೇರೆ. ಆದರೆ ಈಗಲೇ ಜೆಡಿಎಸ್‌ಗೆ ಶರಣಾಗಿ ಹೋಗಿರುವಂತೆ ನಡೆದುಕೊಳ್ಳುತ್ತಿರುವುದು ಬಿಜೆಪಿ ತನ್ನ ಕಾರ್ಯಕರ್ತರಿಗೆ ಮಾಡುತ್ತಿರುವ ಅವಮಾನ.

ಬಜೆಟ್‌ನಲ್ಲಿರುವ ಲೋಪ–ದೋಷಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟು ಆಡಳಿತ ಪಕ್ಷವನ್ನು ಕಟ್ಟಿಹಾಕುವ ಬದಲು ತಾವೇ 'ಕಣ್ಣು, ಕಿವಿ, ಬಾಯಿ' ಮುಚ್ಚಿಕೊಂಡು ಗಾಂಧಿ ಪ್ರತಿಮೆ ಬಳಿ ಧರಣಿ ಕುಳಿತರೆ, ಮಹಾತ್ಮಗಾಂಧಿ ಇವರ ನೆರವಿಗೆ ಬರುವರೇ? ಅಷ್ಟೂ ವಿವೇಚನೆ ಇವರಿಗೆ ಬೇಡವೇ? ಯಾವ ಸೀಮೆ ವಿರೋಧ ಪಕ್ಷಗಳು?

ವಿಧಾನಮಂಡಲದ ಕಲಾಪಗಳು ಅಂದರೆ, ಆರೋಪ–ಪ್ರತ್ಯಾರೋಪ, ಶಾಸಕರ ಪ್ರಲಾಪ, ಆಕ್ರೋಶದ ಮಾತುಗಳು ಇದ್ದದ್ದೇನೆ. ಆದರೆ ಅದನ್ನೇ ನೆಪ ಮಾಡಿಕೊಂಡು ಉಪ ಸಭಾಪತಿ ಮೇಲೆ ಕಾಗದ ಹರಿದು ಎಸೆಯುವುದು ಗೌರವ ತರುವ ನಡೆಯಲ್ಲ. ಬಿಜೆಪಿಯವರು, ಮೂರು ತಿಂಗಳ ಹಿಂದೆ ತಾವೇ ಆಡಳಿತ ಪಕ್ಷವಾಗಿದ್ದನ್ನು ಮರೆಯಬಾರದು. ಯಾವ ಕ್ರಮವೂ ಔಚಿತ್ಯ ಮೀರಬಾರದು. ಹೀಗಾಗಿ ಅನಿವಾರ್ಯವಾಗಿ ಬಿಜೆಪಿ ಶಾಸಕರ ವಿರುದ್ಧ ಕ್ರಮ ಕೈಗೊಂಡಿರಬಹುದು. ಸಭಾಧ್ಯಕ್ಷರು ಅವರ ಕರ್ತವ್ಯ ಮಾಡಿದ್ದಾರೆ ಅಷ್ಟೆ.

> “ ವಿಧಾನಮಂಡಲದ ಕಲಾಪಗಳು ಅಂದರೆ, ಆರೋಪ–ಪ್ರತ್ಯಾರೋಪ, ಶಾಸಕರ ಪ್ರಲಾಪ, ಆಕ್ರೋಶದ ಮಾತುಗಳು ಇದ್ದದ್ದೇನೆ. ಆದರೆ ಅದನ್ನೇ ನೆಪ ಮಾಡಿಕೊಂಡು ಉಪ ಸಭಾಪತಿ ಮೇಲೆ ಕಾಗದ ಹರಿದು ಎಸೆಯುವುದು ಗೌರವ ತರುವ ನಡೆಯಲ್ಲ. ಬಿಜೆಪಿಯವರು, ಮೂರು ತಿಂಗಳ ಹಿಂದೆ ತಾವೇ ಆಡಳಿತ ಪಕ್ಷವಾಗಿದ್ದನ್ನು ಮರೆಯಬಾರದು. ಯಾವ ಕ್ರಮವೂ ಔಚಿತ್ಯ ಮೀರಬಾರದು. ಹೀಗಾಗಿ ಅನಿವಾರ್ಯವಾಗಿ ಬಿಜೆಪಿ ಶಾಸಕರ ವಿರುದ್ಧ ಕ್ರಮ ಕೈಗೊಂಡಿರಬಹುದು. ಸಭಾಧ್ಯಕ್ಷರು ಅವರ ಕರ್ತವ್ಯ ಮಾಡಿದ್ದಾರೆ ಅಷ್ಟೆ.

ಆದರೆ, ಸಭಾನಾಯಕರಾದ ಮುಖ್ಯಮಂತ್ರಿ, ಸ್ಪೀಕರ್ ಹಾಗೂ ವಿರೋಧ ಪಕ್ಷಗಳ ನಾಯಕರ ಸಭೆ ಕರೆದು ಸಂಧಾನ ಮಾಡಿ ಕಾರ್ಯಕಲಾಪ ಸುಗಮವಾಗಿ ನಡೆಯುವಂತೆ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಯಾರೂ ಇಲ್ಲದೇ ಇದ್ದಂತಹ ಖಾಲಿ ಕುರ್ಚಿಗಳಿಗೆ (ವಿರೋಧ ಪಕ್ಷಗಳು) ಭಾಷಣ ಮಾಡಿ, ಗಾಳಿಯಲ್ಲಿ ಕತ್ತಿ ಬೀಸಿ, ಜಯ ಸಾಧಿಸಿದಂತೆ ಬೀಗಿದ್ದು ಸರಿಯೇ?

ಇನ್ನು ನೂಕಾಟ–ತಳ್ಳಾಟದಲ್ಲಿ ಬಿದ್ದು ಗಾಯಗೊಂಡು, ಆಸ್ಪತ್ರೆ ಸೇರಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭೇಟಿ ಮಾಡಿ ಸಹಾನುಭೂತಿ ವ್ಯಕ್ತಪಡಿಸಿದ್ದು, ಮುಖ್ಯಮಂತ್ರಿ, ಸ್ಪೀಕರ್ ಸೌಜನ್ಯ ನಡೆ ಮೆಚ್ಚುವಂತಹದ್ದು. ಆದರೆ ಈ ಘಟನೆ ನಡೆಯದಂತೆ ತಡೆದು ಸದನದ ಕಲಾಪವನ್ನು ಸುಗಮವಾಗಿ ನಡೆಯುವಂತೆ ಮಾಡುವ ಕೆಲಸ ಸಭಾನಾಯಕರದ್ದು ಎಂಬುದನ್ನು ಮರೆಯಬಾರದು


ಇನ್ನು ರಾಜ್ಯದ ಬಡ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಸೇರಿದಂತೆ 5 ಭಾಗ್ಯಗಳನ್ನು ಕಲ್ಪಿಸಿದ್ದು, ಮುಖ್ಯಮಂತ್ರಿಗಳ ಸಾರ್ಥಕ ಕೆಲಸವೇ ಸರಿ. ಆದರೆ, ಮದ್ಯದ ಬೆಲೆ ಏರಿಸಿದ್ದು, ಹಾಲಿನ ದರ ಹೆಚ್ಚಿಸುವ ಮೂಲಕ ಮಧ್ಯಮ ವರ್ಗದ 'ಜನರ ಬಜೆಟ್' ಮೇಲೆ ಕಣ್ಣು ಹಾಕಿದ್ದು, ತರಕಾರಿ ಬೆಲೆ ಅದರಲ್ಲೂ ಟೊಮೆಟೋ ಬೆಲೆ ನಿಜ ಅರ್ಥದಲ್ಲಿ ಗಗನಕ್ಕೇರಿದ್ದು, ಸರ್ಕಾರ ಕೈಕಟ್ಟಿ ಕುಳಿತಿರುವುದು ಮಧ್ಯಮ ವರ್ಗದವರ ಶಾಪಕ್ಕೆ ಕಾರಣವಾಗಿದೆ.

ಶ್ರೀಮಂತರು ಹಾಗೂ ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಹಾಕಿ ಆ ಆದಾಯವನ್ನೇ ಬಡವರಿಗೆ ಹಂಚಿ ಭೇಷ್ ಎನ್ನಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇಂಥ ಗಹನವಾದ ವಿಚಾರಗಳು ಸದನದಲ್ಲಿ ಚರ್ಚೆಗೆ ಬಾರದಿದ್ದುದು ದುಃಖದ ಸಂಗತಿ. ವಿಧಾನಮಂಡಲ ಅಧಿವೇಶನದಲ್ಲಿನ ಕಾರ್ಯಕಲಾಪಗಳು ಎತ್ತ ಸಾಗುತ್ತಿದೆ ಎಂಬುದಕ್ಕೆ ಶುಕ್ರವಾರಷ್ಟೇ ತೆರೆಕಂಡ ವಿಧಾನಮಂಡಲ ಬಜೆಟ್ ಅಧಿವೇಶನವೇ ಸಾಕ್ಷಿ.

ಪಕ್ಷ ವಿರೋಧಿ ಚಟುವಟಿಕೆ; ಮಾಜಿ ಶಾಸಕ ವಾಸು ಅವರಿಗೆ ನೋಟಿಸ್ ಜಾರಿ

ಮೈಸೂರು,ಜು.22–ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇರೆಗೆ ಮಾಜಿ ಶಾಸಕ ವಾಸು ಅವರಿಗೆ ಕೆಪಿಸಿಸಿ ಶಿಸ್ತುಪಾಲನಾ ಸಮಿತಿಯಿಂದ ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಮಾಜಿ ಕೇಂದ್ರ ಸಚಿವ ಕೆ.ರೆಹಮಾನ್ ಖಾನ್ ಅಧ್ಯಕ್ಷರಾಗಿರುವ ಶಿಸ್ತುಪಾಲನಾ ಸಮಿತಿಯ ಸಂಚಾಲಕ ನಿವೇದಿತ ಆಳ್ವಾ ಅವರು ವಾಸು ಅವರಿಗೆ ನೋಟಿಸ್ ಜಾರಿ ಮಾಡಿದ್ದು, ಇತ್ತೀಚೆಗೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ಪಕ್ಷದ ಅಧಿಕೃತ ಅಭ್ಯರ್ಥಿ ಪರವಾಗಿ ತಾವು ಬಹಿರಂಗ ಪ್ರಚಾರ ಮಾಡದೇ ಪಕ್ಷದ ವಿರುದ್ಧವೇ ಪ್ರಚಾರ ನಡೆಸಿದ್ದೀರಿ ಎಂದು ಕೆಪಿಸಿಸಿಗೆ ದೂರು ಬಂದಿರುತ್ತದೆ ಎಂದು ನೋಟಿಸ್‌ನಲ್ಲಿ ತಿಳಿಸಿರುವ ಅವರು, ಏಳು ದಿನದೊಳಗಾಗಿ ಕೆಪಿಸಿಸಿ ಕಚೇರಿಗೆ ವಿವರಣೆ ನೀಡಬೇಕೆಂದು ಹೇಳಿದ್ದಾರೆ.




ದೂರು: ಮಾಜಿ ಶಾಸಕ ವಾಸು ವಿರುದ್ಧ ಕೆಪಿಸಿಸಿ ಮತ್ತು ಎಐಸಿಸಿಗೆ ಲಿಖಿತ ದೂರು ನೀಡಿದ್ದು ಮೈಸೂರು ನಗರ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರೂ ಆದ ಮಾಜಿ ಕಾರ್ಪೋರೇಟರ್ ಆರ್.ಸುನಂದ ಕುಮಾರ್. ಇತ್ತೀಚೆಗೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ವಿರುದ್ಧವಾಗಿ ಹಾಗೂ ಬಿಜೆಪಿ ಅಭ್ಯರ್ಥಿ ಪರವಾಗಿ ವಾಸು ಅವರು ಕೆಲಸ ಮಾಡಿದ್ದಾರೆ. ಚಾಮುಂಡಿಪುರಂನಲ್ಲಿರುವ ಹೋಟೆಲ್ ಅಪೂರ್ವದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದ ವಾಸು ಅವರು ಚಾಮರಾಜ, ಕೃಷ್ಣರಾಜ, ಮತ್ತು ಚಾಮುಂಡೇಶ್ವರಿ ಕ್ಷೇತ್ರ ಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮತ ಹಾಕಿಸಿ, ಗೆಲ್ಲಿಸಬೇಕೆಂದು ಭಾಷಣ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿರುವ ಸುನಂದ ಕುಮಾರ್, ವಾಸು ಅವರ ಭಾಷಣದ ತುಣುಕು ಇರುವ ವಿಡಿಯೋವೊಂದನ್ನು ಲಗತ್ತಿಸಿದ್ದರು. ಈ ದೂರನ್ನಾಧರಿಸಿ ವಾಸು ಅವರಿಗೆ ನೋಟಿಸ್ ನೀಡಲಾಗಿದೆ.

ಶರಣ ಸಂತ ಪರಂಪರೆಯ ಮಹಂತ

ಡಾ. ಬಿ.ವಿ.ವಸಂತಕುಮಾರ್

> “ ಮಹಂತ ಡಾ.ಎಚ್.ತಿಪ್ಪೇರುದ್ರಸ್ವಾಮಿ ಅವರ 95ನೆಯ ಸಂಸ್ಮರಣೆಯ ಕಾರ್ಯಕ್ರಮವು ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ 23ರ ಜುಲೈ 2023ರಂದು ಬೆಳಗ್ಗೆ 10.30ಕ್ಕೆ ಪರಮಪೂಜ್ಯ ಸುತ್ತೂರು ಶ್ರೀಗಳ, ಹೊನ್ನಾಳಿ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಮೂರು ಸಂಸ್ಮರಣಾ ಕೃತಿಗಳ ಲೋಕಾರ್ಪಣೆಯೊಂದಿಗೆ ನಡೆಯಲಿದೆ. ಆ ಕೃತಿಗಳನ್ನು ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಸನ್ಮಾನ್ಯ ಡಿ.ವಿ.ಪರಮಶಿವಮೂರ್ತಿ ಅವರು, ಹೆಸರಾಂತ ಸಾಹಿತಿಗಳಾದ ಡಾ.ಸಿ.ಪಿ.ಕೆ., ಡಾ.ವೀರಣ್ಣ ರಾಜೂರ ಅವರು ಮಾತನಾಡಲಿದ್ದಾರೆ. ಕೃತಿಗಳ ಸಂಪಾದಕರಿಗೆ ಸನ್ಮಾನ ಕಾರ್ಯಕ್ರಮವಿದೆ. ಕಾರ್ಯಕ್ರಮವು ಡಾ.ತಿಪ್ಪೇರುದ್ರಸ್ವಾಮಿ ಸಂಸ್ಮರಣಾ ಸಮಿತಿ, ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಮತ್ತು ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ, ಸಂವಹನ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ನಡೆಯಲಿದೆ.

ನೀಳವಾದ ಕಪ್ಪು ಕಾಯ, ಮಿರಮಿರನೆ ಮಿಂಚುವ ಜೀವ. ಆತ್ಮದ ವಸ್ತ್ರವನೇ ಮೇಲೆ ಹೊದ್ದಂತಹ ಬೆಳ್ಳನೆಯ ಜುಬ್ಬ ಪೈಜಾಮ, ಶರಣರ ಅನುಭಾವದ ಮೇಲೆ ವಿಶೇಷ ಉಪನ್ಯಾಸ. ಅವರ ಒಟ್ಟು ವ್ಯಕ್ತಿತ್ವವೇ ಅನುಭಾವಿಯನ್ನು ಕಣ್ಣಾರೆ ಕಂಡಂತಾದ ನಮ್ಮ ಅನು ಭವ. ಅವರ ಹೆಸರು ಡಾ.ಎಚ್. ತಿಪ್ಪೇ ರುದ್ರಸ್ವಾಮಿ. ಇದು ನಾನು 1988–90ರ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ ವಿದ್ಯಾರ್ಥಿಯಾಗಿದ್ದಾಗ ನಮಗೆ ವಿಶೇಷ ಉಪನ್ಯಾಸ ನೀಡಲು ಬಂದಾಗ ನಾನು ಕಂಡ ಮೊಟ್ಟ ಮೊದಲ ಅನುಭಾವಿಯೊಬ್ಬರ ದರ್ಶನ.



ಡಾ.ಎಚ್.ತಿಪ್ಪೇರುದ್ರಸ್ವಾಮಿ

ನಾನು ಎಂ.ಎ., ವಿದ್ಯಾರ್ಥಿಯಾಗಿದ್ದ ಹೊತ್ತಿಗೆ ಅವರು ನಿವೃತ್ತರಾಗಿದ್ದರು. ನಾನು ಅವರನ್ನು ಕಂಡದ್ದು ಅದೊಂದೇ ಬಾರಿ. ಆದರೆ ಅವರು ಅನೇಕ ರೀತಿಯಿಂದ ನನ್ನನ್ನಾವರಿಸಿದರು. ಒಂದು ಅವರ ಹಾಗೂ ಡಾ.ಎಂ.ಚಿದಾನಂದ ಮೂರ್ತಿಯವರ ಶೂನ್ಯ ಸಂಪಾದನೆಯನ್ನು ಕುರಿತ ವಾಗ್ವಾದದ ಕೃತಿಗಳು ಬೀರಿದ ಪ್ರಭಾವ ಅಪಾರ. ತಿಪ್ಪೇರುದ್ರಸ್ವಾಮಿಯವರು "ಶರಣರ ಅನುಭಾವ"ವನ್ನು ಅವರ ಸಂಶೋಧನಾ ಗ್ರಂಥದಲ್ಲಿ ನಮ್ಮ ಹೃದಯಕ್ಕೆ ಮುಟ್ಟಿಸುವಂತೆ ವಿವರಿಸಿರುವುದು ನನ್ನ ವಚನಸಾಹಿತ್ಯದ ಒಲವನ್ನು ನೂರ್ಮಡಿಗೊಳಿಸಿತು. ಅದೆಲ್ಲಕ್ಕಿಂತಲೂ ಮಿಗಿಲಾಗಿ ನಾನು ನನ್ನ ಎಂ.ಎ. ತರಗತಿಯಲ್ಲಿ ವಿಚಾರಸಂಕಿರಣದ ಪ್ರಬಂಧ ಮಂಡನೆಗಾಗಿ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರ "ಪರಿಪೂರ್ಣದೆಡೆಗೆ" ಕಾದಂಬರಿಯನ್ನು ಆಯ್ದುಕೊಂಡಿದ್ದೆ. ಅದು ನನ್ನ ಜೀವನದ ಅತ್ಯಂತ ಮಹತ್ವದ ಸಂಗತಿ. ಏಕೆಂದರೆ ನನಗೆ ಅದೊಂದು ಕಾದಂಬರಿ ಮಾತ್ರವಾಗಲಿಲ್ಲ. ನನ್ನ ಬುದ್ಧಿಕೋಶ ಭಾವಕೋಶದ ತುಂಬ ಅಲ್ಲಮನನ್ನು ಹಾಗೂ ಮಾಯೆ, ಅಕ್ಕ ಅವರುಗಳನ್ನು ಏಕಕಾಲದಲ್ಲಿ ತುಂಬಿದ ಜೀವ ಚೈತನ್ಯ. ಅದು ಕೇವಲ ಅಲ್ಲಮ, ಮಾಯೆ, ಅಕ್ಕಮಹಾದೇವಿಯರದ್ದಷ್ಟೇ ಅಲ್ಲ, ಅದು ಡಾ.ತಿಪ್ಪೇರುದ್ರಸ್ವಾಮಿಯವರದ್ದೂ ಹೌದು. ಅಲ್ಲಮಾದಿ ಶರಣರಿಂದಾಗಿ ತಿಪ್ಪೇರುದ್ರಸ್ವಾಮಿಯವರು ನನ್ನ ಪಾಲಿಗೆ ಶರಣಸಂತ ಪರಂ ಪರೆಯ ಮಹಂತರಾಗಿದ್ದಾರೆ. ಅವರೊಡನೆ ಕನ್ನಡಕ್ಕೆ ಗಾಂಧಿಯೂ ಬಂದದ್ದು ಕನ್ನಡಿಗರ ಸೌಭಾಗ್ಯದ ಸಂಗತಿ.

ಡಾ.ತಿಪ್ಪೇರುದ್ರಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನದ ಗೌರವ ನಿರ್ದೇಶಕರಾಗಿ ಅವರು ಕನ್ನಡಕ್ಕೆ ಗಾಂಧಿಯನ್ನು ತಂದದ್ದು ಕನ್ನಡದ ಸಾಂಸ್ಕೃತಿಕ ಆಧ್ಯಾತ್ಮಿಕ, ಸಾಮಾಜಿಕ ಸಂಪತ್ತನ್ನು ಹೆಚ್ಚಿಸಿದೆ. ಶ್ರೀ ತೆಂಡುಲ್ಕರ್ ಅವರಿಂದ ಇಂಗ್ಲಿಷಿನಲ್ಲಿ ರಚಿತವಾದ 'ಮಹಾತ್ಮ' ಗ್ರಂಥದ ಎಂಟೂ ಸಂಪುಟಗಳನ್ನು ಕನ್ನಡಕ್ಕೆ ತರುವ ಬೃಹತ್ ಯೋಜನೆಯನ್ನು ರೂಪಿಸಿ ಕನ್ನಡದ ಮನಸುಗಳಿಗೆ "ಮಹಾತ್ಮ" ದೊರೆಯುವಂತೆ ಮಾಡಿದವರು ಎಚ್.ತಿಪ್ಪೇರುದ್ರಸ್ವಾಮಿಯವರು. ಹೀಗೆ ಶ್ರೀ ತೆಂಡುಲ್ಕರ್ ಬರೆದ ಇಂಗ್ಲಿಷಿನ ಎಂಟು ಸಂಪುಟ 'ಮಹಾತ್ಮ' ಎಂಬ ಗಾಂಧೀಜಿ ಕುರಿತ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ, ಪ್ರಕಟಿಸಲು ಯೋಜನೆ ರೂಪಿಸಿ ಕಾರ್ಯ ಗತಗೊಳಿಸಿದ ಕೀರ್ತಿ ಡಾ.ಎಚ್.ತಿಪ್ಪೇರುದ್ರ ಸ್ವಾಮಿರವರಿಗೆ ಸಲ್ಲಬೇಕು. ಮಹಾತ್ಮ ಗಾಂಧಿಯನ್ನು ಕನ್ನಡಕ್ಕೆ ತರುವುದೆಂದರೆ ಸತ್ಯ, ಅಹಿಂಸೆ, ರಾಷ್ಟ್ರಭಕ್ತಿ, ಸ್ವಾತಂತ್ರ್ಯದ ಹಸಿವು, ಹೋರಾಟದ ಕಿಚ್ಚು, ಉಪವಾಸದ ಶಕ್ತಿ, ಭಗವದ್ ಪ್ರೇಮ, ಜನಸೇವೆಯ ಮಹಾ ಧರ್ಮವನ್ನು ಕನ್ನಡಕ್ಕೆ ತಂದಂತೆ; ಶರಣ ಸಂತ ಪರಂಪರೆಯ ಮಹಂತ 'ಮಹಾತ್ಮ'ನನ್ನು ಕನ್ನಡಕ್ಕೆ ತಂದಿದ್ದಾರೆ ಡಾ. ಎಚ್.ತಿಪ್ಪೇರುದ್ರಸ್ವಾಮಿಯವರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರಿನ ಚಿಸ್ತಿಂಯ ಫೌಂಡೇಶನ್ಸ್ ಗ್ರೂಪ್ ಟ್ರಸ್ಟಿಗಳ ವತಿಯಿಂದ ಶ್ರೀರಂಗಪಟ್ಟಣದ ಟಿಪ್ಪುವಿನ ಗೋರಿಯಲ್ಲಿ ಹಜರತ್ ನವಾಬ್ ಹೈದರ್ ಆಲಿ ಖಾನ್‌ರ 247ನೇ ವಾರ್ಷಿಕ ಗಂಧ ಉರುಸ್ ಆಚರಿಸಲಾಯಿತು. ಡಾ.ಮೆಹಬೂಬ್ ಖಾನ್, ಹಝರತ್ ಮೌಲಾನಾ ಹಾಫಿಜ್ ಖಾರಿ ಮೊಹಮ್ಮದ್ ಇನಾಯತ್-ಉರ್-ರೆಹಮಾನ್ ರಜ್ವಿ ಶಾಹಿ ಇಮಾಮ್, ಹಝರತ್ ಮೌಲಾನಾ ಮೊಹಮ್ಮದ್ ಮುಫ್ತಿ ಮುಸ್ತಾಕ್ ಅಹಮದ್ ಮಕ್ಬೂಲಿ ಸಾಹೇಬ್, ಖತೀಬ್ ಮಸೀದಿ ದರ್ಗಾಹಿ, ಹಝರತ್ ಮೌಲಾನಾ ಸೂಫಿ ವಲಿ ಬಾ ಸಾಹೇಬ್, ಡಾ.ಮೆಹಬೂಬ್ ಖಾನ್ ಸಾಹೇಬ್, ಎಸ್.ಕೆ.ಮುದಸಿರ್ ಪಾಷ, ಟ್ರಸ್ಟಿ ಮುದಸಿರ್ ಜಮೀಲ್, ಮಜೀದ್ ಅಹಮದ್, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ರದೀವುಲ್ಲಾ ಖಾನ್, ಕ್ವಾಜಾ ಮೊಹಮ್ಮದ್ ಮುಷೀರ್ ಚಿಸ್ತಿ ಅಮೀರ್ ಖಾನ್, ಅಹಮದ್ ಪಾಷ ಖಾದ್ರಿ, ತೌಫಿಕ್ ಮಜೀದ್ ಖಾನ್ ಮತ್ತು ಇತರರು ಹಾಜರಿದ್ದರು.

ನಕಲಿ ಜಾತಿ ಪ್ರಮಾಣಪತ್ರ ಪಡೆದ ವ್ಯಕ್ತಿ, ವಿತರಿಸಿದ ತಹಸೀಲ್ದಾರ್ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜು. 22- ನಕಲಿ ಜಾತಿ ಪ್ರಮಾಣಪತ್ರ ಪಡೆದ ಆರೋಪದ ಮೇರೆಗೆ ಹುಣಸೂರು ತಾಲೂಕು ಮರದೂರು ಗ್ರಾಮದ ಅಪ್ಪಣ್ಣ ಹಾಗೂ ಅವರಿಗೆ ಪ್ರಮಾಣಪತ್ರ ವಿತರಿಸಿದ ಹಿಂದಿನ ತಹಸೀಲ್ದಾರ್ ಸೇರಿದಂತೆ ಒಟ್ಟು ನಾಲ್ವರ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಮರದೂರು ಗ್ರಾಮದ ಮುದ್ದ ನಾಯಕ ಎಂಬುವರ ಪುತ್ರ ಅಪ್ಪಣ್ಣ (58) ಅವರು ಪ್ರವರ್ಗ 1ರಲ್ಲಿ ಬರುವ ಪರಿವಾರ ಜಾತಿಗೆ ಸೇರಿದವರಾಗಿದ್ದು, 2008ರ ಮಾರ್ಚ್ 19ರಂದು ಪರಿಶಿಷ್ಟ ಪಂಗಡದ ನಾಯಕ ಜಾತಿಯ ಪ್ರಮಾಣ ಪತ್ರವನ್ನು ಪಡೆದಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಇವರು ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಪರಿಶಿಷ್ಟ ಪಂಗಡದವರಿಗೆ ಹಾಗೂ ಸರ್ಕಾರಕ್ಕೆ ವಂಚಿಸಿದ್ದಾರೆ. ಅಪ್ಪಣ್ಣ ಪರಿ ಶಿಷ್ಟ ಪಂಗಡದ ನಾಯಕ ಜಾತಿ ಪ್ರಮಾಣ ಪತ್ರ ಪಡೆದಿರುವ ಬಗ್ಗೆ 2023ರ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯಲ್ಲಿ ಚರ್ಚಿಸಿ ಜಿಲ್ಲಾ ಧಿಕಾರಿಗಳು ನೀಡಿದ ಆದೇಶದ ಮೇರೆಗೆ ತಹಸೀಲ್ದಾರರು ಈ ಪ್ರಮಾಣ ಪತ್ರವನ್ನು 2023ರ ಜೂ.12ರಂದು ರದ್ದು ಪಡಿಸಿದ್ದಾರೆ ಎಂದು ದೂರಿನಲ್ಲಿ ವಿವರಿಸಿದ್ದು, ಅಪ್ಪಣ್ಣ, ಅವರಿಗೆ ಪ್ರಮಾಣ ಪತ್ರ ವಿತರಿಸಿದ ಅಂದಿನ ಮೈಸೂರು ತಾಲೂಕು ತಹಸೀಲ್ದಾರರು, ಪ್ರಮಾಣಪತ್ರ ನೀಡುವಂತೆ ವರದಿ ಸಲ್ಲಿಸಿದ್ದ ಮೈಸೂರು ತಾಲೂಕಿನ ರಾಜಸ್ವ ನಿರೀಕ್ಷಕರು ಮತ್ತು ಅಂದಿನ ಗ್ರಾಮ ಲೆಕ್ಕಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಸಬ್‌ಇನ್ಸ್‌ಪೆಕ್ಟರ್ ಅರ್ಚನಾ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಹುಲಿ ಚಲನವಲನದ ಮೇಲೆ ನಿಗಾ ಇಡಲು ಅಳವಡಿಸಿದ್ದ ಕ್ಯಾಮರಾ ಕಳವು

ಸರಗೂರು/ಬಿಳಿಕೆರೆ, ಜು. 22- ಹುಲಿ ಚಲನವಲನದ ಮೇಲೆ ನಿಗಾ ಇಡಲು ಹಾಗೂ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಅರಣ್ಯ ಪ್ರದೇಶದಲ್ಲಿ ಅಳವಡಿಸಿದ್ದ ಕ್ಯಾಮರಾಗಳನ್ನು ಕಳವು ಮಾಡಲಾಗಿದೆ.

ಎನ್.ಬೇಗೂರು ವಲಯದ ಬಸವೇಶ್ವರ ಗುಡಿ ಗಸ್ತಿನಲ್ಲಿ ಅರಣ್ಯದಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಸ್ವಯಂಚಾಲಿತವಾಗಿ ಚಿತ್ರೀಕರಿಸುವ ಐಆರ್ ಕ್ಯಾಮರಾವನ್ನು ಅಳವಡಿಸಲಾಗಿತ್ತು. ಜುಲೈ 18ರಂದು ಅರಣ್ಯ ಸಿಬ್ಬಂದಿ ಗಮನಿಸಿದಾಗ ಈ ಕ್ಯಾಮರಾ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಜುಲೈ 21ರಂದು ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಜೀನಹಳ್ಳಿ ಗಸ್ತಿನ ಬಸವನಗುಡಿ ಅರಣ್ಯ ಭಾಗದಲ್ಲಿ ಹುಲಿಗಳ ಚಲನವಲನದ ಮೇಲೆ ನಿಗಾ ವಹಿಸಲು ಅಳವಡಿಸಲಾಗಿದ್ದ 2 ಟ್ರ್ಯಾಪ್ ಕ್ಯಾಮರಾಗಳು ಮತ್ತು ಅದರ ಮೆಮೊರಿ ಕಾರ್ಡ್‌ಗಳನ್ನು ಕಳವು ಮಾಡಿರುವ ಬಗ್ಗೆ ಅರಣ್ಯ ಸಿಬ್ಬಂದಿಗೆ ಜು.17ರಂದು ಗೊತ್ತಾಗಿದ್ದು, ಬಿಳಿಕೆರೆ ಠಾಣೆಯಲ್ಲಿ ಜುಲೈ 19ರಂದು ಪ್ರಕರಣ ದಾಖಲಾಗಿದೆ.

ಸುಕನ್ಯಾ ಸಮೃದ್ಧಿ ಯೋಜನೆಯ ಜನರ ಹಣ ದುರ್ಬಳಕೆ; ಅಂಚೆ ಪಾಲಕನ ವಿರುದ್ಧ ಕೇಸ್

ಹೆಚ್.ಡಿ.ಕೋಟೆ, ಜು. 22- ಸುಕನ್ಯಾ ಸಮೃದ್ಧಿ ಯೋಜನೆ ಖಾತೆಯಲ್ಲಿ ಸಾರ್ವಜನಿಕರ ಹಣವನ್ನು ಸರ್ಕಾರದ ಖಾತೆಗೆ ಜಮಾ ಮಾಡದೇ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಅಂತರಸಂತೆ ಹೋಬಳಿ ಡಿಬಿ ಕುಪ್ಪೆ ಗ್ರಾಮದ ಅಂಚೆ ಕಚೇರಿಯ ಹಿಂದಿನ ಅಂಚೆ ಪಾಲಕನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

1992ರಿಂದ 2016ರವರೆಗೆ ಈ ಅಂಚೆ ಕಚೇರಿಯ ಅಂಚೆ ಪಾಲಕರಾಗಿದ್ದ ಎ.ಡಿ.ಶಿವರಾಜ್ ಆರೋಪಕ್ಕೆ ಗುರಿಯಾದವರಾಗಿದ್ದು, ಇವರು 2014ರ ಅಕ್ಟೋಬರ್ 21ರಿಂದ 2016ರ ನವೆಂಬರ್ 17ರವರೆಗೆ ಸುಕನ್ಯಾ ಸಮೃದ್ಧಿ ಯೋಜನಾ ಖಾತೆಯಲ್ಲಿ ಸಾರ್ವಜನಿಕರ ಹಣವನ್ನು ಸರ್ಕಾರಿ ಖಾತೆಗೆ ಜಮೆ ಮಾಡದೆ 68,800 ರೂ. ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಅಂಚೆ ಇಲಾಖೆ ಹುಣಸೂರು ಉಪವಿಭಾಗದ ಇನ್ಸ್‌ಪೆಕ್ಟರ್ ಮಧು ಅವರು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಅಂತರಸಂತೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು, ಜು. 22- ಅಪರಿಚಿತ ವಾಹನ ಡಿಕ್ಕಿ ಹೊಡೆದು ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರು-ದೊಡ್ಡಕಾನ್ಯ ಮುಖ್ಯ ರಸ್ತೆಯಲ್ಲಿರುವ ಜ್ಞಾನಭಾರತಿ ಲೇಔಟ್ ಬಳಿ ಸಂಭವಿಸಿದೆ.



ದೊಡ್ಡಕಾನ್ಯ ಗ್ರಾಮದ ಪೇಂಟರ್ ಶಿವರಾಜ್(28) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜುಲೈ 20ರಂದು ಸಂಜೆ ಮೈಸೂರಿನಿಂದ ದೊಡ್ಡಕಾನ್ಯಗೆ ಬೈಕ್‌ನಲ್ಲಿ (ಕೆಎ 09-ಇಡಬ್ಲ್ಯೂ 2855) ತೆರಳುತ್ತಿದ್ದಾಗ ಜ್ಞಾನಭಾರತಿ ಲೇಔಟ್ ಬಳಿ ಇವರ ಬೈಕ್‌ಗೆ ಹಿಂದಿನಿಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಫಲಕಾರಿಯಾಗದೇ ಅಂದು ರಾತ್ರಿ 8.30ರ ವೇಳೆಯಲ್ಲಿ ಸಾವನ್ನಪ್ಪಿದ್ದಾರೆ. ಮೈಸೂರು ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಿಟೆಕ್ನಿಕ್ ಬಾಗಿಲು ಮುರಿದು ಸಿಸಿಟಿವಿ ಡಿವಿಆರ್, ನಗದು ಕಳವು

ದೇವನೂರು,ಜು.22-ನಂಜನಗೂಡು ತಾಲೂಕು ದೇವನೂರು ಗ್ರಾಮದಲ್ಲಿರುವ ಶ್ರೀ ಗುರುಮಲ್ಲೇಶ್ವರ ಪಾಲಿಟೆಕ್ನಿಕ್‌ನ ಬಾಗಿಲು ಮುರಿದು ಸಿಸಿಟಿವಿ ಡಿವಿಆರ್ ಮತ್ತು ನಗದು ಕಳವು ಮಾಡಲಾಗಿದೆ. ಜು.20ರಂದು ಸಂಜೆ ಕಾಲೇಜಿನ ಬೀಗ ಹಾಕಿಕೊಂಡು ಹೋಗಿದ್ದು, ಮರುದಿನ ಬೆಳಗ್ಗೆ ಕಾವಲುಗಾರ ಬಂದು ನೋಡಿದಾಗ ಖದೀಮರು ಕಾಲೇಜಿನ ಬೀಗ ಮುರಿದು ಒಳನುಗ್ಗಿ ಮೂರು ಕಬ್ಬಿಣದ ಅಲ್ಮೇರಾಗಳ ಬೀಗಗಳನ್ನು ಕೂಡ ಮುರಿದು ಹಾಕಿ ಸಿಸಿಟಿವಿ ಡಿವಿಆರ್ ಮತ್ತು 15 ಸಾವಿರ ರೂ. ನಗದು ಕಳವು ಮಾಡಿದ್ದಾರೆ ಎಂದು ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಅಂಕಪ್ಪ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕವಲಂದೆ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಲಾರಿ ಡಿಕ್ಕಿ: ಸ್ಕೂಟರ್ ಸವಾರ ಸಾವು

ತಿ.ನರಸೀಪುರ, ಜು. 22- ಲಾರಿ ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಸಾವನ್ನಪ್ಪಿದ ಘಟನೆ ತಿ.ನರಸೀಪುರ ಪಟ್ಟಣದ ಕೆಇಬಿ ಕಚೇರಿ ಮುಂದೆ ಸಂಭವಿಸಿದೆ.



ತಿ.ನರಸೀಪುರ ತಾಲೂಕು ಹಾಡ್ಯ ಗ್ರಾಮದ ರುದ್ರನಾಯಕ(35) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜುಲೈ 21ರಂದು ಸಂಜೆ 6 ಗಂಟೆ ಸುಮಾರಿನಲ್ಲಿ ತಿ.ನರಸೀಪುರ ಪಟ್ಟಣದ ತಿರುಮಕೂಡಲು ಸರ್ಕಲ್ ಕಡೆಯಿಂದ ವಿದ್ಯೋದಯ ಕಾಲೇಜು ಕಡೆಗೆ ಸ್ಕೂಟರ್‌ನಲ್ಲಿ (ಕೆಎ 09-ಇಪಿ 2179) ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಲಾರಿ (ಕೆಎಲ್ 12-ಎನ್ 9963) ಇವರಿಗೆ ಡಿಕ್ಕಿ ಹೊಡೆದು ಲಾರಿ ಚಕ್ರ ಇವರ ತಲೆ ಮೇಲೆ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಪಾಕ್‌ಗೆ ಜಾಗತಿಕ ಮನ್ನಣೆ

ವಿಶ್ವದ ಟಾಪ್ 50 ಬೆಸ್ಟ್ ಸ್ಟ್ರೀಟ್ ಫುಡ್ ಸ್ವೀಟ್‌ಗಳಲ್ಲಿ ಮೈಸೂರು ಪಾಕ್‌ಗೆ 14ನೇ ಸ್ಥಾನ

- ಮೈಸೂರು ಪಾಕ್‌ಗೆ 4.4 ರೇಟಿಂಗ್
- ಮೈಸೂರಿನ ಹಿರಿಮೆಗೆ ಮತ್ತೊಂದು ಗರಿ
- ರಾಜರ ಕಾಲದ ಸಿಹಿ ಪಾಕಕ್ಕೆ ಸಾಟಿ ಇಲ್ಲ

ಮೈಸೂರು, ಜು.22(ಬಿಎಲ್‌ಯು)- ಬಾಯಲ್ಲಿ ನೀರೂರಿಸುವ ಮೈಸೂರು ಪಾಕ್‌ಗೆ ಈಗ ಜಾಗತಿಕ ಮನ್ನಣೆ ದೊರೆತಿದೆ. ದೇಶ-ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿರುವ ಮೈಸೂರು ಪಾಕ್‌ಗೆ ದೊರೆತಿರುವ ವಿಶ್ವ ಮನ್ನಣೆಯಿಂದ ಮೈಸೂರಿನ ಹಿರಿಮೆ ಗರಿಮೆ ಮತ್ತಷ್ಟು ಹೆಚ್ಚಾಗಿದೆ.

ವಿಶ್ವದ ಸಿಹಿ ತಿಂಡಿ ತಿನಿಸುಗಳ ಬಗ್ಗೆ ಮಾಹಿತಿ ಕಲೆ ಹಾಕುವ ಆನ್‌ಲೈನ್ ಟೇಸ್ಟ್ ಅಟ್ಲಾಸ್ ವಿಶ್ವದ ಟಾಪ್ 50 ಬೆಸ್ಟ್ ಸ್ಟ್ರೀಟ್ ಫುಡ್ ಸ್ವೀಟ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಜೊತೆಗೆ ಪ್ರತಿಯೊಂದು ಸ್ವೀಟ್ಸ್‌ಗೂ ರ‍್ಯಾಂಕಿಂಗ್ ಕೂಡ ನೀಡಿದೆ.



ಟೇಸ್ಟ್ ಅಟ್ಲಾಸ್‌ನ ವಿಶ್ವದ ಟಾಪ್ 50 ಬೆಸ್ಟ್ ಸ್ಟ್ರೀಟ್ ಫುಡ್ ಸ್ವೀಟ್‌ಗಳಲ್ಲಿ ಮೈಸೂರಿನ ಮೈಸೂರು ಪಾಕ್ 14ನೇ ಸ್ಥಾನ ಪಡೆದಿದೆ. ಇನ್ನು 50 ಸ್ವೀಟ್ಸ್‌ನ ರ‍್ಯಾಂಕಿಂಗ್‌ನಲ್ಲಿ ಮೈಸೂರು ಪಾಕ್‌ಗೆ 4.4 ರೇಟಿಂಗ್ ದೊರೆತಿದೆ. ಮೈಸೂರು ಪಾಕ್ ಬಿಟ್ಟರೆ ಭಾರತದ ಇನ್ನೆರಡು ಸ್ವೀಟ್ಸ್‌ಗಳಿಗೆ ಟೇಸ್ಟ್ ಅಟ್ಲಾಸ್‌ನಲ್ಲಿ ಸ್ಥಾನ ದಕ್ಕಿದೆ. ಕುಲ್ಫಿ 4.3 ರೇಟಿಂಗ್ ಪಡೆಯುವ ಮೂಲಕ 18ನೇ ಸ್ಥಾನದಲ್ಲಿದ್ದರೆ, ಕುಲ್ಫಿ ಫಲೂದಾ 4.1 ರೇಟಿಂಗ್‌ನೊಂದಿಗೆ 32ನೇ ಸ್ಥಾನ ಪಡೆದಿದೆ.

ಈಗಾಗಲೇ ಮೈಸೂರು ಪಾಕ್ ದೇಶ-ವಿದೇಶಗಳಲ್ಲಿ ಹೆಸರುವಾಸಿಯಾಗಿದೆ. ಈಗ ಜಾಗತಿಕ ಮನ್ನಣೆಯ ರ‍್ಯಾಂಕಿಂಗ್‌ನಲ್ಲಿ ಸ್ಥಾನ ದೊರೆತಿರುವ ಕಾರಣ ಮೈಸೂರು ಪಾಕ್‌ನ ಪ್ರಖ್ಯಾತಿ ಇಮ್ಮಡಿಗೊಳ್ಳಲಿದೆ. ಮೈಸೂರು ಪಾಕ್ ಜನ್ಮ ತಾಳಿದ್ದೆ ಒಂದು ಕುತೂಹಲ ಕಥನ. ಅದು 1934ರ ಕಾಲ. ಮೈಸೂರು ಅರಮನೆಯ ಮುಖ್ಯ ಬಾಣಸಿಗರಾಗಿದ್ದ ಕಾಕಾಸುರ ಮಾದಪ್ಪ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಿಹಿ ತಿಂಡಿಯೊಂದನ್ನು ನೀಡಿದರು. ಇಂತಹ ಸಿಹಿ ತಿಂಡಿ ಮಾಮೂಲು. ಆದರೆ ಮೈಸೂರಿನ ಹೆಸರು ಪ್ರಖ್ಯಾತಿಗೊಳಿಸುವ ವಿಶಿಷ್ಟವಾದ ಹೊಸದಾದ ಸಿಹಿ ತಿಂಡಿಯೊಂದನ್ನು ತಯಾರಿಸಿ ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಾಕಾಸುರ ಮಾದಪ್ಪ ಅವರಿಗೆ ಸಲಹೆ ನೀಡಿದರಂತೆ.



ಆಗ ಚಿಂತೆಗೆ ಬಿದ್ದ ಕಾಕಾಸುರ ಮಾದಪ್ಪ ಅವರು ಬೆಣ್ಣೆಕಾಯಿಸಿದ ತುಪ್ಪದಿಂದ ಸಿಹಿ ತಿಂಡಿ ತಯಾರಿಸಲು ನಿರ್ಧರಿಸಿದರು. ಕಡ್ಲೆ ಹಿಟ್ಟಿಗೆ ಹದವಾದ ಬೆಣ್ಣೆ ಕಾಯಿಸಿದ ತುಪ್ಪ, ಬೆಲ್ಲ, ಅಡುಗೆ ಅರಿಶಿನ ಹಾಗೂ ಏಲಕ್ಕಿ ಬೆರೆಸಿ ಹದವಾದ ಪಾಕ ಇರುವ ಸಿಹಿ ತಿಂಡಿ ತಯಾರಿಸಿ ಮಹಾರಾಜರಿಗೆ ಬಡಿಸಿದರು. ಕಾಕಾಸುರ ಮಾದಪ್ಪ ಅವರು ನೀಡಿದ ಸಿಹಿ ತಿಂಡಿಯನ್ನು ಚಪ್ಪರಿಸಿ ತಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆ ಸಿಹಿ ತಿಂಡಿಗೆ 'ಮೈಸೂರು ಪಾಕ' ಎಂದು ಹೆಸರಿಟ್ಟರು. ದಿನ ಕಳೆದಂತೆ ಮೈಸೂರು ಪಾಕ ಜನರ ಬಾಯಲ್ಲಿ ಮೈಸೂರು ಪಾಕ್ ಆಗಿ ಉಳಿಯಿತು.

ಹೀಗೆ 90 ವರ್ಷದ ಹಿಂದೆ ರೂಪ ಪಡೆದ ಮೈಸೂರು ಪಾಕ್‌ಗೆ ಈಗ ಜಾಗತಿಕ ಮನ್ನಣೆ ದೊರೆತಿದೆ. ಮೈಸೂರು ಪಾಕ್‌ಗೆ ರೂಪ ನೀಡಿದ ಕಾಕಾಸುರ ಮಾದಪ್ಪ ಅವರ 5ನೇ ತಲೆಮಾರಿನವರು ಈಗಲೂ ಮೈಸೂರಿನಲ್ಲಿ ಸಿಹಿ ತಿಂಡಿ ಮಾರಾಟ ಮಾಡುತ್ತಿದ್ದಾರೆ. ಗುರು ಸ್ವೀಟ್ಸ್ ಎಂದೇ ಪ್ರಖ್ಯಾತವಾದ ಇಲ್ಲಿ ಬೆಣ್ಣೆ ಕಾಯಿಸಿದ ತುಪ್ಪದಿಂದ ಮಾಡಿದ ಮೈಸೂರು ಪಾಕ್ ಎಲ್ಲರ ಅಚ್ಚುಮೆಚ್ಚು. ಸ್ಥಳೀಯರು ಮಾತ್ರವಲ್ಲದೆ ದೇಶ-ವಿದೇಶದ ಪ್ರವಾಸಿಗರು ಮೈಸೂರಿಗೆ ಬಂದರೆ ಮೈಸೂರು ಪಾಕ್ ರುಚಿ ನೋಡದೆ ಹೋಗುವುದಿಲ್ಲ.



ಈಗ ಮೈಸೂರು ಪಾಕ್ ಅನ್ನು ವಿವಿಧ ರೀತಿಯಲ್ಲಿ ತಯಾರು ಮಾಡಲಾಗುತ್ತಿದೆ. ಬೆಣ್ಣೆ ಕಾಯಿಸಿದ ತುಪ್ಪದಿಂದ ತಯಾರಿಸಿದ ಮೈಸೂರು ಪಾಕ್, ವನಸ್ಪತಿ ತುಪ್ಪದಿಂದ ತಯಾರಿಸಿದ ಮೈಸೂರು ಪಾಕ್, ತುಪ್ಪ ಹಾಗೂ ಹಾಲಿನಿಂದ ತಯಾರಿಸಿದ ಮೈಸೂರು ಪಾಕ್, ತುಪ್ಪ ಹಾಗೂ ಬೆಲ್ಲದಿಂದ ತಯಾರಿಸಿದ ಮೈಸೂರು ಪಾಕ್, ತುಪ್ಪ ಹಾಗೂ ಬಾದಾಮಿ, ಗೋಡಂಬಿಯಿಂದ ತಯಾರಿಸಿದ ಮೈಸೂರು ಪಾಕ್, ತುಪ್ಪ ಹಾಗೂ ಡ್ರೈಫ್ರೂಟ್ಸ್‌ನಿಂದ ತಯಾರಿಸಿದ ಮೈಸೂರು ಪಾಕ್ ಕೂಡ ದೊರೆಯುತ್ತಿದೆ. ಮೈಸೂರಿನ ಬಹುತೇಕ ಸ್ವೀಟ್ಸ್ ಅಂಗಡಿಗಳಲ್ಲಿ ತಯಾರಿಸುವ ಮೈಸೂರು ಪಾಕ್‌ನಲ್ಲಿ ಯಾವುದೇ ರಾಸಾಯನಿಕ ಬಣ್ಣ ಬಳಸುವುದಿಲ್ಲ. ಈ ಕಾರಣದಿಂದ ಮೈಸೂರಿನಲ್ಲಿ ತಯಾರಿಸುವ ಮೈಸೂರು ಪಾಕ್ ತುಂಬಾ ಪ್ರಸಿದ್ಧಿ. ಜೊತೆಗೆ ಬಾಯಿ ಚಪ್ಪರಿಸುವ ರುಚಿ.

ಸುಯೋಗ್ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ

ಸೇವಾ ಶ್ರೇಷ್ಠತೆ ಮೆರೆದ ವೈದ್ಯರಿಗೆ ಸನ್ಮಾನ

ಮೈಸೂರು, ಜು.22(ಎಂಕೆ)- ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಅಭಿನಂದಿಸಲಾಯಿತು.



ವೈದ್ಯರಾದ ಡಾ.ಟಿ.ಅಮರನಾಥ್, ಡಾ.ಎನ್.ಕಾರ್ತಿಕ್ ಉಡುಪ, ಡಾ.ಶ್ರೀನಿವಾಸ ನಾಗರಾಜು, ಡಾ.ಕೆ.ಆದಿತ್ಯ ಉಡುಪ, ಡಾ.ಬಿ.ಜೆ.ಪೊನ್ನಪ್ಪ ಹಾಗೂ ಡಾ.ಪಿ.ಆರ್. ಮೋಹನ್‌ಕುಮಾರ್ ಅವರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಇಂದು ಮನುಷ್ಯರನ್ನು ಬಾಧಿಸುತ್ತಿರುವ ಸೋಂಕು ಹಾಗೂ ಸೋಂಕೇತರ ಕಾಯಿಲೆಗಳಿಗೆ ಚಿಕಿತ್ಸೆ ನೀಡುವಲ್ಲಿ ಸರ್ಕಾರ ಆಸ್ಪತ್ರೆಗಳ ಜೊತೆಗೆ ಖಾಸಗಿ ಆಸ್ಪತ್ರೆಗಳು ಸೇವೆ ನೀಡುತ್ತಿರುವುದು ಶ್ಲಾಘನೀಯ. ಮೈಸೂರು ನಗರದಲ್ಲಿ 40ಕ್ಕೂ ಹೆಚ್ಚು ಪ್ರತಿಷ್ಠಿತ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿದ್ದು, ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ ಎಂದರು.

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ರಾಷ್ಟ್ರೀಯ ವೈದ್ಯ ದಿನಾಚರಣೆ ಬಗ್ಗೆ ತಿಳಿಸಿಕೊಟ್ಟರಲ್ಲದೆ ಡಾ.ಬಿ.ಸಿರಾಯ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರತಿಜ್ಞಾವಿಧಿ ಬೋಧಿಸಿದರು. ಸುಯೋಗ್ ಆಸ್ಪತ್ರೆ ನಿರ್ದೇಶಕರಾದ ಡಾ.ಯಶಿತಾ ರಾಜ್, ಸಿಇಓ ಡಾ.ಎಂ.ವಿ.ಮಂಜು ನಾಥ್, ಮ್ಯಾನೇಜರ್ ಪಿ.ಜೆ.ಅರುಣ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ದೇವರಾಜ ಮಾರ್ಕೆಟ್ ಅಧ್ಯಕ್ಷರಾದ ಕೆ.ದಿನೇಶ್ ಅವರನ್ನು ಶಾಸಕ ಕೆ.ಹರೀಶ್‌ಗೌಡ, ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ಪ್ರದೀಪ್ ಸಿಂಗ್, ಉದ್ಯಮಿಗಳಾದ ಜಾಕಿರ್ ಹುಸೇನ್, ಯಶ್ವಂತ್, ಮುದಾಸಿರ್, ಅನಿಲ್, ನವೀನ್ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಪ್ರಾದೇಶಿಕ ವಾಹಿನಿಗಳ ಬಂದ್ ಮಾಡದಂತೆ ಸಚಿವರ ಮನವಿ

ಬೆಂಗಳೂರು: ಪ್ರಾದೇಶಿಕ ವಾಹಿನಿಗಳ ಬಂದ್ ಮಾಡದಂತೆ ಕೇಂದ್ರ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮನವಿ ಮಾಡಿಕೊಂಡಿದ್ದಾರೆ.

ಈ ಸಂಬಂಧ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಅವರಿಗೆ ಶಿವರಾಜ್ ತಂಗಡಗಿ ಪತ್ರ ಬರೆದಿದ್ದಾರೆ. ಪತ್ರದಲ್ಲಿ ಕೇಂದ್ರ ಸರ್ಕಾರವು ಪ್ರಸಾರ ಭಾರತಿ ಮೂಲಕ ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಪ್ರಚಾರ ಮಾಡುತ್ತಿದೆ, ಇದರಲ್ಲಿ ಪ್ರಧಾನ ಮಂತ್ರಿಗಳ ಮನ್ ಕಿ ಬಾತ್ ಕೂಡ ಸೇರಿದೆ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಧ್ವನಿಮುದ್ರಿತ ಆವೃತ್ತಿಗಳನ್ನು ಪ್ರಸಾರ ಮಾಡಲಾಗುತ್ತಿದೆ. ಬಿಜೆಪಿ ಸರ್ಕಾರದ ರಾಜಕೀಯ ಆಕಾಂಕ್ಷೆಗಳನ್ನೂ ಇವುಗಳ ಮೂಲಕವೇ ಈಡೇರಿಸಿಕೊಳ್ಳಲಾಗುತ್ತಿದೆ. ಎಲ್ಲವೂ ಗೊತ್ತಿದ್ದರೂ, ಅವುಗಳನ್ನು ಪರೋಕ್ಷವಾಗಿ ಒಪ್ಪಿಕೊಳ್ಳುವ ಬೆಳವಣಿಗೆಗಳು ಕಂಡುಬಂದಿದೆ ಕರ್ನಾಟಕದ ರೇನ್‌ಬೋ ಎಫ್‌ಎಂ 101.3 ಎಂಬ ಪ್ರಾದೇಶಿಕ ಚಾನೆಲ್ ಅನ್ನು ಲಕ್ಷಾಂತರ ಜನರು ಕೇಳುತ್ತಿದ್ದು, ಈ ಪ್ರಾದೇಶಿಕ ವಾಹಿನಿ ಬಂದ್ ಮಾಡಲು ಚಿಂತಿಸಲಾಗುತ್ತಿದೆ ಎನ್ನಲಾಗಿದೆ.

ಪಶು ಆರೋಗ್ಯ ತಪಾಸಣೆ

ಮೈಸೂರು,ಜು.22 (ಎಂಕೆ) -ಟಿ.ನರಸೀಪುರ ಪಶು ಚಿಕಿತ್ಸಾಲಯ ಹಾಗೂ ನಾಗನಹಳ್ಳಿ ಸಾವಯುವ ಕೃಷಿ ಸಂಶೋಧನಾ ಕ್ಷೇತ್ರದ ವತಿಯಿಂದ ಪಶು ಆರೋಗ್ಯ ತಪಾಸಣೆ ನಡೆಸಲಾಯಿತು.



ಟಿ.ನರಸೀಪುರ ತಾಲೂಕಿನ ತುಂಬಲ ಗ್ರಾಮದಲ್ಲಿ ನಡೆದ ಪಶು ಆರೋಗ್ಯ ತಪಾಸಣೆಯಲ್ಲಿ 70ಕ್ಕೂ ಹೆಚ್ಚು ಜಾನುವಾರುಗಳ ಆರೋಗ್ಯ ಪರಿಶೀಲನೆ ಮಾಡುವುದರ ಜೊತೆಗೆ ಹಾಲಿನ ಗುಣಮಟ್ಟ ಹೆಚ್ಚಿಸುವಲ್ಲಿ ರೈತರು ವಹಿಸಬೇಕಾದ ಕ್ರಮದ ಬಗ್ಗೆ ತಿಳಿಸಿಕೊಡಲಾಯಿತು. ಕೃಷಿ ವಿವಿ ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕಿ(ಹೈನುಗಾರಿಕೆ) ಡಾ.ಎ. ನಾಗಮಣಿ, ಕಾಲಕಾಲಕ್ಕೆ ಜಾನುವಾರುಗಳ ತಪಾಸಣೆಯಿಂದ ಪಶು ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಿರ್ವಹಣೆಯು ತುಂಬಾ ಸುಲಭವಾಗುತ್ತದೆ. ಹೈನುಗಾರಿಕೆಯಲ್ಲಿ ಪಶುಗಳ ಹಾಲಿನ ಗುಣಮಟ್ಟವನ್ನು ಹೆಚ್ಚಿಸಲು ಪೌಷ್ಠಿಕ ನೆಕ್ಕಬಿಲ್ಲೆ, ವೈಜ್ಞಾನಿಕವಾಗಿ ರಸಮೇವು ತಯಾರಿಕೆ ಹಾಗೂ ಸಮತೋಲನ ಆಹಾರವನ್ನು ಒದಗಿಸುವುದರಿಂದ ಉತ್ತಮ ಹಾಲಿನ ಜೊತೆಗೆ ಅಧಿಕ ಆದಾಯವನ್ನು ಗಳಿಸಬಹುದೆಂದು ತಿಳಿಸಿದರು.

ಇದೇ ವೇಳೆ ಜಾನುವಾರುಗಳಿಗೆ ಮಿನರಲ್ ಮಿಕ್ಸರ್ ಮತ್ತು ಔಷಧಿಗಳನ್ನು ನೀಡಲಾಯಿತು. ಹಿರಿಯ ಪಶುವೈದ್ಯಾಧಿಕಾರಿ ಡಾ.ರಾಜೇಶ್, ಡಾ.ಜನಾರ್ಧನ್, ಡಾ.ರುಜನ್, ರಂಗಸ್ವಾಮಿ, ನಂಜುಂಡಸ್ವಾಮಿ, ಕ್ಷೇತ್ರ ಸಹಾಯಕ ಸಂದೇಶ್ ಇದ್ದರು.

ಮಂಟೇಸ್ವಾಮಿ ಕಾವ್ಯ ಕುರಿತು ತಿಳಿದುಕೊಳ್ಳಿ



ಮೈಸೂರು, ಜು.22(ಎಸ್‌ಪಿಎನ್)- ಮಂಟೇಸ್ವಾಮಿ ಕಾವ್ಯಗಳ ಕುರಿತು ಇಂದಿನ ಪೀಳಿಗೆ ತಿಳಿದುಕೊಳ್ಳಬೇಕು ಮತ್ತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಚಾಮರಾಜನಗರ ಜಿಲ್ಲೆ ಹರವೆ ಪಿಯು ಕಾಲೇಜು ಪ್ರಾಂಶುಪಾಲ ಮಹೇಶ್ ಹರವೆ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣದ ಆವರಣದಲ್ಲಿರುವ ಶ್ರೀರಂಗ ರಂಗಮಂದಿರದಲ್ಲಿ ಆಶ್ರಯ ಪ್ರಗತಿ ಸಂಘಗಳ ಒಕ್ಕೂಟ ಮತ್ತು ನಯನ ಪ್ರದೇಶಮಟ್ಟದ ಸಂಘದ ಸಹಯೋಗದೊಂದಿಗೆ ನಡೆದ 'ಮಂಟೇಸ್ವಾಮಿ ಕಾವ್ಯದ ತಾತ್ವಿಕತೆ' ವಿಚಾರೋಪನ್ಯಾಸ ಮತ್ತು ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಂಟೇಸ್ವಾಮಿ ಕುರಿತು ಖಚಿತ ಐತಿಹಾಸಿಕ ದಾಖಲೆಗಳು ಹೆಚ್ಚು ಲಭ್ಯವಾಗದಿದ್ದರೂ ಮಂಟೇಸ್ವಾಮಿಯ ಕಾವ್ಯ ಎಂಬ ಜನಪದ ಕಾವ್ಯವೊಂದು ಇದೆ. ಮಂಟೇಸ್ವಾಮಿ ಮಳವಳ್ಳಿಗೆ ಬಂದು ಕುಂದೂರು ಬೆಟ್ಟದ ಸಮೀಪದಲ್ಲಿರುವ ಬೊಪ್ಪಗೌಡಪುರವನ್ನು ತಮ್ಮ ತಪೋಭೂಮಿಯಾಗಿ ಆರಿಸಿಕೊಂಡ ವಿಷಯಗಳನ್ನು ಎಳೆಎಳೆಯಾಗಿ ವಿವರಿಸಿದರು.

ಯುವ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ಲೇಖಕ ನಾಗರಾಜ್ ತಲಕಾಡು ಅವರ 47ನೇ ಹುಟ್ಟುಹಬ್ಬದ ಪ್ರಯುಕ್ತ 'ಮಂಟೇಸ್ವಾಮಿ ಕಾವ್ಯದ ತಾತ್ವಿಕತೆ' ಕುರಿತು ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಸಂಗತಿ ಎಂದರು.

ಈ ವೇಳೆ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಚಾ.ನಗರದ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ದೊಡ್ಡೇಬಾಗಿಲು ಅಧ್ಯಕ್ಷ ಡಾ.ಮಹದೇವಸ್ವಾಮಿ ಡಿ.ವಜ್ರ ಇನ್ನಿತರರಿದ್ದರು.

ಬುಡಸಹಿತ ಧರೆಗುರುಳಿದ ಬೃಹತ್ ಮರ

- ಕೂದಲೆಳೆ ಅಂತರದಲ್ಲಿ ಮೂವರು ಪಾರು
- ಹಲವು ವಾಹನಗಳಿಗೆ ಈ ವೇಳೆ ಹಾನಿ







ಮೈಸೂರು,ಜು.22(ಎಸ್‌ಬಿಡಿ)-ಕಾಂಡ ಮುರಿದು ಬೃಹತ್ ಮರ ಉರುಳಿ ಬಿದ್ದಿದ್ದು, ಮೂವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಎರಡು ದ್ವಿಚಕ್ರ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮತ್ತೊಂದು ಬೈಕ್ ಹಾಗೂ ಕಾರಿಗೆ ಹಾನಿಯಾಗಿದೆ.

ಮೈಸೂರಿನ ಅಗ್ರಹಾರ, ಮಹಾತ್ಮಗಾಂಧಿ ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ಬಳಿಯ ದಿವಾನ್ ಪೂರ್ಣಯ್ಯ ಕಾಂಪ್ಲೆಕ್ಸ್ ಆವರಣದಲ್ಲಿ ಶನಿವಾರ ಮಧ್ಯಾಹ್ನ 2.30ರ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ವೈದ್ಯಕೀಯ ಪ್ರತಿನಿಧಿ(ಮೆಡಿಕಲ್ ರೆಪ್)ಗಳಾದ ಮಹೇಶ್, ಸಂತೋಷ್ ಹಾಗೂ ಸುನಿಲ್ ಕುಮಾರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸುನಿಲ್ ಅವರ ಸ್ಕೂಟರ್ ಹಾಗೂ ಸಂತೋಷ್ ಅವರ ಬೈಕ್ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮಹೇಶ್ ಅವರ ಬೈಕ್ ಹಾಗೂ ಕಾರಿಗೆ ಹಾನಿಯಾಗಿದೆ.

ರೆಂಬೆಗಳ ನಡುವೆ ಸಿಲುಕಿದ್ದರು: ಮೆಡಿಕಲ್ ರೆಪ್‌ಗಳಾದ ಮಹೇಶ್, ಸಂತೋಷ್ ಹಾಗೂ ಸುನಿಲ್ ದಿವಾನ್ ಪೂರ್ಣಯ್ಯ ಕಾಂಪ್ಲೆಕ್ಸ್ ಆವರಣದಲ್ಲಿ ತಮ್ಮ ವಾಹನಗಳನ್ನು ಪಾರ್ಕ್ ಮಾಡಿ, ಮಾತನಾಡುತ್ತಾ ನಿಂತಿದ್ದರು. ಮರದ ಕಾಂಡ ಮುರಿಯುವ ಶಬ್ದ ಕೇಳಿ ಸಂತೋಷ್ ಹಾಗೂ ಸುನಿಲ್ ಓಡಿಹೋಗಿ, ಬೈಕ್ ಮೇಲೆ ಕುಳಿತಿದ್ದ ಮಹೇಶ್‌ಗೆ ಓಡಿ ಬರುವಂತೆ ಸೂಚನೆ ನೀಡಿದ್ದಾರೆ. ಆದರೆ ಗಾಬರಿಯಲ್ಲಿ ಮಹೇಶ್, ಬೈಕ್ ತಳ್ಳಿಕೊಂಡು ಬರುವಷ್ಟರಲ್ಲಿ ಮರ ಉರುಳಿ ಬಿದ್ದಿದೆ. ಅದೃಷ್ಟವಶಾತ್ ಸಣ್ಣ ರೆಂಬೆಗಳು ಅವರ ಮೇಲೆ ಬಿದ್ದಿವೆ. ಹೆಲ್ಮೆಟ್ ಧರಿಸಿದ್ದರಿಂದ ತಲೆಗೆ ಪೆಟ್ಟಾಗಿಲ್ಲ. ಅಲ್ಲದೆ ಅಲ್ಲಿಯೇ ಪಾರ್ಕ್ ಮಾಡಿದ್ದ ಕಾರಿನ ಮೇಲೆ ಕೊಂಬೆ ಬಿದ್ದಿದ್ದರಿಂದ ಮಹೇಶ್, ಪ್ರಾಣಾಪಾಯದಿಂದ ಪಾರಾದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಭಾರೀ ಅನಾಹುತ ತಪ್ಪಿದೆ: ದಿವಾನ್ ಪೂರ್ಣಯ್ಯ ಕಾಂಪ್ಲೆಕ್ಸ್‌ನಲ್ಲಿ ಮೆಡಿಕಲ್ ಶಾಪ್‌ಗಳು ಸೇರಿದಂತೆ ಹತ್ತಾರು ಮಳಿಗೆಗಳಿವೆ. ಆಸ್ಪತ್ರೆಗೆ ಬರುವ ರೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ಔಷಧಿ ಕೊಳ್ಳಲು ಇಲ್ಲಿಗೆ ಬರುತ್ತಾರೆ. ಆಗಾಗ್ಗೆ ಮೆಡಿಕಲ್ ರೆಪ್‌ಗಳೂ ಭೇಟಿ ನೀಡುತ್ತಿರುತ್ತಾರೆ. ನಾಲ್ಕನೇ ಶನಿವಾರವಾದ ಕಾರಣ ಹೆಚ್ಚು ಜನ ಹೆಚ್ಚು ಜನ ಇರಲಿಲ್ಲ. ಮಧ್ಯಾಹ್ನವಾಗಿದ್ದರಿಂದ ಗ್ರಾಹಕರೂ ಇರಲಿಲ್ಲ. ಏನಾದರೂ ಬೆಳಗ್ಗೆ ಮರ ಉರುಳಿದ್ದರೆ ಭಾರೀ ಅನಾಹುತವೇ ಸಂಭವಿಸುತ್ತಿತ್ತು. ಹತ್ತಾರು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದರು ಎಂದು ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದರು.

ದುರ್ಬಲ ಕಾಂಡ: ಮರ ಹಸಿರಾಗಿತ್ತಾದರೂ ಅದರ ಕಾಂಡ ಸಂಪೂರ್ಣ ಟೊಳ್ಳಾಗಿತ್ತು. ಮುರಿದು ಬಿದ್ದ ನಂತರವೇ ಇದು ಗೊತ್ತಾಗಿದೆ. ಮೆಡಿಕಲ್ ಶಾಪ್‌ನಲ್ಲಿದ್ದ ವ್ಯಾಪಾರಿ, ಮಳಿಗೆ ಮುಂದಕ್ಕೆ ಮರ ಉರುಳಿ ಬಿದ್ದಿದ್ದರಿಂದ ಆಘಾತಗೊಂಡಿದ್ದರು. ಸ್ವಲ್ಪ ಸಮಯದ ಮುಂಚೆ ಗ್ರಾಹಕರು ಬಂದು ಹೋಗಿದ್ದರೆಂದು ಅಲ್ಲಿನ ವ್ಯಾಪಾರಿಗಳು ತಿಳಿಸಿದರು.

ಮೈಸೂರು ನಗರ ಪಾಲಿಕೆಯ ಅಭಯ 2ನೇ ತಂಡದ ಇಂದ್ರ, ಶಿವು, ಮಹೇಶ್, ಆನಂದ್ ಹಾಗೂ ಶಿವು ಮರವನ್ನು ತೆರವುಗೊಳಿಸಿದರು.

ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣ

ಸಿಐಡಿ ವರದಿಯಲ್ಲಿ ಸತ್ಯಾಂಶವಿಲ್ಲ: ಸುರೇಶ್‌ಗೌಡ

ಪರ್ಸೆಂಟೇಜ್ ಇಲ್ಲದೇ ಚಲುವರಾಯಸ್ವಾಮಿ ಕಾಮಗಾರಿಗೆ ಒಪ್ಪಿಗೆ ಕೊಡಲ್ಲ: ಆರೋಪ



ನಾಗಮಂಗಲ, ಜು.22– ಕೆಎಸ್‌ಆರ್‌ಟಿಸಿ ನೌಕರ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅಣತಿಯಂತೆ ಸಿಐಡಿ ಅಧಿಕಾರಿಗಳು ವರದಿ ನೀಡಿದ್ದು, ತನಿಖಾ ವರದಿಯಲ್ಲಿ ಸತ್ಯಾಂಶ ಇಲ್ಲ ಎಂದು ಮಾಜಿ ಶಾಸಕ ಕೆ.ಸುರೇಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಚಲುವರಾಯಸ್ವಾಮಿ ಸತ್ಯವನ್ನು ದುಡ್ಡಿನಿಂದ ಖರೀದಿಸಿದ್ದಾರೆ. ಜಗದೀಶ್ ಕುಟುಂಬಕ್ಕೆ ಹಣದ ಆಮಿಷವೊಡ್ಡಿ ಹೇಳಿಕೆ ಪಡೆದಿದ್ದಾರೆ. ಈ ವರದಿ ಸಚಿವರು ಹೇಳಿ ಬರೆಸಿದ ವರದಿಯಾಗಿದೆ. ಸಚಿವರ ಸೂಚನೆಯಂತೆ ವರ್ಗಾವಣೆ ಎಂದು ಅಧಿಕಾರಿಗಳು ಹೇಳಿದ್ದರು. ಇದೀಗ ಅಧಿಕಾರಗಳ ಬಾಯಿ ಮುಚ್ಚಿಸಲಾಗಿದೆ ಎಂದು ಆರೋಪಿಸಿದರು.

ಸಿಐಡಿ ಅಧಿಕಾರಗಳು ಅಪರಾಧಿಗಳ ತನಿಖೆ ಮಾಡಿಲ್ಲ. ಸಿಐಡಿಯಿಂದ ಜಗದೀಶ್ ಪ್ರಕರಣಕ್ಕೆ ನ್ಯಾಯ ಸಿಗಲ್ಲ. ಆತ್ಮಹತ್ಯೆಗೆ ಯತ್ನಿಸಿದ ಜಗದೀಶ್ ಇದ್ದ ಆಸ್ಪತ್ರೆಗೆ ಸಚಿವರ ಆಪ್ತ ಕಾರ್ಯದರ್ಶಿ ಹೋಗಿ ಬಂದಿದ್ದಾರೆ. ಅಲ್ಲಿ ಅವರಿಗೇನು ಕೆಲಸ ಎಂದು ಪ್ರಶ್ನಿಸಿದ ಅವರು, ಷಡ್ಯಂತ್ರ ಮಾಡಿ ತನಿಖೆ ದಿಕ್ಕು ತಪ್ಪಿಸಿದ್ದಾರೆ. ಆಂಬುಲೆನ್ಸ್ ತಡೆದ ಆರೋಪದ ಮೇಲೆ ನನ್ನನ್ನು ವಿಚಾರಣೆ ಮಾಡಿದರು. ಆದರೆ ಆರೋಪ ಎದುರಿಸಿದ ಸಚಿವರನ್ನು ಏಕೆ ವಿಚಾರಣೆ ಮಾಡಲಿಲ್ಲ ಎಂದು ಪ್ರಶ್ನಿಸಿದರು.

ಈ ಸರ್ಕಾರಕ್ಕೆ ಮಾನ ಮಾರ್ಯಾದೆ ಇದ್ಯಾ? ಖಾಲಿ ಕುರ್ಚಿಗಳಿಗೆ ಸರ್ಕಾರ ವರದಿ ಒಪ್ಪಿಸಿದೆ. ನಿಜವಾದ ನ್ಯಾಯ ಸಿಗಬೇಕಾದರೆ ಸಿಬಿಐಗೆ ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣ ಒಪ್ಪಿಸಲಿ ಎಂದು ಆಗ್ರಹಿಸಿದರು.

ಪರ್ಸೆಂಟೇಜ್ ಇಲ್ಲದೇ ಕಾಮಗಾರಿಗೆ ಒಪ್ಪಿಗೆ ಕೊಡಲ್ಲ: ಸಚಿವ ಚಲುವರಾಯಸ್ವಾಮಿ ಅವರು ಪರ್ಸೆಂಟೇಜ್ ಇಲ್ಲದೇ ಕಾಮಗಾರಿಗೆ ಒಪ್ಪಿಗೆ ಕೊಡಲ್ಲ. ಚಲುವರಾಯಸ್ವಾಮಿಗೆ 50 ಲಕ್ಷದ ಒಳಗಿನ ಕಾಮಗಾರಿಗಳಿಗೆ 5%, 50 ಲಕ್ಷದ ಮೇಲಿನ ಕಾಮಗಾರಿಗಳಿಗೆ 10% ಕೊಡಬೇಕು. ವಾರಕ್ಕೆ ಒಂದು ದಿನ ನಾಗಮಂಗಲಕ್ಕೆ ಬಂದು ಅಧಿಕಾರಿಗಳಿಂದ ಕಲೆಕ್ಷನ್ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಚಲುವರಾಯಸ್ವಾಮಿ ಯಾವುದೇ ಹೊಸ ಕಾಮಗಾರಿ ತಂದಿಲ್ಲ. ಪ್ರತಿವಾರ ಕ್ಷೇತ್ರಕ್ಕೆ ಬರುವುದೇ ಹಣ ವಸೂಲಿ ಮಾಡಲು. ಚಲುವರಾಯಸ್ವಾಮಿ ಕುಟುಂಬದ ಒಬ್ಬೊಬ್ಬರು ಒಂದೊಂದು ಇಲಾಖೆ ವಹಿಸಿಕೊಂಡಿದ್ದಾರೆ. ಕಾಮಗಾರಿಗಳು ನಡೆಯಬೇಕು ಅಂದರೆ ಕಪ್ಪಕಾಣಿಕೆ ಕೊಡಬೇಕು ಎಂದರು.

ಮಂಡ್ಯ ಎಸಿ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ. ಗೆದ್ದು ಇನ್ನೂ ಎರಡು ತಿಂಗಳು ಆಗಿಲ್ಲ ಆಗಲೇ ಬೆಂಗಳೂರಿನಲ್ಲಿ ಚಲುವರಾಯಸ್ವಾಮಿ ಜಮೀನು ಖರೀದಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಈ ಸಂಬಂಧ ದಾಖಲೆ ನೀಡುತ್ತೇನೆ. ಮೆಜೆಸ್ಟಿಕ್‌ನ ಓಶನ್ ಸೌಹಾರ್ದ ಸೊಸೈಟಿಯಲ್ಲಿ ಇವರ ಎಲ್ಲಾ ಡೀಲಿಂಗ್ ನಡೆಯಲಿದ್ದು, ಅಧಿಕಾರಿಗಳು ಹಾಗೂ ಕಾಮಗಾರಿಗಳ ವಿಚಾರದಲ್ಲಿ ಸಚಿವರಿಂದ ಪರ್ಸಂಟೇಜ್ ನಡೆಯುತ್ತಿದೆ ಎಂದು ಗಂಭೀರ ಆರೋಪ ಮಾಡಿದರು.

ಕುಮಾರಸ್ವಾಮಿ ಅವರು ವಿಧಾನಸೌಧದಲ್ಲಿ ಮಾಡಿದ ಆರೋಪ ಸತ್ಯ. ಚಲುವರಾಯಸ್ವಾಮಿಯ ರೇಟ್‌ಕಾರ್ಡ್ 100ಕ್ಕೆ 100 ಸತ್ಯ. ಈ ಭ್ರಷ್ಟಾಚಾರದ ದಾಖಲೆಗಳನ್ನು ಮುಂದಿನ ದಿನಗಳಲ್ಲಿ ಬಿಡುತ್ತೇವೆ. ಬಿಜೆಪಿ ಮೇಲೆ ಕಾಂಗ್ರೆಸ್ 40% ಆರೋಪ ಮಾಡಿತ್ತು. ಈ ಕಾಂಗ್ರೆಸ್ ಸರ್ಕಾರದಲ್ಲಿ 68% ಆಗಿದೆ ಎಂದು ಕಿಡಿಕಾರಿದರು.

ನನ್ನ ಬಗ್ಗೆ ಆರೋಪಿಸಲು ಸುರೇಶ್‌ಗೌಡ ಯಾರು



ಮಂಡ್ಯ, ಜು.22– ಕೃಷಿ ಸಚಿವರು ವಾರಕ್ಕೊಮ್ಮೆ ನಾಗಮಂಗಲಕ್ಕೆ ಬಂದು ಕಲೆಕ್ಷನ್ ಮಾಡುತ್ತಾರೆ ಎಂದು ಮಾಜಿ ಶಾಸಕ ಸುರೇಶ್‌ಗೌಡರ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ನನ್ನ ವಿರುದ್ಧ ಆರೋಪ ಮಾಡಲು ಸುರೇಶ್‌ಗೌಡ ಯಾರು ಎಂದು ಕಿಡಿಕಾರಿದರು.

ಶನಿವಾರ ನಗರದ ಸರ್ಕಾರಿ ಮಹಿಳಾ ಕಾಲೇಜು ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಬಳಿ ದುಡ್ಡಿಲ್ಲ ಆದ್ದರಿಂದ ಇವರೇ ಕೊಡಿಸುತ್ತಿದ್ದಾರೆ. ನನಗೆ ಜಿಲ್ಲೆ ಅಭಿವೃದ್ಧಿ ಬಗ್ಗೆ ಕಮಿಟ್‌ಮೆಂಟ್ ಇದೆ. ನಾನು ಎಲ್ಲಿಗೆ ಹೋದರೂ ಮಂಡ್ಯ ಜಿಲ್ಲೆ ನೆನಪಿಗೆ ಬರುತ್ತದೆ. ಇಡೀ ರಾಜ್ಯದ ಜವಾಬ್ದಾರಿ ಜೊತೆಗೆ ಮಂಡ್ಯ ಜವಾಬ್ದಾರಿ ನನ್ನ ಮೇಲಿದೆ ಎಂದು ಸುರೇಶ್‌ಗೌಡರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸ್ವತಃ ಶಕ್ತಿ ಬೆಳೆಸಿಕೊಂಡವರು ನಾಯಕರಾಗುತ್ತಾರೆ. ಆದರೆ ಅವರು 5 ವರ್ಷ ಕ್ಷೇತ್ರದಲ್ಲಿ ಏನು ಮಾಡಿದರು ಎಂದು ನೆನಪಿಸಿಕೊಳ್ಳಲಿ. 7 ಜನ ಶಾಸಕರಿದ್ದರು. ಮಂತ್ರಿಗಳಿದ್ದರು. ಒಂದು ವರ್ಷ ಸರ್ಕಾರವಿತ್ತು. ಏನು ಮಾಡಿದರು ಅಂತ ಜ್ಞಾಪಿಸಿಕೊಳ್ಳಲಿ. ಅವರ ಹೇಳಿಕೆ ಬಗ್ಗೆ ನನ್ನನ್ನು ಕೇಳಬೇಡಿ ಎಂದರು.

ಚಾಲಕ ಜಗದೀಶ್‌ಗೆ ದುಡ್ಡು ಕೊಟ್ಟು ಹೇಳಿಕೆ ಕೊಡಿಸಿದ ಆರೋಪದ ಬಗ್ಗೆ ಮಾತನಾಡಿ, ದೂರು ಕೊಟ್ಟವರು, ಅವರನ್ನು ದುರುಪಯೋಗಪಡಿಸಿಕೊಂಡವರು ಯಾರು ಎಂದು ಜನ ಮಾತನಾಡುತ್ತಿದ್ದಾರೆ. ಈ ಆರೋಪ ಬರುತ್ತದೆ ಎಂದು ಆಸ್ಪತ್ರೆಗೆ ಜಗದೀಶ್ ನೋಡಲು ಹೋಗಲಿಲ್ಲ. ಬದುಕಿಸಲು ಪ್ರಯತ್ನ ಪಡದೆ ಆಂಬುಲೆನ್ಸ್ ತಡೀತಾರೆ. ಕುಮಾರಸ್ವಾಮಿ ಆಸ್ಪತ್ರೆಗೆ ಶಿಫ್ಟ್ ಮಾಡಿಸಬೇಡಿ ಅಂತಾರೆ. ಜೆಡಿಎಸ್‌ನವರು ಬದುಕಿಸೋಕೆ ತಯಾರಿದ್ದರಾ? ಮನಸಾಕ್ಷಿಯನ್ನು ಜೆಡಿಎಸ್‌ನವರು ಕೇಳಿಕೊಳ್ಳಲಿ ಎಂದು ಕಿಡಿಕಾರಿದರು.

ದೇವೇಗೌಡರ ಮಾತಿಗೆ ಜೆಡಿಎಸ್‌ನಲ್ಲಿ ಕಿಮ್ಮತ್ತಿಲ್ಲ: ಬಿಜೆಪಿಯೊಂದಿಗೆ ಹೊಂದಾಣಿಕೆ ಬಗ್ಗೆ ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ನಡುವೆ ದ್ವಂದ್ವ ನಿಲುವಿದೆ. ಬಿಜೆಪಿ ಕಚೇರಿಗೆ ಕುಮಾರಸ್ವಾಮಿ ಹೋಗಿದ್ದಾರೆ ಅಂದರೆ ದೇವೇಗೌಡರ ಮಾತಿಗೆ ಅವರ ಪಕ್ಷದಲ್ಲಿ ಕಿಮ್ಮತ್ತಿಲ್ಲ ಅಂತ ಅರ್ಥ. ದೇವೇಗೌಡರು ಇರುವವರೆಗೂ ಪಕ್ಷವನ್ನು ಇನ್ನೊಂದು ಪಕ್ಷದೊಂದಿಗೆ ವಿಲೀನ ಮಾಡುವ ನಿರ್ಧಾರ ತಗೆದುಕೊಂಡಿಲ್ಲ. 10 ಗೆಲ್ಲಲಿ, 3 ಗೆಲ್ಲಲಿ, 50 ಸ್ಥಾನ ಗೆಲ್ಲಲಿ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಇವತ್ತು ಕಟ್ಟಿ ಬೆಳೆಸಿದ ಪಕ್ಷವನ್ನು ದೇವೇಗೌಡರಿಂದಲೇ ಬೇರೆ ಪಕ್ಷಕ್ಕೆ ಕೊಡುತ್ತಿದ್ದಾರೆ ಎಂದರೆ ಕೊಡಲಿ. ಅದು ಅವರ ಪಕ್ಷದ ತೀರ್ಮಾನ ಎಂದರು.

ಸಿದ್ದರಾಮಯ್ಯ ಬಗ್ಗೆ ಅಪಸ್ವರ ಇಲ್ಲ: ಸಿಎಂ ಮಾಡುವುದು ಗೊತ್ತು, ಇಳಿಸುವುದು ಗೊತ್ತು ಎಂಬ ಬಿ.ಕೆ.ಹರಿಪ್ರಸಾದ್ ಹೇಳಿಕೆ ಬಗ್ಗೆ ಮಾತನಾಡಿ, ಯಾವ ಕಾರಣಕ್ಕೆ ಅವರು ಹಾಗೇ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಇದು ಅನವಶ್ಯಕ. ಬಹುಶಃ ಹಾಗೇ ಹೇಳಿರಲು ಸಾಧ್ಯವಿಲ್ಲ. ನಮ್ಮ ಪಕ್ಷದಲ್ಲಿ ಆ ತರಹದ ಆಲೋಚನೆ ಇಲ್ಲ. ಸಿಎಂ ಬಗ್ಗೆ ಯಾವುದೇ ಅಪಸ್ವರ ಇಲ್ಲ. ಸಿಎಂ ಸದೃಢವಾಗಿದ್ದಾರೆ, ಸರ್ಕಾರವು ಸದೃಢವಾಗಿದೆ. ಐದು ಗ್ಯಾರಂಟಿ ಕೊಟ್ಟಿರುವುದೇ ನಮ್ಮ ಪಕ್ಷಕ್ಕೆ, ಸರ್ಕಾರಕ್ಕೆ ಹೆಗ್ಗಳಿಕೆ. ಪಕ್ಷದಲ್ಲಿ ಯಾವುದೇ ರೀತಿಯ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಮೈಷುಗರ್ ಸ್ಥಗಿತಗೊಂಡಿಲ್ಲ: ಚಲುವರಾಯಸ್ವಾಮಿ



ಮಂಡ್ಯ, ಜು.22– ಮೈಷುಗರ್ ಸಕ್ಕರೆ ಕಾರ್ಖಾನೆ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ವದಂತಿ ಕೇಳಿ ಬಂದ ಹಿನ್ನೆಲೆಯಲ್ಲಿ ಇಂದು ಮೈಷುಗರ್ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲಿಸಿದ್ದು, ಕಾರ್ಖಾನೆ ಯಾವುದೇ ಕಾರಣಕ್ಕೂ ಸ್ಥಗಿತಗೊಂಡಿಲ್ಲ. ಇಲ್ಲಿನ ಅಧಿಕಾರಿಗಳು ಹೆಚ್ಚಿನ ಕಬ್ಬು ಅರೆಯಲು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಮೈಷುಗರ್ ಪರಿಶೀಲನೆ ಬಳಿಕ ಮಾತನಾಡಿದ ಅವರು, ಮೈಷುಗರ್‌ನಲ್ಲಿ ಪ್ರಾರಂಭದಲ್ಲಿ 1000 ದಿಂದ 1500 ಟನ್ ಕಬ್ಬು ಅರೆಯಲಾಗುತ್ತಿತ್ತು. ಇದು ಹೆಚ್ಚಳವಾಗುತ್ತಿದೆ. ಇಲ್ಲಿವರೆಗೆ 30000 ಟನ್ ಕಬ್ಬು ಅರೆಯಲಾಗಿದೆ ಎಂದರು.

ರೈತರಿಗೆ ಸಕಾಲದಲ್ಲಿ ಕಬ್ಬಿನ ಹಣ ಪಾವತಿಸಲಾಗುತ್ತಿದೆ. ಸಾರ್ವಜನಿಕರು ಹಾಗೂ ರೈತರ ಆಸೆಯಂತೆ ಸರ್ಕಾರ ಕಾರ್ಖಾನೆ ಅಭಿವೃದ್ಧಿ ಪಡಿಸುತ್ತಿದೆ. ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸುವುದಿಲ್ಲ. ಸಣ್ಣಪುಟ್ಟ ತೊಂದರೆ ಇದ್ದು, ಅದನ್ನು ಸರಿಪಡಿಸಿ ಉತ್ತಮ ರೀತಿ ಕಾರ್ಯ ನಿರ್ವಹಿಸುವಂತೆ ಮಾಡಲಾಗುವುದು ಎಂದರು.

ರೈತರು ಯಾವುದೇ ವದಂತಿಗಳಿಗೆ ಕಿವಿಕೊಡಬಾರದು. ವದಂತಿ ಹರಡುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಎಸ್ಪಿಗೆ ಸೂಚಿಸಲಾಗಿದ್ದು, ಉತ್ತಮ ಗುಣಮಟ್ಟದ ಎಸ್30 ಹಾಗೂ ಎಂ30 ಸಕ್ಕರೆಯನ್ನು ಕಾರ್ಖಾನೆಯಲ್ಲಿ ಉತ್ಪಾದಿಸಲಾಗಿದೆ ಹಾಗೂ ಇವುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಸಹ ಇದೆ. ಹೊಸ ಕಬ್ಬು ಅರೆಯುವಿಕೆಯಿಂದ 12,000 ಕ್ವಿಂಟಲ್ ಸಕ್ಕರೆ ಬಂದಿದೆ. ಅದನ್ನು ಒಳ್ಳೆಯ ರಿಯಾಯಿತಿ ದರದಲ್ಲಿ ರಫ್ತು ಮಾಡಲಾಗುವುದು ಎಂದು ತಿಳಿಸಿದರು.

ಈ ವೇಳೆ ಶಾಸಕರಾದ ರವಿಕುಮಾರ್, ರಮೇಶ್ ಬಾಬು ಬಂಡಿಸಿದ್ದೇಗೌಡ, ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾ ಖಾನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮೈಷುಗರ್ ಹೋರಾಟಗಾರರಾದ ಸುನಂದಾ ಜಯರಾಂ, ಕನ್ನಡಸೇನೆ ಮಂಜು ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ಕೆಆರ್‌ಎಸ್ ಒಳ ಹರಿವಿನಲ್ಲಿ ಅಲ್ಪ ಏರಿಕೆ

ಮಂಡ್ಯ, ಜು.22– ಕಾವೇರಿ ಉಗಮ ಸ್ಥಾನ ತಲಕಾವೇರಿ ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಕೃಷ್ಣರಾಜಸಾಗರ ಅಣೆಕಟ್ಟೆ ಒಳ ಹರಿವಿನಲ್ಲಿ ಅಲ್ಪ ಏರಿಕೆಯಾಗಿದೆ.

ಪ್ರಸ್ತುತ ಕೆಆರ್‌ಎಸ್‌ಗೆ 6278 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ನಾಲೆಗಳಿಗೆ ನೀರು ಬಿಡುತ್ತಿರುವ ಪರಿಣಾಮ 411 ಕ್ಯೂಸೆಕ್ ಹೊರಹರಿವಿದೆ. ಒಳಹರಿವು ಪ್ರಮಾಣ ಏರಿಕೆ ಹಿನ್ನಲೆ ಅಣೆಕಟ್ಟೆಯ ನೀರಿನ ಮಟ್ಟ ಸ್ವಲ್ಪ ಹೆಚ್ಚಳವಾಗಿದೆ.

ಈ ನಿಟ್ಟಿನಲ್ಲಿ 124.80 ಗರಿಷ್ಠ ಮಟ್ಟದ ಕೆಆರ್ ಎಸ್‌ನಲ್ಲಿ 91.20 ಅಡಿ ನೀರಿದ್ದು, 49.452 ಟಿಎಂಸಿ ಸಾಮರ್ಥ್ಯದ ಡ್ಯಾಂನಲ್ಲಿ 16.690 ಟಿಎಂಸಿ ನೀರು ಸಂಗ್ರಹವಾಗಿದೆ. ಹೀಗಾಗಿ ಕುಡಿಯುವ ನೀರಿನ ಹಾಹಾಕಾರ ಸದ್ಯ ದೂರವಾಗಿದ್ದು, ನಾಲೆಗಳಿಗೆ ನೀರು ಬಿಡುತ್ತಿರುವ ಪರಿಣಾಮ ಬೆಳೆಗಳು ರಕ್ಷಣೆಯಾಗುತ್ತಿವೆ.

ನಾಲೆಗೆ ನೀರು ಹರಿಸುವಂತೆ ಒತ್ತಾಯಿಸಿ ರೈತರು ಪ್ರತಿಭಟನೆ ನಡೆಸಿದ್ದರು. ರೈತರ ಒತ್ತಾಯಕ್ಕೆ ಮಣಿದು ನೀರು ಬಿಡುಗಡೆ ಮಾಡಲು ಸರ್ಕಾರ ಒಪ್ಪಿಗೆ ಸೂಚಿಸಿತ್ತು. ಅದರಂತೆ ಶುಕ್ರವಾರ ಮಧ್ಯರಾತ್ರಿಯಿಂದಲೇ 10 ದಿನ ನಾಲೆಗಳಿಗೆ ನೀರು ಹರಿಸಲಾಗುತ್ತಿದ್ದು, ಸುಮಾರು 3500 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಸಿಎಂ ಬದಲಾವಣೆ ಆಗಲ್ಲ: ಜಮೀರ್



ಶ್ರೀರಂಗಪಟ್ಟಣ, ಜು.22– ರಾಜ್ಯದ ಮುಖ್ಯಮಂತ್ರಿ ಬದಲಾವಣೆಯಾಗುತ್ತಾರೆ ಎಂಬುದು ಶುದ್ಧ ಸುಳ್ಳು. ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿರುತ್ತಾರೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಶನಿವಾರ ಪಟ್ಟಣದ ಗುಂಬಜ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ನೀಡಿರುವ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಆಯ್ಕೆಯನ್ನು ನಾನಾಗಲೀ ಅಥವಾ ಬಿ.ಕೆ.ಹರಿಪ್ರಸಾದ್ ಅವರಾಗಲೀ ಮಾಡಲು ಸಾಧ್ಯವಿಲ್ಲ. ಪಕ್ಷದ ವರಿಷ್ಠರಾದ ಸೋನಿಯಾಗಾಂಧಿ, ರಾಹುಲ್ ಗಾಂಧಿ ಸಿಎಂ ಆಯ್ಕೆ ಮಾಡುತ್ತಾರೆ. ಸಿಎಂ ಆಯ್ಕೆ ತೀರ್ಮಾನ ಹೈಕಮಾಂಡ್ ಮಾಡಲಿರುವುದರಿಂದ ಇಲ್ಲಿ ಯಾರೂ ಆಯ್ಕೆ ಮಾಡಲು ಸಾಧ್ಯವಿಲ್ಲ ಎಂದರು.

ಬೊಮ್ಮೂರುಅಗ್ರಹಾರಕ್ಕೆ ಭೇಟಿ: ಸಮಸ್ಯೆ ಇತ್ಯರ್ಥ

ಶ್ರೀರಂಗಪಟ್ಟಣ, ಜು.22– ಪಟ್ಟಣದ ಹೊರವಲಯದ ಬೊಮ್ಮೂರು ಅಗ್ರಹಾರಕ್ಕೆ ಸಚಿವ ಜಮೀರ್ ಅಹಮದ್ ಖಾನ್ ಭೇಟಿ ನೀಡಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಮಸೀದಿ ಸ್ಥಳ ವಿವಾದಕ್ಕೆ ಸಂಬಂಧಿಸಿದಂತೆ ಎರಡೂ ಸಮುದಾಯದ ನಡುವೆ ರಾಜಿ ಸಂಧಾನ ನಡೆಸಿ ಸಮಸ್ಯೆ ಇತ್ಯರ್ಥಪಡಿಸಿದರು.

ಈ ಜಾಗದಲ್ಲಿ ಈಗಾಗಲೇ ಮನೆ ನಿರ್ಮಿಸಿಕೊಂಡವರಿಗೂ ತೊಂದರೆ ಆಗಬಾರದು. ಮಸೀದಿ ಸ್ಥಳಕ್ಕೂ ಸಮಸ್ಯೆ ಆಗದಂತೆ ನೋಡಿಕೊಳ್ಳುವ ಭರವಸೆ ನೀಡಿ ಎರಡೂ ಸಮುದಾಯ ಒಟ್ಟಿಗೆ ಬಾಳ್ವೆ ನಡೆಸಿ ಎಂದರು.

ಈ ವೇಳೆ ಅರಬ್ ಸಾಹೇಬ್ ಮಸೀದಿ ಕಾಂಪೌಂಡ್ ನಿರ್ಮಾಣ, ಹಜರತ್ ದಾವೂದ್ ಮಕಾನ್ ಕಾಂಪೌಂಡ್ ನಿರ್ಮಾಣಕ್ಕಾಗಿ ವಕ್ಫ್ ಮಂಡಳಿಯಿಂದ ತಲಾ 5 ಲಕ್ಷ ನೀಡಿದರು.


ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಡೆ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ. ಜೆಡಿಎಸ್–ಬಿಜೆಪಿ ಮೈತ್ರಿ ಬಗ್ಗೆ ಅವರನ್ನೇ ಕೇಳಿ. ಈಗ ನಾನು ಆ ಪಕ್ಷದಲ್ಲಿ ಇಲ್ಲ. ಹೀಗಾಗಿ ಅದರ ಬಗ್ಗೆ ನಾನು ಮಾತನಾಡಲ್ಲ. ನಾನು ಕಾಂಗ್ರೆಸ್‌ನಲ್ಲಿ ಇದ್ದೇನೆ. ಕಾಂಗ್ರೆಸ್ ಬಗ್ಗೆ ಮಾತನಾಡುತ್ತೇನೆ. ಅವರು ವಿಪಕ್ಷದಲ್ಲಿದ್ದಾರೆ. ನಮ್ಮ ವಿರುದ್ಧ ಹೋರಾಡುತ್ತಾರೆ ಎಂದರು.

ಇದಕ್ಕೂ ಮುನ್ನ ಗುಂಬಜ್‌ಗೆ ಭೇಟಿ ನೀಡಿ, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಸಮಾಧಿಗೆ ಹೂವಿನ ಚಾದರ ಹೊದಿಸಿದ ಸಚಿವ ಜಮೀರ್ ಅಹಮದ್ ಖಾನ್ ಉತ್ತಮ ಮಳೆಯಾಗಲಿ ಎಂದು ಪ್ರಾರ್ಥಿಸಿದರು.

ಈ ವೇಳೆ ಶಾಸಕ ರಮೇಶ್ ಬಂಡಿಸಿದ್ದೇಗೌಡ ಪುರಸಭೆ ಸದಸ್ಯ ಎಂ.ಎಲ್.ದಿನೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆಯಲ್ಲಿ ಏಕಾಂಗಿ ಹೋರಾಟ ಮಾಡೋಣ

- ಯಾವ ಪಕ್ಷದೊಂದಿಗೂ ಹೊಂದಾಣಿಕೆ ಬೇಡ
- ಯಡಿಯೂರಪ್ಪರ ಸಂದೇಶವನ್ನು ವರಿಷ್ಠರಿಗೆ ತಲುಪಿಸಿದ ಪುತ್ರ, ಶಾಸಕ ವಿಜಯೇಂದ್ರ
- ವಿಜಯೇಂದ್ರ ಬಿಜೆಪಿ ಅಧ್ಯಕ್ಷ; ಅಶೋಕ್‌ಗೆ ವಿಪಕ್ಷ ನಾಯಕ ಸ್ಥಾನಕ್ಕೆ ಬಿಎಸ್‌ವೈ ಶಿಫಾರಸ್ಸು
- ಮೈತ್ರಿ ಮನಸ್ಸಿದ್ದ ಜೆಡಿಎಸ್‌ಗೆ ಹಿನ್ನಡೆ



ಬೆಂಗಳೂರು, ಜು.22(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಏಕಾಂಗಿ ಹೋರಾಟ ಮಾಡೋಣ. ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಬೇಡ ಎನ್ನುವ ಮೂಲಕ ಜೆಡಿಎಸ್ ಜತೆಗಿನ ಮೈತ್ರಿಗೆ ಆರಂಭದಲ್ಲೇ ವಿಘ್ನ ಎದುರಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನವನ್ನು ಬಿ.ವೈ.ವಿಜಯೇಂದ್ರ ಅವರಿಗೂ, ವಿಧಾನ ಸಭೆ ಪ್ರತಿಪಕ್ಷದ ನಾಯಕ ಸ್ಥಾನವನ್ನು ಆರ್. ಅಶೋಕ್ ಅವರಿಗೆ ನೀಡುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಿಜೆಪಿ ವರಿಷ್ಠರಿಗೆ ಸಂದೇಶ ರವಾನಿಸುವ ಸಂದರ್ಭದಲ್ಲಿ ಮೈತ್ರಿ ಬಗ್ಗೆಯೂ ತಮ್ಮ ಸಲಹೆ ನೀಡಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕಾಗಿರುವ ಸೋಲನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪುನರಾವರ್ತನೆಯಾಗದಂತೆ ತಡೆಯಲು ಈ ಸೂತ್ರ ಅಗತ್ಯವಿದೆ ಎಂಬ ಸಲಹೆ ನೀಡಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಿಧಾನಮಂಡಲದ ಹೊರಗೆ ಮತ್ತು ಒಳಗೆ ಬಿಜೆಪಿ ಮತ್ತು ಜೆಡಿಎಸ್ ಹೋರಾಟ ನಡೆಸಿದ ಬೆನ್ನಲ್ಲೇ ಈ ಸಂದೇಶ ರವಾನೆಯಾಗಿದೆ.

ಈ ಮೊದಲು ಪ್ರತಿಪಕ್ಷದ ನಾಯಕ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ ಅವರನ್ನು, ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ನೇಮಕ ಮಾಡುವಂತೆ ಯಡಿಯೂರಪ್ಪ ಅವರು ಖುದ್ದಾಗಿ ದೆಹಲಿಗೆ ತೆರಳಿ ವರಿಷ್ಠರಲ್ಲಿ ಮನವಿ ಮಾಡಿದ್ದರು. ದಿಢೀರನೇ ತಮ್ಮ ನಿಲುವು ಬದಲಿಸಿರುವ ಯಡಿಯೂರಪ್ಪ, ತಮ್ಮ ಪುತ್ರ ವಿಜಯೇಂದ್ರ ಅವರನ್ನು ದೆಹಲಿಗೆ ಕಳುಹಿಸಿ ಈ ಹೊಸ ಸಂದೇಶ ರವಾನೆ ಮಾಡಿದ್ದಾರೆ. ವಿಜಯೇಂದ್ರ ಕಳೆದ ಎರಡು ದಿನಗಳ ಹಿಂದೆ ದೆಹಲಿಗೆ ತೆರಳಿ, ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ದೆಹಲಿಯ ಪಕ್ಷದ ಇತರೆ ನಾಯಕರನ್ನು ಭೇಟಿಯಾಗಿ ತಮ್ಮ ತಂದೆಯ ಸಂದೇಶವನ್ನು ತಿಳಿಸಿ ಯಾವ ಕಾರಣಕ್ಕೆ ನೇಮಕಾತಿ ಮತ್ತು ಹೊಂದಾಣಿಕೆ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ.





ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನವರ 5 ಗ್ಯಾರಂಟಿ ಹಾಗೂ ಬಸವರಾಜ ಬೊಮ್ಮಾಯಿ ಸರ್ಕಾರದ ವಿರುದ್ಧ ನಡೆಸಿದ ಅಪಪ್ರಚಾರದಿಂದ ಪಕ್ಷ ಸೋಲು ಕಂಡಿದೆ.

ವಿಧಾನಸಭೆಗೆ ಆಯ್ಕೆಗೊಂಡಿರುವ 65 ಶಾಸಕರಲ್ಲಿ 43 ಶಾಸಕರು ಯಡಿಯೂರಪ್ಪ ಅವರ ಪರವಾಗಿದ್ದಾರೆ. ಚುನಾವಣೆ ಸಂದರ್ಭದಲ್ಲಿ ತಂದೆಯವರು ಪಕ್ಷವನ್ನು ಅಧಿಕಾರಕ್ಕೆ ತರಲು ಹೋರಾಟ ನಡೆಸಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಆ ಫಲಿತಾಂಶ ಮರುಕಳುಹಿಸುವುದಿಲ್ಲ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗೆ ಜನರ ಭಾವನೆ ಪ್ರತ್ಯೇಕವಾಗಿರುತ್ತದೆ.

ಕರ್ನಾಟಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರ ಪ್ರಭಾವ ಸಾಕಷ್ಟಿದೆ. ನಮ್ಮ ಅನ್ಯ ಪಕ್ಷಗಳ ಬೆಂಬಲ ಅಗತ್ಯವಿಲ್ಲ ಎಂದು ಹೇಳುವ ಮೂಲಕ ಪರೋಕ್ಷವಾಗಿ ಜೆಡಿಎಸ್ ಜತೆಗೂಡುವುದು ಬೇಡ ಎಂಬ ಸಂದೇಶ ನೀಡಿದ್ದಾರೆ.

ಈ ವಿಷಯ ತಿಳಿಯುತ್ತಿದ್ದಂತೆ ಸದ್ದು ಹೊಡೆದು, ಬಸವರಾಜ ಬೊಮ್ಮಾಯಿ ಜೆಡಿಎಸ್ ಜತೆ ಮೈತ್ರಿ ಬಲಪಡಿಸಿಕೊಳ್ಳಲು ಕಳೆದ ಗುರುವಾರ ಆ ಪಕ್ಷದ ನಾಯಕ ಕುಮಾರಸ್ವಾಮಿ ಹಾಗೂ ಶಾಸಕರನ್ನು ಸರ್ಕಾರ ಮತ್ತು ಸ್ಪೀಕರ್ ವಿರುದ್ಧ ದೂರು ನೀಡಲು ರಾಜಭವನಕ್ಕೆ ಕರೆದೊಯ್ದರು.

ನಂತರ ನಿನ್ನೆ ನೈಸ್ ರಸ್ತೆ ವಿರುದ್ಧ ಕುಮಾರಸ್ವಾಮಿ ಜತೆಗೂಡಿ ಪತ್ರಿಕಾ ಗೋಷ್ಠಿ ನಡೆಸಿದರು.

ಕಾಡಾನೆ ಹಿಂಡು ಪ್ರತ್ಯಕ್ಷ: ರೈತರ ಫಸಲು ನಾಶ

ಮಳವಳ್ಳಿ, ಜು.22– ಕಾಡಾನೆಗಳ ಹಿಂಡು ಜಮೀನುಗಳಿಗೆ ಲಗ್ಗೆ ಹಾಕಿದ ಪರಿಣಾಮ ತಾಲೂಕಿನ ವಿವಿಧ ಗ್ರಾಮಗಳಲ್ಲಿ ರೈತರು ಬೆಳೆದಿದ್ದ ಫಸಲು ನಾಶವಾಗಿದೆ.


ಕಾಡಾನೆಗಳ ಹಿಂಡು ಕಬ್ಬು, ಟಮೋಟೊ ಸೇರಿದಂತೆ ಹಲವು ಬೆಳೆಗಳನ್ನು ನಾಶ ಮಾಡಿದ್ದು, ಜೊತೆಗೆ ಕೊಳವೆ ಬಾವಿ, ಪಂಪ್‌ಸೆಟ್ ಪರಿಕರಗಳನ್ನು ಮುರಿದು ಹಾಕಿದ್ದು, ಇದರಿಂದ ರೈತರಿಗೆ ಹೆಚ್ಚಿನ ಪ್ರಮಾಣದ ಹಾನಿಯಾಗಿದೆ.

ತಾಲೂಕಿನ ನೆಲಮಾಕನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಸುಮಾರು 12 ಕಾಡಾನೆಗಳ ಹಿಂಡು ರೈತರ ಜಮೀನುಗಳಿಗೆ ಲಗ್ಗೆ ಹಾಕಿದ್ದು ನೆಲಮಾಕನಹಳ್ಳಿ ಗ್ರಾಮದ ಎನ್.ಟಿ.ಮಲ್ಲೇಶ್ ಬೆಳೆದಿದ್ದ ಟಮೆಟೊ ಬೆಳೆಯನ್ನು ಹಾಳು ಮಾಡಿರುವುದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅಭಿಷೇಕ್, ಸ್ವಾಮಿ ಎಂಬುವರ ಕಬ್ಬಿನ ಗದ್ದೆ, ಸಿದ್ದೇಗೌಡರಿಗೆ ಸೇರಿದ ಕೊಳವೆ ಬಾವಿ ಮತ್ತು ಪಂಪ್‌ಸೆಟ್ ಪರಿಕರಗಳನ್ನು ತುಳಿದು ನಾಶಗೊಳಿಸಿದೆ. ಮಳವಳ್ಳಿ ತಾಲೂಕಿನ ಗಡಿ ಗ್ರಾಮಗಳಲ್ಲಿ ಚಿರತೆ ಹಾವಳಿಯಿಂದ ಭಯ ಭೀತರಾಗಿ ಜನತೆ ಬದುಕುವ ಸಂದರ್ಭದಲ್ಲಿ ಇದೀಗ ಆನೆ ದಾಳಿಯಿಂದ ಭಯ ಪಡುವಂತಾಗಿದೆ. ಅರಣ್ಯ, ಕಂದಾಯ, ತೋಟಗಾರಿಕೆ ಇಲಾಖೆ ಜೊತೆಯಾಗಿ ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ಆಗಿರುವ ನಷ್ಟದ ಬಗ್ಗೆ ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಗ್ರಾಮ ಲೆಕ್ಕಿಗ ಹುಸ್ಮಾನ್, ತೋಟಗಾರಿಕೆ ಇಲಾಖೆ ಅಧಿಕಾರಿ ಚೇತನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಾಡಾನೆಗಳ ದಾಳಿಯಿಂದ ರೈತರ ಬೆಳೆ ನಾಶವಾಗಿದ್ದು, ವೈಜ್ಞಾನಿಕ ಪರಿಹಾರ ನೀಡಬೇಕೆಂದು ಪ್ರಾಂತ ರೈತ ಸಂಘದ ಅಧ್ಯಕ್ಷ ಎನ್.ಎಲ್. ಭರತ್‌ರಾಜ್ ಒತ್ತಾಯಿಸಿದ್ದು, ಆನೆಗಳ ದಾಳಿಯಿಂದಾಗಿ ರೈತರ ಟಮೆಟೊ, ಕಬ್ಬು ಹಾಗೂ ಕೊಳವೆಬಾವಿ, ಪಂಪ್‌ಸೆಟ್ ಪರಿಕರ ಹಾನಿಯಾಗಿದ್ದು, ಕಾಡು ಪ್ರಾಣಿಗಳ ಹಾವಳಿಯಿಂದ ರೈತರ ಬೆಳೆ ರಕ್ಷಿಸಿ ನಷ್ಟಕ್ಕೆ ಒಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಅವರು ಮನವಿ ಮಾಡಿದ್ದಾರೆ.



ಮೈಸೂರಿನ ಶ್ರೀ ಸಾಯಿರಂಗ ವಿದ್ಯಾ ಸಂಸ್ಥೆಯ ಮಕ್ಕಳಿಗೆ ಅಗತ್ಯ ವಸ್ತುಗಳನ್ನು ನೀಡುವ ಮೂಲಕ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಕಾಂಗ್ರೆಸ್ ಮುಖಂಡ ಎಂ.ಎಸ್.ದರ್ಶನ್, ಪಾಲಿಕೆ ಮಾಜಿ ಸದಸ್ಯ ಸುನಂದ ಕುಮರ್, ವಕೀಲ ಅಭಿಷೇಕ್ ಪಟೇಲ್ ಮತ್ತಿತರರಿದ್ದರು.


ಪುಂಡಾನೆ ಕಾಡಿಗಟ್ಟಲು ಕಾರ್ಯಾಚರಣೆ; ಎಚ್ಚರ ವಹಿಸಲು ಸಾರ್ವಜನಿಕರಿಗೆ ಸೂಚನೆ



ವಿರಾಜಪೇಟೆ, ಜು.22– ಉಪಟಳ ನೀಡುತ್ತಿರುವ ಕಾಡಾನೆಯನ್ನು ಕಾಡಿಗಟ್ಟಲು ಜು.24 ಹಾಗೂ 25ರಂದು ಕಾರ್ಯಾಚರಣೆ ನಡೆಸಲಿದ್ದು, ಸಾರ್ವಜನಿಕರು ಎಚ್ಚರ ವಹಿಸುವಂತೆ ಅರಣ್ಯಾಧಿಕಾರಿಗಳು ಮನವಿ ಮಾಡಿದ್ದಾರೆ.

ವಿರಾಜಪೇಟೆ ಅರಣ್ಯ ವಲಯದ ಅಮ್ಮತ್ತಿ ಶಾಖೆ ವ್ಯಾಪ್ತಿಯ ಯಡೂರು, ಹಚ್ಚಿನಾಡು, ಹಾಲುಗುಂದ, ಕಣ್ಣಂಗಾಲ, ಪುಲೀಯೇಲಿ, ಗುಹ್ಯ, ಇಂಜಲಗೆರೆ, ಸಿದ್ದಾಪುರ ಹಾಗೂ ಸುತ್ತಮುತ್ತ ಉಪಟಳ ನೀಡುತ್ತಿರುವ ಕಾಡಾನೆಯನ್ನು ಕಾಡಿಗೆ ಓಡಿಸಲು ಜು.24 ಹಾಗೂ 25ರಂದು ಕಾರ್ಯಾಚರಣೆ ನಡೆಸಲಾಗುವುದು. ಹಾಗಾಗಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು, ಸಾರ್ವಜನಿಕರು ಮತ್ತು ಶಾಲಾ ಮಕ್ಕಳು ಎಚ್ಚರ ವಹಿಸಬೇಕೆಂದು ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕೆ.ಎಂ.ದೇವಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಲಾದರೇನು, ಆಲ್ಕೋಹಾಲಾದರೇನು, ಖಜಾನೆ ತುಂಬಬೇಕಷ್ಟೇ



ಬೆಂಗಳೂರು: ಆಲ್ಕೋಹಾಲಿನ ಬೆಲೆ ಏರಿಸಿದ ನಂತರ ಕಾಂಗ್ರೆಸ್ ಸರ್ಕಾರ ಈಗ ಹಾಲಿನ ಬೆಲೆಯನ್ನೂ ಲೀಟರಿಗೆ 3 ರು. ಹೆಚ್ಚಿಸಿ ಶ್ರಮಜೀವಿಗಳ ಕಿಸೆಗೆ ಕನ್ನ ಕೊರೆದಿದೆ. ಒಂದು ಕೈಯ್ಯಲ್ಲಿ ಕೊಟ್ಟು ಇನ್ನೊಂದು ಕೈಯ್ಯಲ್ಲಿ ಕಸಿದುಕೊಳ್ಳುತ್ತಿದೆ! ಸ್ವತಃ ತಾವೇ ಕಿವಿಯಲ್ಲಿ ಹೂವಿಟ್ಟುಕೊಂಡಿದ್ದ ಕಾಂಗ್ರೆಸ್ಸಿಗರು, ಜನರ ತಲೆಯ ಮೇಲೆ ಫ್ಲವರ್ ಪಾಟ್ ಇಡುತ್ತಿದ್ದಾರೆ ಎಂದು ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಚುನಾವಣೆಗೆ ಮುನ್ನ ಬೆಲೆ ಏರಿಕೆ ಬಗ್ಗೆ ಕಾಂಗ್ರೆಸ್ ಬಾಯಿ ಬಾಯಿ ಬಡಿದುಕೊಂಡಿತ್ತು. ದೊಡ್ಡ ಬಾನಗಡಿಯನ್ನೇ ಎಬ್ಬಿಸಿತ್ತು. ಅಧಿಕಾರಕ್ಕೆ ಬಂದೊಡನೆ ಬೆಲೆ ಏರಿಕೆಯ ಸರಣಿ ಶಾಕ್ ನೀಡುತ್ತಿದೆ. ಹೀಗಿದೆ ನೋಡಿ ಕೈ ಕರಾಮತ್ತು. ಅನ್ನಭಾಗ್ಯದ ಹಣವನ್ನು ಹಾಲು, ಆಲ್ಕೋಹಾಲಿನಿಂದಲೇ ವಸೂಲಿಗೆ ಇಳಿದಿರುವ ಕಾಂಗ್ರೆಸ್ ಕ್ಷುದ್ರ ವಿತ್ತ ನೀತಿಗೆ ಧಿಕ್ಕಾರ ಎಂದು ಹೇಳಿದ್ದಾರೆ.

ಆರಂಭದಲ್ಲಿಯೇ ವಿದ್ಯುತ್ ಶಾಕ್ ಕೊಟ್ಟಿದ್ದ ಸರ್ಕಾರ, ಗೃಹಜ್ಯೋತಿಯನ್ನು ಜನರ ಪಾಲಿಗೆ ಸುಡುಜ್ಯೋತಿ ಮಾಡಿತ್ತು. ಏರಿದ ಬೆಲೆಗಳನ್ನು ಕೆಳಗಿಳಿಸಲು ಕೈಲಾಗದ ಈ ಸರ್ಕಾರ, ವಿಧಾನ ಕಲಾಪ ಮುಗಿಯುತ್ತಿದ್ದಂತೆಯೇ ಜನತೆಗೆ ಹೊಸದಾಗಿ ಬೆಲೆ ಏರಿಕೆ ಗ್ಯಾರಂಟಿ, ಬೆಲೆಭಾಗ್ಯವನ್ನು ಕರುಣಿಸಿ ಕೈತೊಳೆದುಕೊಂಡಿದೆ ಎಂದು ವಾಗ್ದಾಳಿ ಮಾಡಿದ್ದಾರೆ. ಚುನಾವಣೆ ಪ್ರಣಾಳಿಕೆಯಲ್ಲಿ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನದ ಭರವಸೆ ಕೊಟ್ಟಿದ್ದವರು ಎರಡೇ ತಿಂಗಳಲ್ಲಿ ಅದನ್ನು ಮರೆತೇ ಹೋಗಿದ್ದಾರೆ!! ಹಸುಗಳ ಹಿಂಡಿ, ಬೂಸಾ ಬೆಲೆ ಇಳಿಕೆಗೂ ಯಾವ ಗ್ಯಾರಂಟಿಯೂ ಇಲ್ಲ. ಇವರಿಗೆ ಆಲ್ಕೋಹಾಲಾದರೇನು, ಹಾಲಾದರೇನು, ಖಜಾನೆ ತುಂಬಬೇಕಷ್ಟೇ. ಈಗ ಜನರ ಬದುಕೇ ಹಾಲಾಹಲವಾಗಿದೆ ಎಂದು ಹೇಳಿದ್ದಾರೆ.

ಟೊಮೆಟೊ ದರೋಡೆ: ದಂಪತಿ ಬಂಧನ

ಬೆಂಗಳೂರು: ಬೆಂಗಳೂರಿನ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ವರದಿಯಾದ ಟೊಮೆಟೊ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ದಂಪತಿಯನ್ನು ಬಂಧಿಸಿದ್ದಾರೆ. ಇತರೆ ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಬಂಧಿತ ದಂಪತಿಯನ್ನು ಭಾಸ್ಕರ್ ಮತ್ತು ಆತನ ಪತ್ನಿ ಸಿಂಧೂಜಾ ಎಂದು ಗುರುತಿಸಲಾಗಿದೆ. ರಾಕಿ, ಕುಮಾರ್ ಮತ್ತು ಮಹೇಶ್‌ಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಜುಲೈ 8ರಂದು ಈ ಘಟನೆ ನಡೆದಿದ್ದು, ಬೆಂಗಳೂರಿನಲ್ಲಿ ರೈತರೊಬ್ಬರನ್ನು ಬೆದರಿಸಿದ ದುಷ್ಕರ್ಮಿಗಳು 2,000 ಕೆಜಿ ಟೊಮೆಟೊ ಹಾಗೂ ವಾಹನದೊಂದಿಗೆ ಪರಾರಿಯಾಗಿದ್ದರು. ಬೆಂಗಳೂರಿನ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕಜಾಲ ಬಳಿ ಈ ಘಟನೆ ನಡೆದಿತ್ತು. ಚಿತ್ರದುರ್ಗ ಜಿಲ್ಲೆಯ ರೈಲು ಹಿರಿಯೂರು ಪಟ್ಟಣದಿಂದ ಕೋಲಾರ ಮಾರುಕಟ್ಟೆಗೆ ಟೊಮೆಟೊ ಸಾಗಿಸುತ್ತಿದ್ದರು. ಟೊಮೆಟೊವನ್ನು ಗಮನಿಸಿದ ದುಷ್ಕರ್ಮಿಗಳ ತಂಡವು ವಾಹನವನ್ನು ಹಿಂಬಾಲಿಸಿತ್ತು. ಅಲ್ಲೇ ಟೊಮೆಟೊ ಸಾಗಿಸುತ್ತಿದ್ದ ವಾಹನವನ್ನು ಅಡ್ಡಗಟ್ಟಿ ರೈತನ ಮೇಲೆ ಹಲ್ಲೆ ನಡೆಸಿತ್ತು. ಅವರಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದ ಅವರು, ನಂತರ ಆನ್‌ಲೈನ್‌ನಲ್ಲಿ ತಮ್ಮ ಮೊಬೈಲ್‌ಗೆ ಹಣ ವರ್ಗಾವಣೆ ಮಾಡಿದ್ದರು. ರೈತರೊಂದಿಗೆ ವಾಹನವನ್ನು ಹತ್ತಿದ್ದ ದುಷ್ಕರ್ಮಿಗಳು ರೈತನನ್ನು ಬಲವಂತವಾಗಿ ವಾಹನದಿಂದ ಹೊರಕ್ಕೆ ತಳ್ಳಿ ಟೊಮೆಟೊ ಸಾಗಿಸುತ್ತಿದ್ದ ವಾಹನವನ್ನು ತೆಗೆದುಕೊಂಡು ಪರಾಗಿಯಾಗಿದ್ದರು.

ಈ ಸಂಬಂಧ ಆರ್‌ಎಂಸಿ ಯಾರ್ಡ್ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಸಂಗ್ರಹಿಸಿ ಆರೋಪಿ ದಂಪತಿಗಳ ಸುಳಿವು ಸಂಗ್ರಹಿಸಿದ್ದರು. ವಾಹನವನ್ನು ಚೆನ್ನೈಗೆ ಕೊಂಡೊಯ್ದು ಅಲ್ಲಿ ಟೊಮೆಟೊ ಮಾರಾಟ ಮಾಡಿದ್ದರು. ಪೀಣ್ಯ ಬಳಿ ವಾಹನ ನಿಲ್ಲಿಸಿ ನೋಂದಣಿ ನಂಬರ್ ಪ್ಲೇಟ್ ಇಲ್ಲದ ಇನ್ನೊಂದು ವಾಹನದಲ್ಲಿ ಪರಾರಿಯಾಗಿದ್ದರು. ಕರ್ನಾಟಕದಲ್ಲಿ ಟೊಮೆಟೊ ಬೆಲೆ 120 ರಿಂದ 150 ರೂ.ಗೆ ತಲುಪಿರುವುದು ಗಮನಾರ್ಹ. ದುಷ್ಕರ್ಮಿಗಳು ಟೊಮೋಟೊ ಜಮೀನಿಗೆ ನುಗ್ಗಿ ಕಳ್ಳತನ ಮಾಡಿ ಶೀಘ್ರ ಹಣ ಗಳಿಸುತ್ತಿರುವುದರಿಂದ ಟೊಮೋಟೊ ಬೆಳೆಗೆ ಟೆಂಟ್ ಹಾಕಿಕೊಂಡು ಕಾವಲು ಕಾಯಬೇಕಾದ ಅನಿವಾರ್ಯತೆಗೆ ರೈತರು ಸಿಲುಕಿದ್ದಾರೆ.

ಹಾವು ಕಚ್ಚಿ ರೈತ ಸಾವು



ಕೆ.ಆರ್.ಪೇಟೆ, ಜು.22– ಹಾವು ಕಚ್ಚಿ ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಶ್ರವಣಹಳ್ಳಿಯಲ್ಲಿ ನಡೆದಿದೆ.

ತಾಲೂಕಿನ ಶ್ರವಣಹಳ್ಳಿ ಗ್ರಾಮದ ರೈತ ಮಂಜೇಗೌಡ(49) ಸಾವನ್ನಪ್ಪಿದವರು. ಈತ ಶುಕ್ರವಾರ ಸಂಜೆ ತಮ್ಮ ಜಮೀನಿನಲ್ಲಿ ಕಬ್ಬು ಕಟಾವು ಮಾಡುತ್ತಿದ್ದ ವೇಳೆ ಹಾವು ಕಚ್ಚಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಟುಂಬಕ್ಕೆ ಆಧಾರಸ್ತಂಭವಾಗಿದ್ದ ರೈತನ ಸಾವಿನಿಂದ ಆತನ ಕುಟುಂಬ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದೆ. ಹೀಗಾಗಿ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಪಂ ಸದಸ್ಯ ಅರುಣ್ ಮನವಿ ಮಾಡಿದ್ದಾರೆ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಹೆಚ್.ಟಿ.ಮಂಜು ರೈತನ ಅಂತಿಮ ದರ್ಶನ ಪಡೆದು, ಮೃತ ರೈತನ ಕುಟುಂಬದವರಿಗೆ ಸಾಂತ್ವನ ಹೇಳಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾದಲ್ಲಿ ವಿನೂತನ ಆಭರಣ ಪ್ರದರ್ಶನ, ಮಾರಾಟ



ಮೈಸೂರು, ಜು. 22– ಮದುವೆ ಹಾಗೂ ಶುಭಕಾರ್ಯಗಳಿಗೆ ಮೆರಗು ನೀಡಲು ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾದಲ್ಲಿ ವಿನೂತನ ಆಭರಣ ಪ್ರದರ್ಶನ, ಮಾರಾಟವನ್ನು ಜನಪ್ರಿಯ ನಟಿ ನಿಶ್ವಿಕಾ ನಾಯ್ಡು ಉದ್ಘಾಟಿಸಿದರು. ಭಾರತೀಯ ಒಡವೆಗಳ ಉತ್ಸವದಲ್ಲಿ ದೇಶದ 20 ಅಗ್ರ ಶ್ರೇಣಿಯ ಆಭರಣ ತಯಾರಕರು ಭಾಗವಹಿಸಿದ್ದಾರೆ. ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ್ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಈ ಮೇಳ ವನ್ನು ಆಯೋಜಿಸಿದ್ದಾರೆ.

ಆಭರಣ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚಿನದಾಗಿದ್ದು, ನಂಬಿಕಸ್ತ ಹೂಡಿಕೆಯೂ ಆಗಿದೆ. ಈ ಮೇಳದಲ್ಲಿ ಪ್ರಶಸ್ತಿ ವಿಜೇತ ಹಾಗೂ ಹೆಸರಾಂತ ಆಭರಣ ಮಳಿಗೆಗಳವರು ಭಾಗವಹಿಸುತ್ತಿದ್ದಾರೆ. ಅಲ್ಲದೆ ಮುಂಬರುವ ಮದುವೆ ಸಮಾರಂಭ ಹಾಗೂ ಹಬ್ಬದ ಶುಭ ಸಂದರ್ಭದಲ್ಲಿ ಆಭರಣಗಳನ್ನು ಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ. ಮೈಸೂರು ನಗರ ಮತ್ತು ಸುತ್ತಮುತ್ತಲಿನ ನಾಗರಿಕರಿಗೆ ಆಭರಣಗಳನ್ನು ನೋಡಲು ಮತ್ತು ಕೊಳ್ಳಲು ಈ ಮೇಳದ ಮೂಲಕ ಅನುವು ಮಾಡಿಕೊಡಲಾಗಿದೆ. ಭಾರತ ದೇಶದ ವಿವಿಧ ಕುಶಲಕರ್ಮಿಗಳು ತಯಾರಿಸಿದಂತಹ ವಿಭಿನ್ನ ಶೈಲಿಯ ಆಭರಣಗಳು ಈ ಮೇಳದಲ್ಲಿ ದೊರೆಯಲಿವೆ.

ಬೆಂಗಳೂರಿನ ಗಜರಾಜ್, ಕೀಯಾ, ಎಂ.ಪಿ. ಜ್ಯುವೆಲರ್ಸ್, ಪಂಚಕೇಸರಿ ಬಡೇರ, ಪಿಎಂಜಿ ಸಿಂಹ ಜ್ಯುವೆಲರ್ಸ್, ಶ್ರೀ ಕುಮಾರನ್ ತಂಗಳಿಗೈ, ಶ್ರೀವಾರಿ, ಶ್ರೀ ಗಣೇಶ್ ಜೆಮ್ಸ್, ವಂಡರ್ ಡೈಮಂಡ್ಸ್, ರೂಪಂ ಸಿಲ್ವರ್, ಸ್ಯಾಂಚೀಸ್, ಮದನ್ ಜೆಮ್ಸ್, ರಾಜ್ ಡೈಮಂಡ್ಸ್ (ಮೈಸೂರು), ಔರಾ(ನವದೆಹಲಿ), ಪನ್ನ ಜ್ಯುವೆಲರ್ಸ (ಹೈದರಬಾದ್), ಸುನಿಲ್ ಜ್ಯುವೆಲರ್ಸ್ (ಜೈಪುರ್) ಆಭರಣ ಮಳಿಗೆಗಳು ಭಾಗವಹಿಸಿವೆ.

ಶೀಘ್ರ ಕ್ಲೈಮ್ ವಿಲೇವಾರಿ ಮಾಡಿ ಗ್ರಾಹಕ ಸ್ನೇಹಿಯಾದ ಅಂಚೆ ಇಲಾಖೆ



ಮೈಸೂರು, ಜು. 22–ಅರ್ಜಿ ಸಲ್ಲಿಸಿದ ಏಳು ದಿನಗಳಲ್ಲಿ ಎಲ್ಲಾ ಪರಿಶೀಲನೆಗಳನ್ನು ಮುಗಿಸಿ ಕ್ಲೈಮ್ ಮಂಜೂರು ಮಾಡಿ ಅಂಚೆ ಜೀವ ವಿಮೆ ಪಾಲಿಸಿದಾರನ ನಾಮಿನಿಗೆ ಚೆಕ್ ಹಸ್ತಾಂತರಿಸುವ ಮೂಲಕ ಅಂಚೆ ಇಲಾಖೆ ಗ್ರಾಹಕ ಸ್ನೇಹಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ.

2018ರಲ್ಲಿ 5 ಲಕ್ಷ ರೂಪಾಯಿಗಳಿಗೆ ಅಂಚೆ ಜೀವ ವಿಮೆ (ಪಿಎಲ್‌ಐ) ಮಾಡಿಸಿಕೊಂಡಿದ್ದ ಚೆಸ್ಕಾಂನಲ್ಲಿ ಮೆಕ್ಯಾನಿಕ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಕೃಷ್ಣಮೂರ್ತಿ (58) ಅವರು ಇತ್ತೀಚೆಗೆ ವಿದ್ಯುತ್ ಅವಘಡದಲ್ಲಿ ನಿಧನರಾಗಿದ್ದರು. ನಾಮಿನಿಯಾಗಿದ್ದ ಅವರ ಪತ್ನಿ ತೇನ್‌ಮಳಿಯವರು ಇದೇ ತಿಂಗಳ 11ರಂದು ಕ್ಲೈಮ್ ಅರ್ಜಿಯನ್ನು ಮೈಸೂರಿನ ಪ್ರಧಾನ ಅಂಚೆ ಕಚೇರಿಗೆ ಸಲ್ಲಿಸಿದ್ದರು. ಎಲ್ಲಾ ದಾಖಲೆಗಳ ಪರಿಶೀಲನೆ ಸೇರಿದಂತೆ ಕ್ಲೈಮ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಕೇವಲ 7 ದಿನಗಳಲ್ಲಿ ಮುಗಿಸಿ 18ರಂದು ಕ್ಲೈಮ್ ಅರ್ಜಿಯನ್ನು ಅಂಚೆ ಇಲಾಖೆ ಮಂಜೂರು ಮಾಡಿದೆ.

ಮಂಜೂರಾತಿ ಹಣ ರೂ.6,29,211/– ಮೌಲ್ಯದ ಚೆಕ್ ಅನ್ನು ಮೈಸೂರು ಪ್ರಧಾನ ಅಂಚೆ ಕಚೇರಿಯ ಹಿರಿಯ ಅಂಚೆ ಪಾಲಕರಾದ ಎಂ ಎಲ್ ನವೀನ್ ರವರು ಶ್ರೀಮತಿ ತೇನ್‌ಮಳಿಯವರಿಗೆ ಇತ್ತೀಚೆಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಮೈಸೂರು ಪ್ರಧಾನ ಅಂಚೆ ಕಚೇರಿಯ ಪಿಎಲ್‌ಐ ಕೇಂದ್ರೀಕೃತ ವಿಭಾಗದ ಮ್ಯಾನೇಜರ್ ವೈ.ಆರ್. ಮುರುಳೀದರ್, ಉಳಿತಾಯ ಖಾತೆ ಎಪಿಎಂ ಕ್ಷಮಾರಾವ್, ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ಅಧಿಕಾರಿ ಡಾ.ಸುರೇಶ್ ಕುಮಾರ್, ವಿಶ್ವನಾಥ್, ಗುರುರಾಜ್ ಹಾಜರಿದ್ದರು.

ಜ್ಞಾನದ ಗಳಿಕೆಗೆ ಶಿಕ್ಷಕರು ಉತ್ಸುಕರಾಗಿರಬೇಕು



ಮೈಸೂರು, ಜು. 22– ಬ್ರಹ್ಮಾಂಡದಂತಿರುವ ಜ್ಞಾನ ಗಳಿಕೆಗೆ ಶಿಕ್ಷಕರು ಉತ್ಸುಕರಾಗಿರಬೇಕು ಎಂದು ಮೈಸೂರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕ ಸಿ.ಆರ್. ನಾಗರಾಜಯ್ಯ ಹೇಳಿದರು.

ಮೈಸೂರಿನ ಅಗಸ್ತ್ಯ ಅಂತಾರಾಷ್ಟ್ರೀಯ ಪ್ರತಿಷ್ಠಾನ ಕುಂಬಾರಕೊಪ್ಪಲು ಸ.ಹಿ.ಪ್ರಾ. ಶಾಲೆಯಲ್ಲಿ ಎಲ್ ಮತ್ತು ಟಿಟಿಎಸ್, ಮೊಬೈಲ್ ಇನ್ನೋವೇಶನ್ ಲ್ಯಾಬ್, ಎಲೆಕ್ಟ್ರಾನಿಕ್, ಹಾಗೂ ಎಲ್.ಎಸ್.ಐ ಕಾರ್ಯಕ್ರಮಗಳ ಎರಡು ದಿನಗಳ ಶಿಕ್ಷಕರ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ಯಾವಾಗಲೂ ಕಲಿಯುವ ಹಂಬಲ ಇರುವ ವಿದ್ಯಾರ್ಥಿಯಾಗಿರಬೇಕು. ಯಾವ ವಿಷಯವನ್ನೇ ಆಗಲಿ ಕಲಿಯುತ್ತೇನೆ ಎಂಬ ಮನೋಭೂಮಿಕೆಯನ್ನು ಸಿದ್ಧಪಡಿಸಿಕೊಂಡು ಕಾರ್ಯಪ್ರವೃತ್ತರಾದರೆ ಯಾವುದೇ ಕ್ಷೇತ್ರದಲ್ಲಾದರೂ ಯಶಸ್ವಿಯಾಗಬಹುದು. ಇಂದಿನ ವಿಜ್ಞಾನ ಯುಗದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ತಿಳಿದು ಅದರಂತೆ ಜೀವನ ಶೈಲಿಯನ್ನು ಬದಲಿಸಿಕೊಳ್ಳಲು ಪ್ರಸ್ತುತ ತರಬೇತಿ ಸಹಕಾರಿಯಾಗಲಿದೆ ಎಂದರು.

ಕಾರ್ಯಾಗಾರಕ್ಕೆ ಮೈಸೂರು ಗ್ರಾಮಾಂತರ, ಉತ್ತರ ವಲಯ, ದಕ್ಷಿಣ ವಲಯ ಹಾಗೂ ತಿ. ನರಸೀಪುರದಿಂದ 96 ಶಿಕ್ಷಕರು ಭಾಗವಹಿಸಿ ತರಬೇತಿ ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಸಹಾಯಕ ಸಂಯೋಜನ ಅಧಿಕಾರಿ ವೆಂಕಟಾಚಲ, ಡಯಟ್ ಉಪನ್ಯಾಸಕರಾದ ಜಯಂತಿ, ನಟೇಶ್, ಕುಂಬಾರ ಕೊಪ್ಪಲು ಶಾಲೆಯ ಮುಖ್ಯ ಶಿಕ್ಷಕ ಲೋಹಿತೇಶ್, ಅಗಸ್ತ್ಯ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಮಂಜುನಾಥ್, ಪ್ರದೀಪ್, ಪ್ರೇಮ್‌ಕುಮಾರ್ ಮತ್ತು ಸಿಬ್ಬಂದಿ ವರ್ಗ ಭಾಗವಹಿಸಿದ್ದರು.



ಇತ್ತೀಚೆಗೆ ಮೈಸೂರಿನ ಪುಷ್ಕರಿಣಿ ಶಾಲೆಯಲ್ಲಿ ನಡೆದ ಮೈಸೂರು ಜಿಲ್ಲಾ ಅಮೆಚೂರ್ ಥ್ರೋಬಾಲ್ ಅಸೋಸಿಯೇಷನ್‌ನ ವಾರ್ಷಿಕ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಕಾಶಿನಾಥ್ (ಕಾರ್ಯದರ್ಶಿ), ಸುಧೀರ್ ಭಟ್, ಡಾ.ಪಿ.ಕೃಷ್ಣಯ್ಯ (ಉಪಾಧ್ಯಕ್ಷರು), ಮಸೂದ್ ಜಾವೀದ್ (ಅಧ್ಯಕ್ಷ), ಸ್ವರೂಪಿಣಿ (ಉಪಾಧ್ಯಕ್ಷೆ), ಭವಾನಿ ನಾಗೇಶ್ (ಉಪಾಧ್ಯಕ್ಷ), ರಾಕೇಶ್, ಅಂಕೋಶಿ ಬ್ಯಾಪ್ಟೀಷ್ (ಜಂಟಿ ಕಾರ್ಯದರ್ಶಿಗಳು), ಸಯೀದ್ ಮುಖಿನ್ (ಸಂಘಟನಾ ಕಾರ್ಯದರ್ಶಿ), ಮಹದೇವ (ಖಜಾಂಚಿ) ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿದ್ದಾರೆ.

ದಸರಾ ಗಜಪಡೆಯಲ್ಲಿ ಹೊಸ ಆನೆಗಳ ಖದರು; ಅಭಿಮನ್ಯು ಉತ್ತರಾಧಿಕಾರಿ ಯಾರು?

● ಎರಡನೇ ಸಾಲಿನ ಗಜಪಡೆ ಸಜ್ಜುಗೊಳಿಸುವ ಸವಾಲು ● ಕ್ಯಾಪ್ಟನ್ ಅಭಿಮನ್ಯು ಬಳಿಕ ಧನಂಜಯ, ಮಹೇಂದ್ರ, ಭೀಮ, ಗೋಪಿ ಮೇಲೆ ಭರವಸೆ ● ಹೊಸ ಹೆಣ್ಣಾನೆಗಳಿಗೂ ಅವಕಾಶ

● ಎಂ.ಟಿ.ಯೋಗೇಶ್‌ಕುಮಾರ್



ಮೈಸೂರು,ಜು.22– ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿದೆ. ಗಜಪಡೆಯ ಪಯಣ, ತಾಲೀಮು, ಜಂಬೂಸವಾರಿ ಸೇರಿದಂತೆ ಎಲ್ಲ ರೀತಿಯ ಪ್ರಕ್ರಿಯೆಗಳಿಗೆ ಸಿದ್ಧತೆ ಆರಂಭಗೊಂಡಿದೆ.

ಇದರ ಬೆನ್ನಲ್ಲೇ ನಾಯಕ ಅಭಿಮನ್ಯು ನಿವೃತ್ತಿಯ ನಂತರ ಹೊಸ ಅಂಬಾರಿ ಆನೆ ಸಜ್ಜುಗೊಳಿಸುವ ಮಹತ್ತರ ಜವಾಬ್ದಾರಿ ಅರಣ್ಯ ಇಲಾಖೆ ಮುಂದಿದೆ. ಅದಕ್ಕಾಗಿ ಎರಡನೇ ಪಂಕ್ತಿಯ ಆನೆಗಳಿಗೆ ತರಬೇತಿ ನೀಡಲು ಈ ಬಾರಿ ಹೊಸ ಆನೆಗಳನ್ನೂ ತಂಡಕ್ಕೆ ಸೇರಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಕ್ಯಾಪ್ಟನ್ ಅಭಿಮನ್ಯುವಿಗೆ ಇನ್ನು 2–3 ವರ್ಷವಷ್ಟೇ ಅಂಬಾರಿ ಹೊರುವ ಜವಾಬ್ದಾರಿ ನೀಡಲಾಗುತ್ತದೆ. ಆ ನಂತರ ವಯೋಸಹಜ ನಿವೃತ್ತಿ ಹೊಂದಲಿದ್ದಾನೆ. ಅಭಿಮನ್ಯುವಿನ ಉತ್ತರಾಧಿಕಾರಿ ಯಾರು ಎಂಬ ಪ್ರಶ್ನೆ ಕಾಡುತ್ತಿದೆ? ಇದೀಗ ಧನಂಜಯ, ಗೋಪಿ, ಮಹೇಂದ್ರ ಹಾಗೂ ಭೀಮನ ಮೇಲೆ ಎಲ್ಲರ ದೃಷ್ಟಿ ಹಾಯುತ್ತಿದೆ. ಇದರೊಂದಿಗೆ ಎರಡನೇ ಹಂತದ ಆನೆಗಳನ್ನು ಪಳಗಿಸುವ ಮೂಲಕ ಮುಂದಿನ 8–10 ವರ್ಷದ ಬಳಿಕ ಚಿನ್ನದ ಅಂಬಾರಿ ಹೊರುವ ಆನೆಗಳನ್ನು ಪಳಗಿಸುವುದು ಅರಣ್ಯ ಇಲಾಖೆಯ ಉದ್ದೇಶವಾಗಿದೆ.

ದೊಡ್ಡ ಸವಾಲು: ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿಯಲ್ಲಿ ಪ್ರಮುಖ ಕೇಂದ್ರಬಿಂದು ಎಂದರೆ ಗಜಪಡೆ. ನಾಲ್ಕು ದಶಕಗಳಿಂದಲೂ ಅಂಬಾರಿ ಹೊರುವ ಕಾಯಕವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿರುವ ಗಜಪಡೆ, ತನ್ನ ಮಹತ್ವ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಹೆಜ್ಜೆ ಹಾಕಿದೆ. ಜಂಬೂ ಸವಾರಿ ಎಂದರೇ "ಗಜ'ಗಾಂಭೀರ್ಯ. ಈ ನಿಟ್ಟಿನಲ್ಲಿ ಎರಡನೇ ಸಾಲಿನ ದಸರಾ ಆನೆ ಸಜ್ಜುಗೊಳಿಸಲೇಬೇಕಾದ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ.



ಭವಿಷ್ಯದ ಅಂಬಾರಿ ಆನೆ ಎಂದು ಭರವಸೆ ಮೂಡಿಸಿದ್ದ ದ್ರೋಣ (ಜ್ಯೂನಿಯರ್) ಖಾಸಗಿ ಬಸ್ ಡಿಕ್ಕಿಯಾಗಿ ಮೃತಪಟ್ಟರೆ, ಕಾಡಾನೆ ದಾಳಿಗೆ ತುತ್ತಾಗಿ ಗೋಪಾಲಸ್ವಾಮಿ ಆನೆಯೂ ಇಹಲೋಕ ತ್ಯಜಿಸಿದ್ದು, ಅರಣ್ಯ ಇಲಾಖೆಯನ್ನು ಚಿಂತೆಗೀಡು ಮಾಡಿದೆ. ಎರಡು ವರ್ಷ ಕೊರೊನಾ ಹಾವಳಿಯಿಂದಾಗಿ ಅರಮನೆ ಆವರಣಕ್ಕಷ್ಟೇ ಜಂಬೂಸವಾರಿ ಮೆರವಣಿಗೆ ಸೀಮಿತಗೊಂಡಿದ್ದರಿಂದ ಆನೆಗಳಿಗೆ ತರಬೇತಿ ನೀಡುವುದಕ್ಕೂ ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ವರ್ಷದಿಂದ ಹೊಸ ಆನೆಗಳ ತರಬೇತಿಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ.

ಮೊದಲ ತಂಡದಲ್ಲಿ ಹೊಸಬರಿಗೂ ಅವಕಾಶ ಸಾಧ್ಯತೆ: ಅಂಬಾರಿ ಆನೆ ಅಭಿಮನ್ಯುವಿನೊಂದಿಗೆ ಧನಂಜಯ, ಮಹೇಂದ್ರ, ಭೀಮ ಆನೆ ತರಲು ಚಿಂತನೆ ನಡೆಸಲಾಗಿದೆ. ಇದರೊಂದಿಗೆ ಹೊಸ ಆನೆ ಲಕ್ಷ್ಮೀ (ದೊಡ್ಡಹರವೆ) ಹಾಗೂ ಕಾವೇರಿ ಅಥವಾ ವಿಜಯ ಬರುವ ಸಾಧ್ಯತೆ ಇದೆ. ಕಳೆದ ಬಾರಿ ಬಂದಿದ್ದ ಗೋಪಿ, ಸುಗ್ರೀವ, ಶ್ರೀರಾಮ ಆನೆಯೂ ಈ ಬಾರಿ ಬರುವುದು ಖಚಿತ. ಹೊಸ ಆನೆಯಾಗಿ ಈ ಬಾರಿ ಭೀಮ್, ಶ್ರೀಕಂಠ, ಶ್ರೀರಂಗ ಗಜಪಡೆ ಸೇರುವ ಸಾಧ್ಯತೆ ಇದೆ. ಈ 4 ಆನೆಗಳ ಮೇಲೆ ಅರಣ್ಯ ಇಲಾಖೆ ಹೆಚ್ಚಿನ ನಿಗಾ ಇರಿಸಲು ನಿರ್ಧಸಿದೆ.

ಆಗಸ್ಟ್ ಕೊನೆ ವಾರ ಗಜಪಯಣ: ದಸರಾ ಮಹೋತ್ಸವ ಅ.14 (ಮಹಾಲಯ ಅಮಾವಾಸ್ಯೆ) ರಿಂದ 24 (ಜಂಬೂ ಸವಾರಿ)ರವರೆಗೆ ನಡೆಯಲಿದೆ. ಜಂಬೂ ಸವಾರಿಗೆ 55 ರಿಂದ 60 ದಿನ ಮುನ್ನವೇ ಮೈಸೂರಿಗೆ ಮೊದಲ ತಂಡದ ಆನೆಗಳನ್ನು ಕರೆತರಲು ನಿರ್ಧರಿಸಲಾಗಿದೆ. ಅಂದರೆ ಆಗಸ್ಟ್ ಕೊನೆ ವಾರ ಗಜಪಯಣಕ್ಕೆ ದಿನಾಂಕ ನಿಗದಿ ಮಾಡಲಾಗುತ್ತದೆ.

ರಾಜವಂಶಸ್ಥರನ್ನು ಭೇಟಿ ಮಾಡಿದ ಅರಣ್ಯಾಧಿಕಾರಿಗಳ ತಂಡ: ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅರಣ್ಯಾಧಿಕಾರಿಗಳ ತಂಡ ಶನಿವಾರ (ಜು.22) ಮಧ್ಯಾಹ್ನ ಮೈಸೂರು ಅರಮನೆಗೆ ಆಗಮಿಸಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್ ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ಅವರು ಪ್ರಮೋದಾದೇವಿ ಅವರನ್ನು ಭೇಟಿ ಮಾಡಿ ದಸರಾ ಮಹೋತ್ಸವ, ಜಂಬೂಸವಾರಿ, ಗಜಪಡೆ ಹಾಗೂ ಗಜಪಯಣಕ್ಕೆ ಸಂಬಂಧಿಸಿದಂತೆ ಚರ್ಚಿಸಿದರು. ಈ ವೇಳೆ ಪ್ರಮೋದಾದೇವಿ ಒಡೆಯರ್ ಅವರು ಆನೆಗಳ ಆಯ್ಕೆ ಪ್ರಕ್ರಿಯೆ, ಯಾವ ಯಾವ ಶಿಬಿರದಲ್ಲಿ ಯಾವ ಆನೆಗಳಿವೆ ಎಂಬ ಮಾಹಿತಿ ಪಡೆದರು.

ಸ್ಥಳ ಪರಿಶೀಲನೆ: ಅರಮನೆ ಆವರಣದಲ್ಲಿ ದಸರಾ ಗಜಪಡೆಯನ್ನು ಕಟ್ಟಿಹಾಕುವ ಸ್ಥಳವನ್ನು ಅಧಿಕಾರಿಗಳು ಪರಿಶೀಲಿಸಿದರು. ಆನೆ ಕಟ್ಟಿಹಾಕುವ ಸ್ಥಳ, ಮಾವುತ, ಕಾವಾಡಿಗಳ ಶೆಡ್ ನಿರ್ಮಾಣದ ಸ್ಥಳವನ್ನು ಪರಿಶೀಲಿಸಿದ ಅಧಿಕಾರಿಗಳು ಆ ಜಾಗದಲ್ಲಿರುವ ಸಣ್ಣಪುಟ್ಟ ಹಳ್ಳಗಳನ್ನು ಮುಚ್ಚಿ ಸಮತಟ್ಟು ಮಾಡುವುದಕ್ಕೆ ಸೂಚಿಸಿದರು.

ಕ್ಯಾಂಪ್ ಪರಿಶೀಲನೆ ನಂತರ ಆನೆ ಪಟ್ಟಿ ತಯಾರಿ

"ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಸಂಪ್ರದಾಯದಂತೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೇವೆ. ಆನೆಗಳ ಬಗ್ಗೆ, ಆನೆಗಳ ಆಯ್ಕೆ ಬಗ್ಗೆ ಮಾಹಿತಿ ಪಡೆದಿದ್ದಾರೆ. ಗಜಪಡೆ ಆಯ್ಕೆ ಸಂಬಂಧ ಇನ್ನು ಎರಡು ಕ್ಯಾಂಪ್‌ಗಳಿಗೆ ತೆರಳಿ ಪರಿಶೀಲನೆ ಮಾಡಿದ ಬಳಿಕ ಪಟ್ಟಿ ತಯಾರಿಸಲಾಗುತ್ತದೆ.

–ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

ಎರಡನೇ ಹಂತದ ಆನೆಗಳ ತರಬೇತಿಗೂ ಕ್ರಮ

"ದಸರಾ ಮಹೋತ್ಸವದಲ್ಲಿ ಎರಡನೇ ಹಂತದ ಆನೆಗಳ ತರಬೇತಿ ನೀಡುವುದಕ್ಕೂ ಕ್ರಮ ಕೈಗೊಳ್ಳಲಾಗುವುದು. ಕಳೆದ ಬಾರಿ ಕರೆತರಲಾಗಿದ್ದ 14 ಆನೆಗಳ ಪೈಕಿ ಗೋಪಾಲಸ್ವಾಮಿ ಮೃತಪಟ್ಟಿದೆ. ಮರಿಗೆ ಜನ್ಮ ನೀಡಿರುವ ಲಕ್ಷ್ಮಿ ಆನೆಯನ್ನು ಹೊರತುಪಡಿಸಿ, ಉಳಿದ ಆನೆಗಳ ಆರೋಗ್ಯ ಪರಿಶೀಲಿಸಲಾಗುತ್ತದೆ. ಅದರೊಂದಿಗೆ ಭವಿಷ್ಯದ ಆನೆಗಳಾಗಿ ಮಾರ್ಪಡಿಸಲು ಕೆಲ ಸಮರ್ಥ ಹೊಸ ಆನೆಗಳ ಆಯ್ಕೆ ಮಾಡುವುದಕ್ಕೂ ಚಿಂತನೆ ನಡೆಸಲಾಗಿದೆ. ಪಟ್ಟಿ ಮಾಡಿದ ನಂತರ ಉನ್ನತಮಟ್ಟದ ಸಭೆಯಲ್ಲಿ ಆನೆಗಳ ಅಂತಿಮ ನಿರ್ಧಾರವಾಗಲಿದೆ.

– ಸೌರಭ್ ಕುಮಾರ್, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ನಿಶಾನೆ ಆನೆಯಾಗಿ ಅರ್ಜುನ

ವಯಸ್ಸಾದ ಕಾರಣ ಅರ್ಜುನ ಆನೆಯನ್ನು ಈ ಬಾರಿ ಗಜಪಡೆಯಿಂದ ಕೈಬಿಡಲಾಗುತ್ತದೆ ಎಂಬ ಸುದ್ದಿ ಹರಿದಾಡಿತ್ತು. ಆದರೆ, ಜಂಬೂ ಸವಾರಿ ಮೆರವಣಿಗೆಯಲ್ಲಿ ನಿಪುಣ, ಅನುಭವಿ ಆನೆಯನ್ನು ನಿಶಾನೆಯಾಗಿ ಕಳಿಸುವುದು ವಾಡಿಕೆ. ಆ ಕಾರಣದಿಂದ ಈ ಬಾರಿ ನಿಶಾನೆ ಆನೆಯಾಗಿ ಅರ್ಜುನನನ್ನೇ ಕರೆದೊಯ್ಯುವ ಅಭಿಪ್ರಾಯ ಕೇಳಿಬಂದಿದೆ. ಗಜಪಯಣದ ದಿನಾಂಕದವರೆಗೂ ಅರ್ಜುನ ಸೇರಿದಂತೆ ಪಟ್ಟಿ ಮಾಡಿರುವ ಆನೆಗಳ ಆರೋಗ್ಯದ ಮೇಲೆ ನಿಗಾ ಇಡಲಾಗಿದ್ದು, ಕೊನೆ ಘಳಿಗೆಯಲ್ಲಿ ಯಾವುದಾದರೂ ಆನೆ ಆರೋಗ್ಯದಲ್ಲಿ ಏರುಪೇರಾದರೆ, ಅದನ್ನು ಕೈಬಿಟ್ಟು, ಬೇರೆ ಆನೆ ತರಲು ನಿರ್ಧರಿಸಲಾಗಿದೆ.

ಯಾವುದೇ ಸಮಸ್ಯೆ ಇದ್ದರೂ ಅದನ್ನು ಮೀರಿ ನಿಂತು ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯ ವಿಶೇಷಚೇತನರಿಗೂ ಇದೆ




ಮೈಸೂರು, ಜು. 22– ಯಾವುದೇ ಸಮಸ್ಯೆ ಇದ್ದರೂ ಅದನ್ನು ಮೀರಿ ನಿಂತು ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯ ವಿಶೇಷ ಚೇತನರಿಗೂ ಇದೆ ಎಂದು ಮೈಸೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ.ಹೆಚ್.ಪಿ. ಜ್ಯೋತಿ ಅಭಿಪ್ರಾಯಪಟ್ಟರು.

ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಜೆ.ಎಸ್.ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಕಲಚೇತನರ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು ಕೆಲವು ನ್ಯೂನ್ಯತೆಯಿಂದ ವಿಕಲಚೇತನರಾಗಿರುತ್ತಾರೆ. ಅವರು ಹತ್ತಾರು ಎಡರು ತೊಡರುಗಳ ನಡುವೆ ತಮಗೆ ಬೇಕಿದ್ದುದನ್ನು ಸಾಧಿಸುವುದರ ಜೊತೆಗೆ ಇತರರಿಗೂ ಪ್ರೇರಣೆಯ ಬೆಳಕಾದವರ ಬದುಕಿನತ್ತ ಸಾಗಬೇಕಾಗಿದೆ, ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಷ್ಟೋ ಜನ ವಿಕಲಚೇತನರು ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ ತಾವುಗಳು ಕೂಡ ಹೆಚ್ಚಿನ ರೀತಿಯಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆಯುವುದಕ್ಕೆ ಪ್ರಯತ್ನಪಡಿಸಬೇಕಾಗಿದೆ ಎಂದು ಸಲಹೆ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಬಿ.ಇಳಂಗೋವನ್, ವಿಶೇಷಚೇತನರು ಇತರರಂತೆ ಬದುಕಬೇಕು. ಈ ನಿಟ್ಟಿನಲ್ಲಿ ನಾವು ನಿಮ್ಮೊಂದಿಗಿದ್ದೇವೆ ಎನ್ನುವ ಸಂದೇಶವನ್ನು ಈ ಉದ್ಯೋಗ ಮೇಳ ನೀಡುತ್ತಿದೆ. ವಿಶೇಷಚೇತನರ ಆರೋಗ್ಯ ಜೀವನದ ಬಗ್ಗೆ ಕಾಳಜಿ ವಹಿಸುವ ಜೊತೆಗೆ ಅವರಿಗೆ ಉದ್ಯೋಗ ನೀಡಿ, ಸ್ವಾವಲಂಬಿ ಬದುಕು ಕಲ್ಪಿಸಿಕೊಡುವತ್ತಲೂ ಆಲೋಚನೆ ಮಾಡಿರುವುದು ಉತ್ತಮ ವಿಚಾರ ಎಂದು ಶ್ಲಾಘಿಸಿದರು. 350ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದು, 105 ಸ್ಥಳದಲ್ಲಿ ಆಯ್ಕೆಯಾಗಿದ್ದು ಮತ್ತೆ ಕೆಲವರು ಎರಡನೇ ಸಂದರ್ಶನಕ್ಕೆ ಆಯ್ಕೆಯಾಗಿರುತ್ತಾರೆ. ಉಪನ್ಯಾಸಕರಾದ ಶಿವಕುಮಾರ ಸ್ವಾಮಿ, ಚೆಸ್ಕಾಂ ವೃತ್ತ ನಿರೀಕ್ಷಕ ಶಿವಮಾದಯ್ಯ, ಸಮರ್ಥನಂ ಸಂಸ್ಥೆಯ ವೀರಭದ್ರ ಪಾಟೀಲ್, ಮುರುಗಮ್ಮ, ರಘು, ವಿಜಯ್ ಸೇರಿದಂತೆ ಮತ್ತಿತರು ಭಾಗವಹಿಸಿದ್ದರು.

ಕಾಂಗ್ರೆಸ್ ಬಂದ ಮೇಲೆ ಅಗತ್ಯ ವಸ್ತುಗಳ ಬೆಲೆ ಏರಿಕೆ

● ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ
● ಪಿಎಸ್‌ಐ ಹಗರಣ ಮರು ತನಿಖೆ ದ್ವೇಷ ರಾಜಕಾರಣಕ್ಕೆ ಸಾಕ್ಷಿ



ಬೆಂಗಳೂರು, ಜು. 22(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಬಂದ ಮೇಲೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನರ ಜೀವನ ದುಸ್ತರ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಬಂದ ತಕ್ಷಣ ವಿದ್ಯುತ್ ದರ ಹೆಚ್ಚಳ ಮಾಡಿದರು. ಎಲ್ಲ ಕಾಯಿಪಲ್ಯೆ ದರ ಹೆಚ್ಚಳ ಆಗಿದೆ. ಈಗ ಹಾಲಿನ ದರ ಹೆಚ್ಚಳ ಮಾಡಿದ್ದಾರೆ. ಆಗಸ್ಟ್ ಒಂದರ ನಂತರ ಸೈಟ್, ಕಾರು, ಹೊಸ ಮನೆ ಖರೀದಿ ದರವೂ ಹೆಚ್ಚಳವಾಗಲಿದೆ ಎಂದು ಹೇಳಿದರು.

ಪಿಎಸ್‌ಐ ಹಗರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿದ್ದು, ದ್ವೇಷದ ರಾಜಕಾರಣ ಎಲ್ಲಿಗೆ ಹೋಗುತ್ತಿದೆ ಅನ್ನುವುದು ಗೊತ್ತಾಗುತ್ತಿಲ್ಲ. ಪಿಎಸ್‌ಐ ಹಗರಣ ನಾವೇ ಹೊರಗೆ ತಂದು ಸಿಐಡಿ ತನಿಖೆಗೆ ಆದೇಶ ಮಾಡಿದ್ದೆವು. ಪ್ರಕರಣದಲ್ಲಿ ಎಡಿಜಿಪಿ ಹುದ್ದೆಯ ಅಧಿಕಾರಿಯನ್ನು ಜೈಲಿಗೆ ಕಳುಹಿಸಿದ್ದೇವೆ. ಈ ಹಗರಣದಲ್ಲಿ ಕಾಂಗ್ರೆಸ್ ನವರು ಇದ್ದಾರೆ. ಪ್ರಕರಣದ ತನಿಖೆ ನಡೆದು ಕೋರ್ಟ್‌ನಲ್ಲಿದೆ.

ಈ ಸಂದರ್ಭ ಮತ್ತೆ ತನಿಖೆಗೆ ಆದೇಶ ಮಾಡಿರುವುದು ದ್ವೇಷ ರಾಜಕೀಯವನ್ನು ತೋರಿಸುತ್ತದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿಯವರು ಗೋಡ್ಸೆ ಪ್ರತಿಮೆ ಮುಂದೆ ಪ್ರತಿಭಟನೆ ಮಾಡಲಿ ಅಂತ ಹೇಳಿದ್ದಾರೆ. ನಕಲಿ ಗಾಂಧಿಗಳ ಜಪ ಮಾಡುತ್ತಿರುವವರು ಕಾಂಗ್ರೆಸ್‌ನವರು. ಗಾಂಧೀಜಿಯನ್ನು ಹೆಚ್ಚು ದುರುಪಯೋಗ ಮಾಡಿ ಕೊಂಡವರು ಕಾಂಗ್ರೆಸ್‌ನವರು. ಗಾಂಧೀಜಿ ಸ್ವಾತಂತ್ರ್ಯದ ನಂತರ ಕಾಂಗ್ರೆಸ್‌ನ್ನು ವಿಸರ್ಜಿಸಿ ಅಂತ ಹೇಳಿದ್ದರು. ಯಾಕೆಂದರೆ ಕಾಂಗ್ರೆಸ್ ನವರಿಗೆ ದೇಶ ಆಳಲು ಬರುವುದಿಲ್ಲ ಅಂತ. ಆದರೆ, ಇವರು ಗಾಂಧೀಜಿ ಹೆಸರು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಶಾರದಾವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ವೇದಿಕೆ ಉದ್ಘಾಟನೆ



ಮೈಸೂರು, ಜು. 22– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ವೇದಿಕೆ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜರುಗಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ. ದೇವರಾಜು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸತತವಾದ ಪರಿಶ್ರಮ ಯಶಸ್ಸಿಗೆ ಕಾರಣ. ನಿರಂತರವಾದ ಅಭ್ಯಾಸವಿದ್ದಲ್ಲಿ ಗುರಿಮುಟ್ಟಲು ಸಾಧ್ಯ. ಪ್ರಾಮಾಣಿಕತೆಯಿಂದ ಮನಸಾರೆ ಖುಷಿಪಟ್ಟು ಓದಿದಾಗ ಸಾಧನೆ ಮಾಡಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಯಾದವನಿಗೆ ಸಮಯ ಪ್ರಜ್ಞೆ ಬಹಳ ಮುಖ್ಯ, ಭವಿಷ್ಯದ ಬಗ್ಗೆ ತಯಾರಿ ನಡೆಸಬೇಕಾದರೆ ಇಂದಿನ ಶ್ರಮ ಅತ್ಯಗತ್ಯ. ಸಹಪಠ್ಯ ಚಟುವಟಿಕೆಗಳಲ್ಲೂ ಕೂಡ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಹೊರತರಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಮಾತನಾಡಿ, ಪ್ರತಿಭಾನ್ವಿತ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಜಾಸ್ತಿಯಾದಾಗ ನಮಗೆ ತೃಪ್ತಿ ಉಂಟಾಗುತ್ತದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ತಮ್ಮ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಬೇಕೆಂದು ಅಭಿಪ್ರಾಯಿಸಿದರು.

ಕ್ಯಾಪ್ಟನ್ ಶ್ರೀನಿವಾಸ ರಾಘವಾಚಾರ್ ಮಾತನಾಡಿ, ಶಿಸ್ತು ವಿದ್ಯಾರ್ಥಿಗಳಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದು, ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನವನ್ನು ಗಳಿಸಬೇಕೆಂದು ಹಿತವಚನ ನುಡಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ. ಅಶೋಕ್‌ಕುಮಾರ್ ಮಾತನಾಡಿ, ಯೋಜನೆಗಳು ನೂರಾರು ಆದರ್ಶ ವ್ಯಕ್ತಿಯಾಗಬೇಕಾದರೆ ಎನ್.ಸಿ.ಸಿ, ಎನ್.ಎಸ್.ಎಸ್ ನಂತಹ ಸಮುದಾಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉತ್ತಮ ಪ್ರಜೆಯಾಗಲು ಸಾಧ್ಯ ಹಾಗೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಶಿಸ್ತಿನ ಸಿಪಾಯಿಗಳಾಗಬೇಕೆಂದು ತಿಳಿಸಿದರು.

ಉಪನ್ಯಾಸಕರಾದ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಜೀವಶಾಸ್ತ್ರ ವಿಭಾಗದ ಹೆಚ್.ಆರ್.ಪರಮೇಶ್, ವಿದುಷಿ ಕಾವ್ಯಶ್ರೀ, ಇಂಗ್ಲೀಷ್ ವಿಭಾಗದ ಮುಖ್ಯಸ್ಥ ಮನೋಜ್ ಕುಮಾರ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಭಾನುವಾರ 23 ಜುಲೈ 2023

ವಿಧಾನಸಭಾ ಕಲಾಪದಿಂದ ಶಾಸಕರ ಅಮಾನತು ವಿರೋಧಿಸಿ

ಮಡಿಕೇರಿಯಲ್ಲಿ ಬಿಜೆಪಿ ಪ್ರತಿಭಟನೆ



ಮಡಿಕೇರಿ,ಜು.22– ಕರ್ನಾಟಕ ವಿಧಾನ ಸಭಾ ಕಲಾಪದಿಂದ ಹತ್ತು ಬಿಜೆಪಿ ಶಾಸಕರನ್ನು ಅಮಾನತುಗೊಳಿಸಿರುವ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕೊಡಗು ಜಿಲ್ಲಾ ಬಿಜೆಪಿ ಪ್ರತಿಭಟನೆ ನಡೆಸಿತು. ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಸ್ಪೀಕರ್ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಮಾತನಾಡಿ, ಸರ್ಕಾರದ ನಡೆಯನ್ನು ಪ್ರಶ್ನಿಸಿದಕ್ಕೆ ಬಿಜೆಪಿ ಶಾಸಕರನ್ನು ಕಲಾಪದಿಂದ ಅಮಾನತು ಮಾಡಿರುವುದು ಸರಿಯಲ್ಲ. ಇದು ಸ್ಪೀಕರ್ ಸ್ಥಾನಕ್ಕೆ ಶೋಭೆ ತರುವುದಿಲ್ಲ ಎಂದರು. ಬೆಲೆ ಏರಿಕೆ ಮೂಲಕ ಜನರ ಮೇಲೆ ಸರಕಾರ ಬರೆ ಎಳೆದಿದೆ. 200 ಯೂನಿಟ್ ಉಚಿತ ವಿದ್ಯುತ್ ನೀಡುವುದಾಗಿ ಹೇಳಿ ಇದೀಗ ವಿದ್ಯುತ್ ದರ ಏರಿಕೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬೆಂಗಳೂರಿನಲ್ಲಿ ಸೆರೆಸಿಕ್ಕ ಶಂಕಿತ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ. ಸುನೀಲ್ ಸುಬ್ರಮಣಿ, ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಪಂಡ ರವಿ ಕಾಳಪ್ಪ, ನಗರಾಧ್ಯಕ್ಷ ಮನುಮಂಜುನಾಥ್, ಉಪಾಧ್ಯಕ್ಷ ಬಿ.ಕೆ.ಜಗದೀಶ್, ಜಿಲ್ಲಾ ವಕ್ತಾರ ಮಹೇಶ್ ಜೈನಿ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ. ಸತೀಶ್, ರಾಜ್ಯ ರೈತ ಮೋರ್ಚಾದ ಕಾರ್ಯಕಾರಿಣಿ ಸದಸ್ಯೆ ಯಮುನಾ ಚಂಗಪ್ಪ, ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್, ನಗರಸಭಾ ಬಿಜೆಪಿ ಸದಸ್ಯರು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳು ಸಮಾಜ ಸೇವೆಯಲ್ಲಿ ತೊಡಗಿಕೊಳ್ಳಬೇಕು



ನಾಪೋಕ್ಲು, ಜು.22– ಇಂಟರಾಕ್ಟ್ ಕ್ಲಬ್ ದೇಶ ವಿದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲೆಯಲ್ಲೂ ಸಮಾಜ ಸೇವಾ ಕಾರ್ಯಗಳನ್ನು ಹಮ್ಮಿಕೊಂಡು ಬರುತ್ತಿದೆ ಎಂದು ರೋಟೇರಿಯನ್ ಬಿ.ಜಿ. ಅನಂತಶಯನ ತಿಳಿಸಿದ್ದಾರೆ.

ಇಲ್ಲಿನ ಶ್ರೀ ರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2023–24ರ ಸಾಲಿನ ಇಂಟರಾಕ್ಟ್ ಕ್ಲಬ್ ಪದಗ್ರಹಣ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಹಂತ ಹಂತವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿ–ಶಿಕ್ಷಕರ ಸಂಬಂಧ ಅನ್ಯೋನ್ಯವಾಗಿ ಸಮಾಜಕ್ಕೆ ಮಾದರಿಯಾಗಿ ಬೆಳೆಯಬೇಕು ಎಂದರು.

ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಡಾ. ಬೊಪ್ಪಂಡ ಜಾಲಿ ಬೋಪಯ್ಯ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿ ಸಂಘಗಳ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ದೇಶದ ಉತ್ತಮ ಪ್ರಜೆಗಳಾಗಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಶಾಲೆಯ ಪ್ರಾಂಶುಪಾಲರಾದ ಬಿ.ಎಂ. ಶಾರದ ಮಾತನಾಡಿ, ಶಾಲಾ ಹಂತದಲ್ಲಿ ವಿವಿಧ ಸಂಘಗಳು ಚಟುವಟಿಕೆಗಳಿಂದ ಕೂಡಿದ್ದು ದೇಶ ವಿದೇಶಗಳಲ್ಲಿ ಇಂಟರಾಕ್ಟ್ ಕ್ಲಬ್ ನಡೆಸುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು.

ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್‌ನ ಅಧ್ಯಕ್ಷರಾದ ರೋಟೇರಿಯನ್ ಪ್ರಮೋದ್ ಕುಮಾರ್ ರೈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಕೌಶಲ್ಯ, ಜ್ಞಾನ ಮುಂತಾದ ಉತ್ತಮ ಅಂಶಗಳನ್ನು ಬೆಳೆಸಿಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು.

ಇಂಟರಾಕ್ಟ್ ಕ್ಲಬ್ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಜಿಲ್ಲಾ ಸಂಯೋಜಕರಾದ ರೋಟೇರಿಯನ್ ಸೋನಾಜಿತ್ ದೇಣಿಗೆಯನ್ನು ನಾಪೋಕ್ಲು ಇಂಟರಾಕ್ಟ್ ಕ್ಲಬ್‌ಗೆ ನೀಡಿದರು. ರೋಟೇರಿಯನ್ ರತ್ನಾಕರ ರೈ ಅವರನ್ನು ಕುಮಾರಿ ದಾಕ್ಷಾಯಿಣಿ ಪಿ.ಎ. ರೋಟೇರಿಯನ್ ಬಿ.ಜಿ. ಅನಂತಶಯನ ಅವರನ್ನು ಕುಮಾರಿ ಸಾನ್ವಿಕ ಕೆ.ಎಸ್. ಇಂಟರಾಕ್ಟ್ ಕ್ಲಬ್‌ನ ಅಧ್ಯಕ್ಷೆ ತಂಗಮ್ಮಳನ್ನು ಕೇತನ್ ಕರುಂಬಯ್ಯ, ಪಿಎಂ ಕಾರ್ಯದರ್ಶಿ ವರ್ಷಿಣಿಯನ್ನು ಸಹನಾ ಪಿ.ಎಸ್, ಖಜಾಂಚಿ ಹರ್ಷ ಕಾರ್ಯಪ್ಪ ಅವರನ್ನು ಯು.ಪಿ ಭೋಜಮ್ಮ ಸಭೆಗೆ ಪರಿಚಯಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷ ಕಲಿಯಂಡ ಹ್ಯಾರಿ ಮಂದಣ್ಣ, ಕಾರ್ಯದರ್ಶಿ ಬಿದ್ದಾಟಂಡ ಮುದ್ದಯ್ಯ, ನಿರ್ದೇಶಕರಾದ ಅಪ್ಪಾರಂಡ ಎಂ.ಅಪ್ಪಯ್ಯ, ಪ್ರೊ.ಕಲ್ಯಾಟಂಡ ಪೂಣಚ್ಚ, ಬಿದ್ದಾಟಂಡ ಎ.ಮುತ್ತಣ್ಣ, ರೋಟೇರಿಯನ್ ಕುಲ್ಲೇಟಿರ ಅಜಿತ್ ನಾಣಯ್ಯ, ರೋಟೇರಿಯನ್ ಧನಂಜಯ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ವರ್ಷ, ದೀಕ್ಷ ಪ್ರಾರ್ಥಿಸಿದರು. ಕಾರ್ಯಕ್ರಮವನ್ನು ವಿದ್ಯಾರ್ಥಿನಿ ಆಶ್ರಿನ್ ಕೆ.ಎ, ನಸೀಮ ಪಿ.ಎ. ನಿರೂಪಿಸಿ, ಸಮ್ರಾಟಿ ಟಿ.ಎ ವಂದಿಸಿದರು.

ಪೋಷಕರು, ಶಿಕ್ಷಕರ ಸಲಹೆಗಳನ್ನು ಪಾಲಿಸಿದರೆ ಮಕ್ಕಳು ದೌರ್ಜನ್ಯದಿಂದ ಪಾರಾಗಬಹುದು



ಕುಶಾಲನಗರ, ಜು.22– ಪೋಷಕರು ಮತ್ತು ಶಿಕ್ಷಕರು ನೀಡುವ ಮಾರ್ಗದರ್ಶನ, ಸಲಹೆ–ಸೂಚನೆಗಳನ್ನು ಪಾಲಿಸುವ ಮೂಲಕ ಮಕ್ಕಳು ಸಾಮಾಜಿಕ ದೌರ್ಜನ್ಯಗಳಿಂದ ಪಾರಾಗಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಬಿ.ಪ್ರಸಾದ್ ಅಭಿಪ್ರಾಯ ಪಟ್ಟಿದ್ದಾರೆ.

ಸಮೀಪದ ಕೂಡಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲಾ ಆವರಣದಲ್ಲಿ ಕೊಡಗು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕಾವೇರಿ ನದಿ ಸ್ವಚ್ಛತಾ ಆಂದೋಲನ ಆಶ್ರಯದಲ್ಲಿ ನಡೆದ ವನಮಹೋತ್ಸವ ಮತ್ತು ಕಾನೂನು ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನೆ, ಶಾಲೆ ಮತ್ತಿತರ ಕಡೆಗಳಲ್ಲಿ ಮಕ್ಕಳ ಮೇಲೆ ಉಂಟಾಗುವ ದೌರ್ಜನ್ಯ ಪ್ರಕರಣಗಳಿಗೆ ಕಡಿವಾಣ ಮತ್ತು ಮಕ್ಕಳ ಸಂರಕ್ಷಣೆ ಬಗ್ಗೆ ಕಠಿಣ ಕಾನೂನುಗಳು ಇವೆ. ಮಕ್ಕಳನ್ನು ಲೈಂಗಿಕ ದೌರ್ಜನ್ಯದಿಂದ ರಕ್ಷಿಸುವ ನಿಟ್ಟಿನಲ್ಲಿ ಮಕ್ಕಳ ವಿಶೇಷ ರಕ್ಷಣಾ ಘಟಕ ಎಲ್ಲೆಡೆ ಕಾರ್ಯಾಚರಣೆ ನಡೆಸುತ್ತಿದೆ ಎಂದು ಅವರು ಮಾಹಿತಿ ಒದಗಿಸಿದರು. ಈ ಸಂಬಂಧ ಕಾನೂನು ಪ್ರಾಧಿಕಾರದ ವತಿಯಿಂದ ಶಾಲೆಗಳಲ್ಲಿ ಮಾಹಿತಿ ನೀಡುವ ಕೆಲಸ ನಡೆಯುತ್ತಿದೆ ಎಂದರು.

ಮಕ್ಕಳ ಮೇಲೆ ನಡೆಯುತ್ತಿರುವ ಶೋಷಣೆ ಬಗ್ಗೆ ದೂರು ಮೇರೆಗೆ ತನಿಖೆ ಕೈಗೊಂಡು ಕಾನೂನು ಕ್ರಮಗಳನ್ನು ಜರಗಿಸಲಾಗುತ್ತಿದೆ. ಪರಿಸರವನ್ನು ರಕ್ಷಿಸಿದಲ್ಲಿ ಅದು ನಮ್ಮನ್ನು ರಕ್ಷಿಸುತ್ತದೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಮಕ್ಕಳ ವಿಶೇಷ ಪೊಲೀಸ್ ರಕ್ಷಣಾ ಘಟಕದ ಪ್ರಮುಖರಾದ ಸುಮತಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಮಕ್ಕಳಿಗೆ ಸುರಕ್ಷಿತ ವಾತಾವರಣದ ಅಗತ್ಯತೆ ಇದೆ ಎಂದರು.

ಶಾಲೆಯ ಪ್ರಾಂಶುಪಾಲ ಪ್ರಕಾಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೂಡು ಮಂಗಳೂರು ಗ್ರಾಪಂ ಅಧ್ಯಕ್ಷೆ ಇಂದಿರಾ ರಮೇಶ್, ಕಾನೂನು ಸೇವಾ ಘಟಕದ ಉಪ ಪ್ರಧಾನ ಅಧೀಕ್ಷಕಿ ಮೈಮುನ, ಕುಶಾಲನಗರ ಗ್ರಾಮಾಂತರ ಠಾಣೆಯ ಉಪನಿರೀಕ್ಷಕಿ ಭಾರತಿ, ಕಾವೇರಿ ನದಿ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್ ಅವರು ಮಾತನಾಡಿದರು. ಬಿ.ಎಸ್.ಜೋಯಪ್ಪ ಇದ್ದರು. ಶಿಕ್ಷಕ ರಾಘವೇಂದ್ರ ಕಾರ್ಯಕ್ರಮ ನಿರೂಪಣೆ ಮತ್ತು ಶಿಕ್ಷಕ ಮಂಜುನಾಥ್ ವಂದಿಸಿದರು.

ಸಭಾ ಕಾರ್ಯಕ್ರಮಕ್ಕೆ ಮುನ್ನ ಶಾಲೆಯ ಆವರಣದಲ್ಲಿ ತೆಂಗಿನ ಗಿಡ ಮತ್ತು ಸಸಿಗಳನ್ನು ನೆಡಲಾಯಿತು.

ಜು.30, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಸರ್ವ ಸದಸ್ಯರ ಮಹಾಸಭೆ



ಮಡಿಕೇರಿ,ಜು.22– ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಘಟಕದ ಸರ್ವ ಸದಸ್ಯರ 2ನೇ ಮಹಾಸಭೆ ಜು.30 ರಂದು ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕೊಟ್ಟುಕತ್ತೀರ ಪಿ.ಸೋಮಣ್ಣ ತಿಳಿಸಿದ್ದಾರೆ.

ಅಂದು ಬೆಳಗ್ಗೆ 10.30 ಗಂಟೆಗೆ ವಿರಾಜಪೇಟೆ ಕಾವೇರಿ ಕಲ್ಯಾಣ ಮಂಟಪದ ಆವರಣದಲ್ಲಿ ಸಭೆ ನಡೆಯಲಿದ್ದು, ಸರ್ವ ಸದಸ್ಯರು ಕುಟುಂಬ ಸಹಿತರಾಗಿ ಹಾಜರಾಗಿ ಸಲಹೆ, ಸೂಚನೆ ನೀಡುವಂತೆ ಮನವಿ ಮಾಡಿದರು.

ಸಭೆಗೆ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಅವರನ್ನು ಆಹ್ವಾನಿಸಲಾಗಿದೆ. ಸದಸ್ಯರು ಸ್ಟಾಂಪ್ ಅಳತೆಯ ಭಾವಚಿತ್ರವನ್ನು ತಂದು ತಮ್ಮ ತಮ್ಮ ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದಾಗಿದೆ. ಸಂಘದ ಸದಸ್ಯತ್ವ ಬಯಸುವ ಮಾಜಿ ಸೈನಿಕರು ಸಭೆಗೆ ಹಾಜರಾಗಿ ಸದಸ್ಯತ್ವ ಪಡೆದುಕೊಳ್ಳಬಹುದು ಎಂದರು.

ಹತ್ತನೇ ತರಗತಿ ಪರೀಕ್ಷೆಯಲ್ಲಿ ಸ್ಟೇಟ್ ಸಿಲಬಸ್‌ನಲ್ಲಿ ಶೇ.95 ಮೇಲ್ಪಟ್ಟು ಅಂಕ ಪಡೆದ, ಸಿಬಿಎಸ್‌ನಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ಅಲ್ಲದೆ ಕ್ರೀಡೆ, ಕಲೆ, ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಾಜಿ ಸೈನಿಕರ ಮಕ್ಕಳನ್ನು ಸಭೆಯಲ್ಲಿ ಸನ್ಮಾನಿಸಿ ಗೌರವಿಸಲಾಗುವುದು. ಇದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಜು.27ರ ಒಳಗೆ ಅಂಕಪಟ್ಟಿಯ ಪ್ರತಿಯೊಂದಿಗೆ ಸಂಘದ ಕಚೇರಿಯಲ್ಲಿ ಸಲ್ಲಿಸುವಂತೆ ಸೋಮಣ್ಣ ಮನವಿ ಮಾಡಿದರು.

ಹೆಚ್ಚಿನ ಮಾಹಿತಿಗೆ 9123980041 ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಅಡ್ಡಾದಿಡ್ಡಿ ಚಲಿಸಿದ ಟ್ರ್ಯಾಕ್ಟರ್ 10ಕ್ಕೂ ಹೆಚ್ಚು ವಾಹನ ಜಖಂ

ಚಾಲಕನ ಅತಿ ವೇಗ, ಅಜಾಗರೂಕತೆ ಚಾಲನೆಯಿಂದ ಅವಾಂತರ



ಮಡಿಕೇರಿ,ಜು.22– ಇಳಿಜಾರು ರಸ್ತೆಯಲ್ಲಿ ಟ್ರ್ಯಾಕ್ಟರ್ ಚಾಲಕನೋರ್ವನ ಅತಿ ವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ 10ಕ್ಕೂ ಹೆಚ್ಚು ವಾಹನಗಳಿಗೆ ಡಿಕ್ಕಿ ಹೊಡೆದ ಘಟನೆ ನಗರದ ಹೃದಯ ಭಾಗದಲ್ಲಿ ನಡೆದಿದೆ. ಟ್ರ್ಯಾಕ್ಟರ್ ಸಹಿತ ಚಾಲಕನನ್ನು ನಗರ ಪೊಲೀಸರು ವಶಕ್ಕೆ ಪಡೆದು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಸರಣಿ ಅಪಘಾತದ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಘಟನೆ ವಿವರ: ಮರಗೋಡು ಹೊಸ್ಕೇರಿ ಮೂಲದ ಹರ್ಷವರ್ಧನ್ ಎಂಬಾತ ಶನಿವಾರ ಮಧ್ಯಾಹ್ನ ಟ್ರ್ಯಾಕ್ಟರ್ ತೆಗೆದುಕೊಂಡು ನಗರದ ಇಂದಿರಾಗಾಂಧಿ ವೃತ್ತದ ಮೂಲಕ ಏಕ ಮುಖ ರಸ್ತೆ ಸಂಚಾರವಿರುವ ಮಹದೇವಪೇಟೆ ರಸ್ತೆಗೆ ಚಲಿಸಲು ಮುಂದಾಗಿದ್ದಾನೆ. ಈ ವೇಳೆ ಅಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆಯೊಬ್ಬರು ಟ್ರ್ಯಾಕ್ಟರ್ ಅನ್ನು ತಡೆದು ಹಿಲ್ ರಸ್ತೆ ಮೂಲಕ ಹೋಗುವಂತೆ ಸೂಚಿಸಿದ್ದಾರೆ. ಹಿಲ್ ರಸ್ತೆ ಮೂಲಕ ಮಾರುಕಟ್ಟೆ ಮಾರ್ಗವಾಗಿ ಮಹದೇವಪೇಟೆ ಕಡೆಗೆ ಟ್ರ್ಯಾಕ್ಟರ್ ಚಲಾಯಿಸಿದ ಚಾಲಕ ಹರ್ಷವರ್ಧನ್ ಇಳಿಜಾರು ರಸ್ತೆಯಲ್ಲಿ ಅತಿ ವೇಗವಾಗಿ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದಿದ್ದಾನೆ.

ಈ ವೇಳೆ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದ ಆಟೋ ರಿಕ್ಷಾ, ಕಾರುಗಳು, ಬೈಕ್‌ಗಳು ಸೇರಿದಂತೆ 10ಕ್ಕೂ ಹೆಚು ವಾಹನಗಳಿಗೆ ಸರಣಿಯಾಗಿ ಡಿಕ್ಕಿ ಹೊಡೆದಿದ್ದಾನೆ. ಬಳಿಕ ಟಿಪ್ಪರ್ ಲಾರಿಯೊಂದರ ಹಿಂಬದಿಗೆ ಡಿಕ್ಕಿ ಹೊಡೆದು ಟ್ರ್ಯಾಕ್ಟರ್ ನಿಂತಿದೆ. ಧಾರಾಕಾರ ಮಳೆಯಿದ್ದ ಕಾರಣ ರಸ್ತೆಯಲ್ಲಿ ಜನ ಸಂಚಾರ ಇರಲಿಲ್ಲ. ಹೀಗಾಗಿ ಭಾರೀ ದುರಂತವೊಂದು ತಪ್ಪಿದಂತಾಗಿದೆ. ಟ್ರ್ಯಾಕ್ಟರ್ ಚಾಲಕನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಸರಣಿ ಅಪಘಾತದ ಕುರಿತು ಮಡಿಕೇರಿ ಸಂಚಾರಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಟ್ರ್ಯಾಕ್ಟರ್ ಮತ್ತು ಅದರ ಚಾಲಕ ಹರ್ಷವರ್ಧನ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅಪಘಾತದ ತೀವ್ರತೆಗೆ ಬಹುತೇಕ ವಾಹನಗಳು ಜಖಂಗೊಂಡಿದ್ದು, ವಾಹನ ಮಾಲೀಕರಿಗೆ ಭಾರೀ ನಷ್ಟ ಉಂಟಾಗಿದೆ.

ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಜು.22– ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ನಗರದಲ್ಲಿ ವಿಮೆನ್ ಇಂಡಿಯಾ ಮೂವ್‌ಮೆಂಟ್(ವಿಮ್)ನಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ನಗರದ ಲಾರಿ ನಿಲ್ದಾಣದಲ್ಲಿ ಸಮಾವೇಶಗೊಂಡ ಸಂಘಟನೆ ಪದಾಧಿಕಾರಿಗಳು ಘಟನೆ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆ ಜಿಲ್ಲಾಧ್ಯಕ್ಷೆ ರೇಷ್ಮಾಭಾನು ಮಾತನಾಡಿ, ಮಣಿಪುರದಲ್ಲಿ ಗಲಭೆ ನಡೆಯುತ್ತಿದ್ದು, ನೂರಾರು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಸಾವಿರಾರು ಕುಟುಂಬಗಳು ಪ್ರಾಣಭಿಕ್ಷೆಗಾಗಿ ಮೊರೆ ಇಡುತ್ತಿದ್ದಾರೆ. ಅದರಲ್ಲೂ ಮಹಿಳೆಯರು ಹೆಚ್ಚು ದೌರ್ಜನ್ಯಕ್ಕೆ ಒಳಪಡುತ್ತಿದ್ದಾರೆ ಎಂದು ದೂರಿದರು.

ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿ, ಲೈಂಗಿಕ ಕಿರುಕುಳ ನೀಡಿರುವ ಘಟನೆ ಅತ್ಯಂತ ಘೋರವಾದದು. ಸಂತ್ರಸ್ತೆಯೊಬ್ಬಳು ಕಾರ್ಗಿಲ್ ಯೋಧನ ಪತ್ನಿಯಾಗಿದ್ದು, ಪ್ರಕರಣದ ಗಂಭೀರತೆಯನ್ನು ಇನ್ನಷ್ಟು ಹೆಚ್ಚಿಸಿದೆ ಎಂದರು.

ಸುಪ್ರೀಂಕೋರ್ಟ್ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ಅಲ್ಲಿನ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು. ಇಡೀ ಮಣಿಪುರದ ಹತ್ಯಾಕಾಂಡವನ್ನು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷೆ ವಹೀದಾ ಖಾನಂ, ಪ್ರಧಾನ ಕಾರ್ಯದರ್ಶಿ ರುಮಾನಾ ತಾಜ್, ಖಜಾಂಚಿ ಶಬಾನಾ ಬೇಗಂ, ಕಾರ್ಯದರ್ಶಿ ಪೌಜೀಯಾ ಬಾನು, ತೌಸಿಯಾ ಇಸ್ರಾರ್, ಆಯಿಷ್ ಹುದಾ, ಶೃತಿ, ಪ್ರಕಾಶ್ ಇತರರಿದ್ದರು.

ಶಾಸಕರ ಅಮಾನತು ಖಂಡಿಸಿ ಬಿಜೆಪಿ ಆಕ್ರೋಶ



ಹತ್ತು ಮಂದಿ ಶಾಸಕರನ್ನು ಅಮಾನತುಗೊಳಿಸಿರುವುದನ್ನು ಖಂಡಿಸಿ ಚಾಮರಾಜನಗರದಲ್ಲಿ ಬಿಜೆಪಿ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾಜಿ ಶಾಸಕರಾದ ಎನ್.ಮಹೇಶ್, ನಿರಂಜನ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಾಮರಾಜನಗರ, ಜು.22– ವಿಧಾನ ಸಭೆಯಲ್ಲಿ 10 ಮಂದಿ ಶಾಸಕರ ಅಮಾನತು ಹಾಗೂ ವಿಪಕ್ಷಗಳ ಒಕ್ಕೂಟದ ಸಭೆಗೆ ಆಗಮಿಸಿದ ರಾಜಕೀಯ ಪಕ್ಷಗಳ ನಾಯಕರ ಸ್ವಾಗತಕ್ಕೆ ಐಎಎಸ್ ಅಧಿಕಾರಿಗಳ ಬಳಕೆ ಮಾಡಿರುವುದನ್ನು ವಿರೋಧಿಸಿ ನಗರದಲ್ಲಿ ಶನಿವಾರ ಜಿಲ್ಲಾ ಬಿಜೆಪಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಅಲ್ಲಿಂದ ಭುವನೇಶ್ವರಿ ವೃತ್ತದವರೆಗೆ ಮೆರವಣಿಗೆ ನಡೆಸಿ, ಕೆಲಕಾಲ ರಸ್ತೆ ತಡೆ ನಡೆಸಿದರು.

ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿ, ವಿಧಾನಸಭೆಯಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಶಾಸಕರನ್ನು ಅಮಾನತು ಗೊಳಿಸಿರುವುದು ಖಂಡನೀಯ. ಆ ಮೂಲಕ ವಿಧಾನ ಸಭೆಯಲ್ಲಿ ಸಂವಿಧಾನ ವಿರೋಧಿ ನೀತಿ ಅನುಸರಿಸಲಾಗಿದೆ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ವಿಪಕ್ಷ ನಾಯಕರಾಗಿದ್ದ ಸಂದರ್ಭ ತೊಡೆತಟ್ಟಿ ಪ್ರತಿಭಟನೆ ನಡೆಸಿದ್ದರು. ಸಂಗಮೇಶ್ ಅವರು ಬಟ್ಟೆ ಬಿಚ್ಚಿ ಪ್ರತಿಭಟನೆ ನಡೆಸಿದ್ದು ಎಷ್ಟು ಸರಿ. ಇಂದು ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರೆ ಅಮಾನತು ಮಾಡಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಕಾಡಾ ಮಾಜಿ ಅಧ್ಯಕ್ಷ ಜಿ. ನಿಜಗುಣರಾಜು, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಆರ್.ಸುಂದರ್, ಮುಖಂಡರಾದ ಡಾ.ಎ.ಆರ್.ಬಾಬು, ಮಹದೇವಸ್ವಾಮಿ, ಪ್ರಕಾಶ್, ವೀರಭದ್ರಸ್ವಾಮಿ, ಕುಶಣ್ಣ, ವನಜಾಕ್ಷಿ, ಜಯಶೀಲ, ದಾಕ್ಷಾಯಿಣಿ, ಶಿವಕುಮಾರ್, ಆನಂದ್, ಭಗೀರಥ, ಶಿವು ವಿರಾಟ್, ಕೀಲಗೆರೆ ಬಸವರಾಜು, ಸೂರ್ಯಕುಮಾರ್, ನಟರಾಜು, ನೂರೊಂದುಶೆಟ್ಟಿ, ಪರಶಿವ, ಮಂಜುನಾಥ್, ಪ್ರಸಾದ್ ಸೇರಿದಂತೆ ಇತರರಿದ್ದರು.

3ನೇ ಬಾರಿಯೂ ನರೇಂದ್ರ ಮೋದಿ ಪ್ರಧಾನಿಯಾಗಲಿ: ಕೋಟೆ ಎಂ.ಶಿವಣ್ಣ



ಚಾಮರಾಜನಗರ, ಜು.22– ಮೂರನೇ ಬಾರಿಯೂ ಮೋದಿಯವರು ದೇಶದ ಪ್ರಧಾನಿಯಾಗುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸೋಣ ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಪಕ್ಷದ ಎಸ್‌ಸಿ ಮೋರ್ಚಾ ಸಭೆಯಲ್ಲಿ ಮಾತನಾಡಿದ ಅವರು, ಮೋದಿಯವರು ಜಾರಿಗೆ ತಂದಿರುವ ಜನಪರ ಯೋಜನೆಗಳನ್ನು ಮನೆ ಮನೆಗೂ ತಲುಪಿಸುವ ಮೂಲಕ 2024ರ ಲೋಕಸಭಾ ಚುನಾವಣೆಯಲ್ಲಿ ಬಹುಮತದೊಂದಿಗೆ ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗಲು ನಾವೆಲ್ಲರೂ ಶ್ರಮಿಸೋಣ ಎಂದರು.

ಮಾಜಿ ಶಾಸಕ ಎನ್.ಮಹೇಶ್ ಮಾತನಾಡಿ, ಬಿಜೆಪಿ ಸರ್ಕಾರದ ಜನಪರ ಯೋಜನೆಗಳು ಹಾಗೂ ಕಾಂಗ್ರೆಸ್ ಸರ್ಕಾರ ಜನವಿರೋಧಿ ನೀತಿಗಳನ್ನು ಪ್ರತಿ ಮನೆಮನೆಗೂ ತಿಳಿಸುವ ಮೂಲಕ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರ ಹಿಡಿಯಲು ಶ್ರಮಿಸುವಂತೆ ಸಲಹೆ ನೀಡಿದರು.

ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಮೂಡ್ನಾಕೂಡು ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಮಾಜಿ ಜಿಪಂ ಅಧ್ಯಕ್ಷ ಎಸ್.ಮಹದೇವಯ್ಯ, ನಗರ ಘಟಕ ಅಧ್ಯಕ್ಷ ರಾಜು, ಮುಖಂಡ ವೆಂಕಟರಮಣಸ್ವಾಮಿ (ಪಾಪು), ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಕಾರ್ಯದರ್ಶಿ ಪದ್ಮಾ, ಅರಕಲವಾಡಿ ನಾಗೇಂದ್ರ, ರಾಜ್ಯ ಕಾರ್ಯದರ್ಶಿ ಪರಮಾನಂದ್, ಎಸ್‌ಸಿ ಮೋರ್ಚಾ ಗ್ರಾಮಾಂತರ ಮಂಡಲ ಅಧ್ಯಕ್ಷ ಮುತ್ತಿಗೆ ಮೂರ್ತಿ, ನಗರಸಭಾ ಸದಸ್ಯೆ ಕುಮುದ ಕೇಶವಮೂರ್ತಿ, ಮಾಜಿ ಸದಸ್ಯ ಬಸವರಾಜು, ಬಸವನಪುರ ರಾಜಶೇಖರ್, ಕೊತ್ತನೂರು ರಾಜಶೇಖರ್, ವೇಣುಗೋಪಾಲ್, ಮಹೇಶ್ ಇತರರಿದ್ದರು.

ವಸತಿ ಶಾಲೆಗೆ ಶಾಸಕರ ಭೇಟಿ, ಪರಿಶೀಲನೆ

ಮೂಲ ಸೌಕರ್ಯ ಕಲ್ಪಿಸುವಂತೆ ಸೂಚನೆ



ಬೇಗೂರು, ಜು.22– ಇಲ್ಲಿಗೆ ಸಮೀಪದ ಯಡವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಕ್ಕಳು ವಸತಿ ಶಾಲೆಗೆ ಶೌಚಾಲಯ ಅವ್ಯವಸ್ಥೆ, ಸಮಯಕ್ಕೆ ಸರಿಯಾಗಿ ಊಟ, ತಿಂಡಿ ನೀಡದಿರುವುದು, ಸ್ನಾನಕ್ಕೆ ಬಿಸಿನೀರು ಇಲ್ಲದಿರುವುದು, ಸೋಲಾರ್ ಕೆಟ್ಟು ಹೋಗಿರುವುದು ಸೇರಿದಂತೆ ಮೂಲಸೌಕರ್ಯ ಕಲ್ಪಿಸುವಂತೆ ಮನವಿ ಶಾಸಕರಿಗೆ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಪ್ರಭಾರ ಪ್ರಾಂಶುಪಾಲ ಕುಮಾರಸ್ವಾಮಿ ಅವರಿಗೆ ವಸತಿ ಶಾಲೆಗೆ ಸಿಸಿ ಕ್ಯಾಮರಾ, ಶೌಚಾಲಯ ಸೇರಿದಂತೆ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಸ್ಥಳೀಯ ಜನಪ್ರತಿನಿಧಿಗಳು ಆಗಾಗ್ಗೆ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ವಹಿಸಬೇಕು. ಇನ್ನು 10 ದಿನದೊಳಗೆ ಈ ಎಲ್ಲಾ ಸಮಸ್ಯೆಗಳು ಬಗೆಹರಿದಿರಬೇಕು. ನಾನು ಮತ್ತೆ ಶಾಲೆಗೆ ಯಾವಾಗ ಭೇಟಿ ನೀಡುತ್ತೇನೆ ಎಂದು ಗೊತ್ತಿಲ್ಲ. ಆ ವೇಳೆಗಾಗಲೇ ಮಕ್ಕಳಿಗೆ ಮೂಲ ಸೌಕರ್ಯ ಕಲ್ಪಿಸಿರಬೇಕು. ಇಲ್ಲವಾದರೇ ನಿಮ್ಮೆಲ್ಲರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ಮುನಿರಾಜು, ಗ್ರಾಪಂ ಸದಸ್ಯ ಕೃಷ್ಣ, ಹೊರೆಯಾಲ ನೀಲಕಂಠಪ್ಪ, ಎಪಿಎಂಸಿ ಸದಸ್ಯ ರಂಗೂಪುರ ನಾಗರಾಜು, ಯಡವನಹಳ್ಳಿ ಸಿದ್ದನಾಯಕ, ಮಹೇಶ್, ಚಿಕ್ಕಾಟಿ ಬಂಗಾರನಾಯ್ಕ, ಶಿವರಾಜು, ಶ್ರೀಕಂಠಪುರ ನಾಗರಾಜು, ಕೋಟೆಕೆರೆ ಶಿವನಾಯ್ಕ ಮತ್ತಿತರರಿದ್ದರು.

ಜೂ.25ಕ್ಕೆ, ಪಿ.ಆರ್.ತಿಪ್ಪೇಸ್ವಾಮಿ ಜನ್ಮ ಶತಮಾನೋತ್ಸವ

ಚಾಮರಾಜನಗರ, ಜು.22– ಕಲಾವಿದ, ಜಾನಪದ ತಜ್ಞ ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮ ಶತಮಾನೋತ್ಸವ ಸಮಾರಂಭ ಜು.25ರಂದು ನಡೆಯಲಿದೆ ಎಂದು ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ್ ಕದಂಬ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶಾಂತಲ ಕಲಾವಿದರ ಸಂಸ್ಥೆ ಆಶ್ರಯದಲ್ಲಿ ಸಮಾರಂಭ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಒಳಾವರಣದಲ್ಲಿ ಪಿಆರ್‌ಟಿ ಚಿತ್ರಕಲಾ ಪ್ರದರ್ಶನ ಆಯೋಜಿಸಲಾಗಿದ್ದು, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪನಾಗ್ ಉದ್ಘಾಟಿಸಲಿದ್ದಾರೆ. ಸಂಜೆ 4 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ವಿಚಾರ ಸಂಕಿರಣ, ಜಾನಪದ ಹಾಡು, ನೃತ್ಯ ಹಾಗೂ ಪಿಆರ್‌ಟಿ ಜನ್ಮದಿನ ಶತಮಾನೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದರು.

ಪಿ.ಆರ್.ತಿಪ್ಪೇಸ್ವಾಮಿ ನಾಡು ಕಂಡ ಅದ್ಭುತ ಚಿತ್ರ ಕಲಾವಿದ, ಜಾನಪದ ತಜ್ಞ, ಸಾಹಿತಿ, ಜಲವರ್ಣದಲ್ಲಿ ತಾವು ರಚಿಸಿದ ಕೋಟೆ ಕೊತ್ತಲಗಳು, ನಿಸರ್ಗ ಚಿತ್ರಗಳಿಂದ ಜನಪ್ರಿಯತೆ ಗಳಿಸಿದ್ದರು. ಜಾನಪದ ಕ್ಷೇತ್ರದಲ್ಲೂ ಹೆಸರು ಗಳಿಸಿದ್ದರು. ಮೈಸೂರು ವಿವಿ, ವಸ್ತು ಸಂಗ್ರಹಾಲಯ, ಧರ್ಮಸ್ಥಳದ ಮಂಜೂಷ ಕಟ್ಟಿದವರು. ಅವರ ಜನ್ಮ ಶತಮಾನೋತ್ಸವವನ್ನು ರಾಜ್ಯದೆಲ್ಲೆಡೆ ಆಚರಿಸಲಾಗುತ್ತಿದ್ದು, ಅದರಂತೆ ಜಿಲ್ಲೆಯಲ್ಲೂ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ನಿರ್ದೇಶಕರಾದ ಮಾನಸ, ಗೌರವ ಸಲಹೆಗಾರರ ಚಂದ್ರಶೇಖರಯ್ಯ, ಶಾಂತಲಾ ಕಲಾವಿದರ ಸಂಸ್ಥೆಯ ಕೆ. ವೆಂಕಟರಾಜು, ಅಬ್ರಹಾಂ ಡಿಸಿಲ್ವಾ, ಜಾನಪದ ಅಕಾಡೆಮಿ ಮಾಜಿ ಸದಸ್ಯ ಸಿ.ಎಂ. ನರಸಿಂಹಮೂರ್ತಿ ಇದ್ದರು.



ಚಾಮರಾಜನಗರದ ಪತ್ರಕರ್ತರ ಭವನದಲ್ಲಿ ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ್ ಕದಂಬ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ನಾಳೆ ಕೆಡಿಪಿ ಸಭೆ

ಚಾಮರಾಜನಗರ, ಜು.22– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಜು.24 ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ನೂತನ ಕೆಡಿಪಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಎಸ್. ಪೂವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ನೇರ ಸಂದರ್ಶನ

ಚಾಮರಾಜನಗರ, ಜು.22– ತಾಲೂಕಿನ ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದ ಆದಿತ್ಯ ಬಿರ್ಲಾ (ಗ್ರಾಸಿಮ್) ಪ್ರೈ.ಲಿ ವತಿಯಿಂದ ಜು.24ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ.

ಅಭ್ಯರ್ಥಿಗಳು ಡಿಪ್ಲೋಮಾ ಇನ್ ಮೆಕ್ಯಾನಿಕಲ್, ಕೆಮಿಕಲ್, ಪೆಟ್ರೋಕೆಮಿಕಲ್ ವಿದ್ಯಾರ್ಹತೆ ಹೊಂದಿದ್ದು, 2 ರಿಂದ 4 ವರ್ಷಗಳ ಅನುಭವ ಹೊಂದಿರಬೇಕು. 22 ರಿಂದ 40ರ ವಯೋಮಿತಿಯಲ್ಲಿರಬೇಕು. ಆಸಕ್ತ ಅಭ್ಯರ್ಥಿಗಳು ಸ್ವವಿವರ ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಮಾಹಿತಿಗೆ ಮೊ.8884865299, ದೂ.08226–224430 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಐದು ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಎಲ್.ಎಂ. ಪ್ರಸನ್ನ ಎಂಬುವರ ಮನೆಯ ಗೋಡೆ ಕುಸಿದು ಬಿದ್ದಿದೆ. ಜಂಬೂರು ಗ್ರಾಮದ ಶೋಭಾ ಎಂಬುವ ಮನೆಯ ಪಕ್ಕದಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದ್ದು, ಮನೆ ಗೋಡೆಗೆ ಹಾನಿಯಾಗಿದೆ. ಅಲ್ಲದೇ ಅಂಗನವಾಡಿ ಕೇಂದ್ರವೊಂದಕ್ಕೂ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳಾಗಿದ್ದು, ಪ್ರಸ್ತುತ ಜಲಾಶಯದಲ್ಲಿ 2,854.71 ಅಡಿ ನೀರಿನ ಸಂಗ್ರಹವಿದೆ. 20,730 ಕ್ಯೂಸೆಕ್ ಒಳಹರಿವಿದ್ದು, ನದಿಗೆ 5 ಸಾವಿರ ಕ್ಯೂಸೆಕ್ ನೀರು ಹೊರಬಿಡಲಾಗುತ್ತಿದೆ.

ಕೆಳಗೆ ಇಳಿಸೋದು ಗೊತ್ತು...!

2013ರಲ್ಲಿ ನಾವೆಲ್ಲಾ ಬೆಂಬಲ ಕೊಟ್ವಿ. ಬೆಂಬಲ ಕೊಟ್ಟಿದ್ದರೂ ನಾವು ಯಾವುದೇ ಮಂತ್ರಿ ಅಥವಾ ಮುಖ್ಯಮಂತ್ರಿ ಬಳಿ ಕೈ ಚಾಚಿದವರಲ್ಲ. ಸಿದ್ದರಾಮಯ್ಯನವರ ಬಳಿ ನಾನು ಕೇಳಿದ್ದು ಒಂದೇ ಒಂದು. ಉಡುಪಿ ಜಿಲ್ಲೆ ಕಾರ್ಕಳದಲ್ಲಿ ಕೋಟಿ ಚೆನ್ನಯ್ಯ ಥೀಮ್ ಪಾರ್ಕ್‌ಗೆ 5 ಕೋಟಿ ಅನುದಾನ ನೀಡುವಂತೆ ಕೇಳಿದ್ದೆ. ಕೊಡುತ್ತೇನೆ ಎಂದರು. ಆದರೆ, ಕೊಡಲಿಲ್ಲ. ಅದೇ ರೀತಿ ಮಂಗಳೂರು ವಿವಿಯಲ್ಲಿ ಗುರುಪೀಠ ಸ್ಥಾಪನೆಗೆ ನಾನು ರಾಜ್ಯಸಭಾ ಸದಸ್ಯನಾಗಿದ್ದಾಗ ಸಂಸದರ ನಿಧಿಯಿಂದ 50 ಲಕ್ಷ ರೂ. ಕೊಟ್ಟಿದ್ದೆ. ಕಟ್ಟಡ ಅರ್ಧಕ್ಕೆ ನಿಂತಿದೆ. ಅದಕ್ಕೂ ಕೂಡ ಸಿದ್ದರಾಮಯ್ಯನವರು ಏನೂ ಕೊಟ್ಟಿಲ್ಲ. ಅವರ ಸಮಾಜಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದು ನಮ್ಮ ಸ್ವಾಮೀಜಿಗಳಿಗೇ ಗೊತ್ತಿದೆ ಎಂದ ಅವರು, ಹಿಂದುಳಿದ ವರ್ಗ ಎಂದರೆ ಕೇವಲ ಒಂದು ಜಾತಿಯಲ್ಲ. ಜಾತಿಯೇ ಬೇರೆ, ವರ್ಗವೇ ಬೇರೆ. ವರ್ಗದೊಳಗೆ ನಾವು ಬಂದಾಗ ಸಮಾನವಾಗಿ ಹಕ್ಕುಗಳನ್ನು ಪಡೆಯಬೇಕಾಗುತ್ತದೆ. ಆದರೆ, ಅಂತಹ ಅವಕಾಶ ನಮಗೆ ದೊರೆಯುತ್ತಿಲ್ಲ. ಆರ್.ಎಲ್. ಜಾಲಪ್ಪನವರಿಂದ ಹಲವರು ಸಹಾಯ ಪಡೆದವರು ಅವರ ಮೊಮ್ಮಗನಿಗೆ ಟಿಕೆಟ್ ಕೊಡುವುದರ ಬಗ್ಗೆ ಚರ್ಚಿಸುವಾಗ ಆತ ಜಾಲಪ್ಪನವರ ಮೊಮ್ಮಗನೇ ಅಲ್ಲ ಎನ್ನುವಷ್ಟರ ಮಟ್ಟಿಗೆ ಚರ್ಚಿಸಿದರು ಎಂದು ವಿಷಾದಿಸಿದರು.

ಸಿದ್ದರಾಮಯ್ಯನವರು ನನಗೆ ಏನೂ ಮಾಡುವುದು ಬೇಡ. ಅವರಿಂದ ರಾಜಕೀಯವಾಗಿ ನನಗೆ ಏನೂ ಮಾಡಲೂ ಸಾಧ್ಯವಿಲ್ಲ. ಆದರೆ ನಾನು ಅವರಿಗೆ ಸಹಾಯ ಮಾಡುವುದಿಲ್ಲವೇ? ಎಂದು ಮಾರ್ಮಿಕವಾಗಿ ಹೇಳಿದರು. 11 ಕ್ಷೇತ್ರಗಳಲ್ಲಿ ಈಡಿಗ, ಬಿಲ್ಲವ, ನಾಮಧಾರಿ ಹಾಗೂ ದೀವರ ಸಮುದಾಯಗಳು ಪ್ರಬಲವಾಗಿವೆ. ಈ ಕ್ಷೇತ್ರಗಳಲ್ಲಿ ಚುನಾವಣಾ ಕಣದಲ್ಲಿ ನಾವಿದ್ದೆವು. ಆದರೆ, ಈಗ ನಾನೇ ಚುನಾವಣಾ ಕಮಿಟಿಯಲ್ಲಿದ್ದರೂ ತಮ್ಮ ಸಮುದಾಯದ ನಾಲ್ವರು ಅವಕಾಶ ವಂಚಿತರಾದರು. ಅದರಲ್ಲಿ ಬಿಲ್ಲವರು ಇಬ್ಬರು, ಈಡಿಗ ಮತ್ತು ದೀವರ ಸಮುದಾಯದ ತಲಾ ಒಬ್ಬರು ಅವಕಾಶ ವಂಚಿತರಾದರು. ಮಂಗಳೂರು ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಲ್ಲಿ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದವರಿಗೆ ಅವಕಾಶ ನೀಡಲಾಯಿತು. ಉತ್ತರ ಕರ್ನಾಟಕದ ಕುಮಟಾದಲ್ಲಿ ಕ್ರೈಸ್ತ ಹಾಗೂ ಗಂಗಾವತಿಯಲ್ಲಿ ಮುಸ್ಲಿಂರಿಗೆ ಅವಕಾಶ ನೀಡಿದರು. ಅಲ್ಪ ಸಂಖ್ಯಾತರನ್ನು ಮುಂದಿಟ್ಟುಕೊಂಡು ನಮಗೆ ಟಿಕೆಟ್ ವಂಚಿಸುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ನಾವ್ಯಾರೂ ಅಲ್ಪ ಸಂಖ್ಯಾತರನ್ನು ವಿರೋಧಿಸುವುದು ಬೇಡ. ಅವರೂ ಕೂಡ ನಮಗೆ ಬೇಕಾಗುತ್ತದೆ. ಒಕ್ಕಲಿಗರು, ಲಿಂಗಾಯಿತರು, ಬ್ರಾಹ್ಮಣರು ಮತ್ತು ಕುರುಬರು ಮುಖ್ಯಮಂತ್ರಿ ಸ್ಥಾನಕ್ಕಾಗಿ ಹೋರಾಟ ಮಾಡುತ್ತಾರೆ. ಅವರಿಗೆ ಅಲ್ಪಸಂಖ್ಯಾತರು ಬೇಕಿದ್ದರೆ, ಅವರ ಸೀಟುಗಳನ್ನು ಬಿಟ್ಟುಕೊಡಲಿ. ನಮ್ಮ ಟಿಕೆಟ್‌ಗಳನ್ನು ಯಾಕೆ ಕೇಳಬೇಕು. ನಾವೇನೂ ನಿಮ್ಮ ಜಾಗಗಳಿಗೆ ಬರುವುದಿಲ್ಲ. ನಾವು ಪ್ರಬಲವಾಗಿರುವ ಸ್ಥಾನಗಳನ್ನು ಕೊಡಿ ಎಂದಷ್ಟೇ ಕೇಳುತ್ತಿದ್ದೇವೆ ಎಂದರು.

ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದೆಡೆ ನಾವು ರಾಜಕೀಯವಾಗಿ ಪ್ರಬಲರಾಗಿದ್ದೇವೆ. ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಮ್ಮದು ನಿರ್ಣಾಯಕ ಪಾತ್ರ. ಇಲ್ಲಿ ನಾವು ಯಾರಿಗೆ ಓಟು ಹಾಕಿದರೆ ಅವರು ಗೆಲ್ಲುತ್ತಾರೆ ಎಂದ ಅವರು, ಈ ಭಾಗಗಳಲ್ಲಿ ನಮ್ಮ ಸಮುದಾಯದವರನ್ನು ಶೈಕ್ಷಣಿಕ, ರಾಜಕೀಯ ಹಾಗೂ ಆರ್ಥಿಕವಾಗಿ ಸಮುದಾಯದವರು ಸಹಾಯ ಮಾಡಬೇಕಾಗುತ್ತದೆ ಎಂದರು.

ನಾವೇನೂ ಕಡಿಮೆಯಿಲ್ಲ. ನಮ್ಮ ಸಮುದಾಯದವರು ಲೋಕಸಭೆಯಲ್ಲಿ ನಾಲ್ವರು, ರಾಜ್ಯ ಸಭೆಯಲ್ಲಿ ಇಬ್ಬರು ಇರುತ್ತಿದ್ದೆವು. ಕೇಂದ್ರದ ಮಂತ್ರಿಗಳಾಗಿಯೂ ಇದ್ದೆವು. ಈ ಹಿಂದೆ ಸರ್ಕಾರ ಮಾಡುತ್ತಿದ್ದದ್ದೇ ನಾವು. ಸಾರಾಯಿ ಮಾರಾಟ ಮಾಡಿ ಆ ಹಣದಲ್ಲಿ ಸರ್ಕಾರ ಮಾಡುತ್ತಿದ್ದೆವು. ಇದನ್ನು ಗಮನಿಸಿದ ಯಡಿಯೂರಪ್ಪನವರು, ಸಾರಾಯಿ ನಿಷೇಧ ಮಾಡಿದರು. ಆಗ ನಮ್ಮ ಸಮುದಾಯದ ಕುಟುಂಬಗಳು ಬೀದಿಗೆ ಬಿದ್ದವು. ಹಲವರು ಬೆಂಗಳೂರಿನಲ್ಲಿ ಪಾನಿಪೂರಿ ಮಾರುತ್ತಿದ್ದಾರೆ. ಇದನ್ನು ಯಾರೂ ಕೇಳಲಿಲ್ಲ. ಬೇರೆ ಸಮುದಾಯದ ಕುಲಕಸುಬಿಗೆ ಕೈ ಹಾಕಿದ್ದರೆ ರಕ್ತಪಾತವಾಗುತ್ತಿತ್ತು ಎಂದ ಅವರು, ನಮಗೆ ಗೊತ್ತಾಗದಿರುವಂತೆ ವ್ಯವಸ್ಥಿತವಾಗಿ ನಮ್ಮನ್ನು ಮುಗಿಸುತ್ತಿದ್ದಾರೆ. ಎಚ್ಚರಿಕೆಯಿಂದಿರ ಬೇಕು ಎಂದರು. ಮಂಗಳೂರಿನಲ್ಲಿ 600 ಮಂದಿ ಜೈಲಿಗೆ ಹೋದರು. ಅವರಲ್ಲಿ 400 ಮಂದಿ ಬಿಲ್ಲವರು. ಇವರನ್ನು ಜೈಲಿಗೆ ಕಳುಹಿಸಿದವರು ಯಾರು ಎಂದು ಪ್ರಶ್ನಿಸಿದ ಹರಿಪ್ರಸಾದ್, ಸಮುದಾಯದ ಏಳಿಗಾಗಿ ಹೋರಾಡಿ, ಜೈಲಿಗೆ ಹೋಗಿದ್ದರೆ ಪರವಾಗಿಲ್ಲ. ಯಾರದೋ ತೆವಲಿಗಾಗಿ ನಮ್ಮ ಹುಡುಗರು ಕೊಲೆ ಮಾಡಿ, ಜೈಲಿಗೆ ಹೋಗಿ ಭವಿಷ್ಯ ಕಳೆದುಕೊಳ್ಳಬೇಕೇ? ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದರು.

ಗದ್ದಲದಲ್ಲೇ ಕಾಲ ಕಳೆದರು

ಹೊರಗೆ ಹೋರಾಟ ಮಾಡುವುದರಿಂದ ಪ್ರಯೋಜನವಿಲ್ಲ. ವಿರೋಧಪಕ್ಷದವರು ಚರ್ಚೆಗಳಲ್ಲಿ ಭಾಗವಹಿಸಲಿ ಎಂದು ಮೂರು ವಾರಗಳ ಕಾಲ ಅಧಿವೇಶನವನ್ನು ನಡೆಸಲಾಯಿತು. ಆದರೆ ವಿಧಾನಸಭೆಗೆ ಆಗಮಿಸದೆ ಗದ್ದಲದಲ್ಲೇ ಸಮಯವನ್ನು ವ್ಯರ್ಥಗೊಳಿಸಿದರು.ಅವರು ನಡವಳಿಕೆ ಸರಿಯಿರದಿದ್ದ ಕಾರಣ, ಸಭಾಧ್ಯಕ್ಷರು ಕ್ರಮ ತೆಗೆದುಕೊಂಡಿದ್ದಾರೆ. ಸಭಾಧ್ಯಕ್ಷರ ಕ್ರಮಕ್ಕೂ, ನಮಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ನೈಸ್ ಹಗರಣದ ಬಗ್ಗೆ ಪ್ರಸ್ತಾಪಿಸುವ ಬಗ್ಗೆ ಉತ್ತರಿಸಿ, ಕಾಂಗ್ರೆಸ್ ಸರ್ಕಾರದ ನಂತರ ಮೈತ್ರಿ ಸರ್ಕಾರ ಬಂದ ಸಂದರ್ಭದಲ್ಲಿಯೇ ಕ್ರಮ ತೆಗೆದುಕೊಳ್ಳಬಹುದಿತ್ತು.

ತನಿಖೆ ನಡೆಸಲು ಕಾಂಗ್ರೆಸ್‌ನವರು ಕೈಕಟ್ಟಿದ್ದರು ಎನ್ನುವುದು ಸುಳ್ಳು. ಸಾಲಮನ್ನಾ ಸೇರಿದಂತೆ ಇತರೆ ಕಾರ್ಯಕ್ರಮಗಳಿಗೆ ಕಾಂಗ್ರೆಸ್ ಬೆಂಬಲ ನೀಡಲಿಲ್ಲವೇ, ಕಾಂಗ್ರೆಸ್ ಕೈಕಟ್ಟಿ ಹಾಕಿತ್ತು ಎಂದು ರಾಜೀನಾಮೆ ನೀಡಿದರೆ? ತಮ್ಮ ಸ್ವಯಂಕೃತಾಪರಾಧದಿಂದಲೇ ಅವರು ಸರ್ಕಾರ ಕಳೆದುಕೊಳ್ಳುವಂತಾಯಿತು ಎಂದು ತಿಳಿಸಿದರು.

ಡಿಪ್ಲೊಮಾದಾರರಿಗೆ ಭತ್ಯೆ

ಹಮ್ಮಿಕೊಳ್ಳಲಾಗುತ್ತದೆ. ಮಾರುಕಟ್ಟೆಗೆ ಅಗತ್ಯವಿರುವ ಉದ್ಯೋಗಿಗಳನ್ನು ತಯಾರು ಮಾಡಿದರೆ ನಿರುದ್ಯೋಗ ಸಮಸ್ಯೆ ಬಗೆಹರಿಯಲಿದೆ ಎಂದರು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳ ಸಮಾರಂಭ ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡಿ ಈ ಘೋಷಣೆ ಮಾಡಿದರು. ಮಹಾರಾಷ್ಟ್ರ ಮತ್ತು ತಮಿಳುನಾಡು ಒಂದು ಮತ್ತು 2 ನೇ ಸ್ಥಾನದಲ್ಲಿವೆ. ಕರ್ನಾಟಕ ರಫ್ತಿನಲ್ಲಿ ನಂಬರ್ ಒನ್ ಸ್ಥಾನಕ್ಕೆ ಏರಬೇಕು.

ಕರ್ನಾಟಕ ರಫ್ತು ಮಾಡುವುದರಲ್ಲಿ ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಕೈಗಾರಿಕೆಗಳ ಅಭಿವೃದ್ಧಿಯಾಗಬೇಕೆಂದು ಕೌಶಲ್ಯ ತರಬೇತಿಯಲ್ಲಿ ಕಾರ್ಮಿಕರಿದ್ದರೆ ಕೈಗಾರಿಕಾ ಬೆಳವಣಿಗೆಗೆ ಅನುಕೂಲ ವಾಗುತ್ತದೆ ಎಂಬ ದೃಷ್ಟಿಯಿಂದ ಕೌಶಲ್ಯಾಭಿವೃದ್ಧಿ ಇಲಾಖೆ ಪ್ರಾರಂಭಿಸಲಾಗಿತ್ತು. ಈಗ ಅದಕ್ಕೆ ಶಕ್ತಿ ತುಂಬುವ ಕೆಲಸ ಮಾಡಲಾಗುತ್ತಿದೆ.

ಹೊಸ ಕೈಗಾರಿಕಾ ನೀತಿಯನ್ನು ಸರ್ಕಾರ ಘೋಷಣೆ ಮಾಡಿದಾಗ ಕೈಗಾರಿಕೋದ್ಯಮಿಗಳು ನೀತಿಯನ್ನು ಬೆಂಬಲಿಸಿ ಅದನ್ನು ಸ್ವಾಗತಿಸಿದರು. ಈಗಲೂ ಎಲ್ಲರೊಂದಿಗೆ ಚರ್ಚೆ ಮಾಡಿ ರಫ್ತು ಬೆಳವಣಿಗೆಗೆ ಪೂರಕವಾದಂಥ ಕೈಗಾರಿಕಾ ನೀತಿಯನ್ನು ರೂಪಿಸಲು ಕ್ರಮ ವಹಿಸಲಾಗುವುದು ಎಂದರು. ಕೈಗಾರಿಕಾ ಇಲಾಖೆಯ ನೇತೃತ್ವವನ್ನು ವಹಿಸಿರುವ ಎಂ.ಬಿ.ಪಾಟೀಲ್ ಅವರು ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆ ಆಗಬೇಕು ಎನ್ನುವ ಆಶಯವನ್ನು ಹೊಂದಿದ್ದು, ಸರ್ಕಾರ ಎಲ್ಲ ರೀತಿಯ ಬೆಂಬಲವನ್ನು ಉದ್ಯಮಿಗಳಿಗೆ ನೀಡಲಿದೆ ಎಂದು ಭರವಸೆ ನೀಡಿದರು.

ಕೈಗಾರಿಕೆ ಬೆಳೆದರೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಿ ಹೆಚ್ಚು ಆರ್ಥಿಕತೆ ಬೆಳೆಯಲು ನೆರವಾಗಲಿದೆ. ಜಿಡಿಪಿ ಬೆಳೆದು ರಾಜ್ಯ ಬೆಳೆಯಲು ಸಾಧ್ಯವಾಗಿ ರಾಷ್ಟ್ರದ ಜಿಡಿಪಿಗೆ ದೊಡ್ಡ ಕೊಡುಗೆಯನ್ನು ರಾಜ್ಯದಿಂದ ಕೇಂದ್ರಕ್ಕೆ ಕೊಡಲು ಸಾಧ್ಯವಾಗುತ್ತದೆ. ಇವೆಲ್ಲ ಒಂದಕ್ಕೊಂದು ಸಂಬಂಧ ಹೊಂದಿದೆ. ಕಾನೂನು ಸುವ್ಯವಸ್ಥೆ ಉತ್ತಮವಾಗಿದ್ದರೆ ಹೂಡಿಕೆಗಳು ಬರುತ್ತವೆ. ಹೂಡಿಕೆಗಳು ಬಂದಲ್ಲಿ ಕೈಗಾರಿಕೆಗಳು ಬಂದು ನಿರುದ್ಯೋಗ ನಿವಾರಣೆಯಾಗುತ್ತದೆ. ಕರ್ನಾಟಕದಲ್ಲಿ ಉತ್ತಮ ಕಾನೂನು ಸುವ್ಯವಸ್ಥೆ ಕಲ್ಪಿಸಲಾಗಿದೆ. ಶ್ರೇಷ್ಠ ರಫ್ತು ಮಾಡಿ ರಾಜ್ಯಕ್ಕೆ ಕೀರ್ತಿ ತಂದಿರುವ ರಫ್ತುದಾರರನ್ನು ಅಭಿನಂದಿಸಿದರು. 68 ಉದ್ಯಮಿಗಳಿಗೆ ಶ್ರೇಷ್ಠ ರಫ್ತು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗಿದೆ. ರಫ್ತುವಿನಲ್ಲಿ ಸಾಧನೆ ಮಾಡಿರುವ ಉದ್ಯಮಿಗಳಿಗೆ 1992–93 ರಿಂದ ಶ್ರೇಷ್ಠ ರಫ್ತು ಪ್ರಶಸ್ತಿಗಳನ್ನು ನೀಡುವ ಪರಿಪಾಠ ಪ್ರಾರಂಭಿಸಲಾಗಿದೆ. ರಾಜ್ಯ ಹಾಗೂ ಜಿಲ್ಲಾ ಮಟ್ಟದ ಉದ್ಯಮಿಗಳನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ವಿಜೇತರು ಇತರ ಉದ್ಯಮಿದಾರರಿಗೆ ಮಾದರಿ ಹಾಗೂ ಸ್ಫೂರ್ತಿಯಾಗಿದ್ದಾರೆ. ರಾಜ್ಯದಲ್ಲಿ ಉದ್ಯಮಿಗಳ ಪ್ರಾರಂಭಕ್ಕೆ ಹಾಗೂ ಕೈಗಾರಿಕೆಗಳಿಗೆ ಪ್ರೋತ್ಸಾಹದಾಯಕ ವಾತಾವರಣ ಇದೆ. ಕರ್ನಾಟಕದಲ್ಲಿ ಸುಮಾರು 80ರ ದಶಕದಲ್ಲಿ ಕೈಗಾರಿಕಾ ನೀತಿ ರೂಪಿಸುವತ್ತ ಹೆಜ್ಜೆ ಇಡಲಾಗಿತ್ತು ಎಂದು ತಿಳಿಸಿದರು.

ತಮಿಳುನಾಡಿಗೆ ಕಾವೇರಿ ನೀರು!

ತೀರ್ಪನ್ನು ನಾವು ಗೌರವಿಸಬೇಕು. ನಮ್ಮ ರಾಜ್ಯದಲ್ಲಿ ಸಮರ್ಪಕವಾದ ಮಳೆಯಾಗಿಲ್ಲ, ಆದರೂ ನಾವು ಪ್ರಾಧಿಕಾರದ ತೀರ್ಪನ್ನು ಗೌರವಿಸಬೇಕಿದೆ. ನಮ್ಮಲ್ಲಿರುವ ನೀರನ್ನು ಹರಿಸಲು ಚಿಂತನೆ ನಡೆಸಿದ್ದೇವೆ, ನಾವು ಪ್ರಾಧಿಕಾರದ ತೀರ್ಪನ್ನು ಗೌರವಿಸುತ್ತಿದ್ದೇವೆ ಎಂದು ನೀರು ಬಿಡುವ ಕುರಿತು ಜಲ ಶಕ್ತಿ ಸಚಿವರಿಗೆ ತಮಿಳುನಾಡಿನ ಪತ್ರದ ಬಗ್ಗೆ ಡಿ.ಕೆ ಶಿವಕುಮಾರ್ ಪ್ರತಿಕ್ರಿಯೆ ನೀಡಿದ್ದಾರೆ. ಕುಡಿಯುವ ನೀರನ್ನು ಇಟ್ಟುಕೊಳ್ಳದೇ ನಾವು ತಮಿಳುನಾಡಿಗೆ ನೀರು ಹರಿಸಲು ಸಾಧ್ಯವಿಲ್ಲ. ಕುಡಿಯುವ ನೀರನ್ನು ಗಮನದಲ್ಲಿಟ್ಟುಕೊಂಡು ನೀರು ಬಿಡಲು ಯೋಚಿಸುತ್ತೇವೆ ಎಂದರು.

ನವೆಂಬರ್‌ನಲ್ಲಿ ಜಿಲ್ಲಾ, ತಾಲೂಕು ಸಾಹಿತ್ಯ ಸಮ್ಮೇಳನ?

ಮೈಸೂರು, ಜು.22 (ಜಿಎ)– ಅನೇಕ ಕಾರಣಗಳಿಂದ ನಿಂತಿದ್ದ ಜಿಲ್ಲಾ ಮತ್ತು ತಾಲೂಕು ಸಾಹಿತ್ಯ ಸಮ್ಮೇಳನವನ್ನು ನವೆಂಬರ್ ತಿಂಗಳಿನಲ್ಲಿ ನಡೆಸಲು ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಚಿಂತನೆ ನಡೆಸಿದೆ.

ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಮತ್ತು ಸಾಹಿತ್ಯವನ್ನು ಉಳಿಸಿಕೊಂಡು ಹೋಗುತ್ತಿರುವ ಜಿಲ್ಲೆಗಳ ಪೈಕಿ ಮೈಸೂರು ಜಿಲ್ಲೆಯೂ ಮುಂಚೂಣಿಯಲ್ಲಿದ್ದು, ಸಾಹಿತ್ಯ ಕೃಷಿಯಿಂದ ನಾಡಿಗೆ ಕೊಡುಗೆ ನೀಡಿದವರಲ್ಲಿ ಅನೇಕ ಮಹನೀಯರು ಮೈಸೂರಿನವರೇ ಆಗಿದ್ದಾರೆ. ಇಂತಹ ಸಾಹಿತ್ಯ ಭೂಮಿಯಲ್ಲಿ ಕೋವಿಡ್ ಮತ್ತು ಚುನಾವಣಾ ನೀತಿ ಸಂಹಿತೆ ಹಿನ್ನೆಲೆ ಕಳೆದೆರಡು ವರ್ಷಗಳಿಂದ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸಲು ಸಾಧ್ಯವಾಗಿರಲಿಲ್ಲ. ಆದರೆ, ಕನ್ನಡ ರಾಜ್ಯೋತ್ಸವದ ಮಾಸದಲ್ಲಿ ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನ ನಡೆಸಲು ಚಿಂತನೆಗಳು ನಡೆಯುತ್ತಿವೆ.

ನಾಡಿನ ಸಾಹಿತ್ಯ ಪರಂಪರೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ ವರ್ಷ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ನಡೆಸಿಕೊಂಡು ಬರಲಾಗುತ್ತಿದೆ ಆದರೆ, ಕೋವಿಡ್‌ನಿಂದ ಮತ್ತು ಚುನಾವಣೆ ನೀತಿ ಸಂಹಿತೆ ಕಾರಣದಿಂದ ಸಮ್ಮೇಳನ ಆಯೋಜಿಸಲು ಸಾಧ್ಯವಾಗಿರಲಿಲ್ಲ.


ಸದ್ಯ ಕೊರೊನಾ ಕಾಟವಿಲ್ಲ. ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗಿ ನೂತನ ಸರ್ಕಾರವು ಅಧಿಕಾರಕ್ಕೆ ಬಂದಿದೆ. ಈಗ ಮತ್ತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಲು ಜಿಲ್ಲಾ ಸಾಹಿತ್ಯ ಪರಿಷತ್ ಚಿಂತನೆ ನಡೆಸಿದ್ದು, ಸದ್ಯ ಮಳೆಗಾಲ ಇರುವುದರಿಂದ ನವೆಂಬರ್ ತಿಂಗಳಿನಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ಈ ಸಂಬಂಧ ಮುಖ್ಯಮಂತ್ರಿಗಳ ಬಳಿ ಮೌಖಿಕವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸದ್ಯದಲ್ಲಿಯೇ ಮುಖ್ಯಮಂತ್ರಿಗಳನ್ನು ಎಲ್ಲಾ ಪದಾಧಿಕಾರಿಗಳು ಭೇಟಿ ಮಾಡಿ ಮನವಿ ಸಲ್ಲಿಸಲಿದ್ದಾರೆ. ಸಮ್ಮೇಳನದಲ್ಲಿ ಮತ್ತಷ್ಟು ಬದಲಾವಣೆ ಮತ್ತು ಹೊಸ ರೂಪ ನೀಡಬೇಕೆಂದು ಆಲೋಚನೆ ನಡೆಸಿದ್ದಾರೆ.

2021ರಲ್ಲಿ ನಂಜನಗೂಡು ತಾಲೂಕಿನಲ್ಲಿ ಜರುಗಿದ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಟಿ.ಎಸ್. ರಾಜಪ್ಪ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿತ್ತು. ನಂತರ ಕೋವಿಡ್ ಕಾರಣದಿಂದ ಸಮ್ಮೇಳನ ನಡೆದಿರಲಿಲ್ಲ. ಮಾ.23ಕ್ಕೆ ತಿ.ನರಸೀಪುರದಲ್ಲಿ ಸಮ್ಮೇಳನ ಆಯೋಜಿಸಲು ಸಿದ್ಧತೆ ನಡೆದಿತ್ತು. ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿತ್ತು.

ಒಂದು ತಾಲೂಕಿನಲ್ಲಿ ಸಮ್ಮೇಳನ ಮಾಡಲಾಗಿದೆ. ಉಳಿದ ಕಡೆಯೂ ಮಾಡುವ ಚಿಂತನೆ ಇದೆ. ಆದರೆ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಹಾಗೂ ತಾಲೂಕು ಸಾಹಿತ್ಯ ಸಮ್ಮೇಳನ ಮಾಡಲು ಈಗ ನೀಡುತ್ತಿರುವ ಅನುದಾನ ಸಾಲುತ್ತಿಲ್ಲ. ಮೂರು ದಿನಗಳು ನಡೆಯುವ ಸಮ್ಮೇಳನದಲ್ಲಿ ಊಟ, ವಸತಿ ವ್ಯವಸ್ಥೆ ಯನ್ನು ಮಾಡಲು ಅನುದಾನದ ಕೊರತೆ ಇದ್ದು, ಇದನ್ನು ಹೆಚ್ಚಿಸುವಂತೆ ಈ ಬಗ್ಗೆ ಮುಖ್ಯಮಂತ್ರಿಗಳಿಗೂ ಹಾಗೂ ನೂತನ ಸಚಿವರಿಗೂ ಮೌಖಿಕವಾಗಿ ಮನವಿ ಮಾಡಲಾಗಿದೆ. ಎಲ್ಲಾ ಪದಾಧಿಕಾರಿಗಳು ನೇರವಾಗಿ ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮ ಮನವಿಗೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಜಿಲ್ಲಾ ಸಮ್ಮೇಳನಕ್ಕೆ ಲಕ್ಷಾಂತರ ಮಂದಿ ಆಗಮಿಸುವ ನಿರೀಕ್ಷೆ ಇದೆ. ನಮ್ಮ ಬಹುತೇಕ ಕಾರ್ಯಕ್ರಮಗಳು ಹೊರಾಂಗಣದಲ್ಲಿ ನಡೆಯುತ್ತದೆ. ಆದರೆ, ಈಗ ಮಳೆಗಾಲವಾಗಿರುವುದರಿಂದ ಕಾರ್ಯಕ್ರಮ ಆಯೋಜಿಸುವುದು ಕಷ್ಟಕರ. ಈ ಹಿನ್ನೆಲೆಯಲ್ಲಿ ನವೆಂಬರ್ ತಿಂಗಳಿನಲ್ಲಿ ಜಿಲ್ಲಾಮಟ್ಟದ ಸಮ್ಮೇಳನ ನಡೆಸುವುದು ಸೂಕ್ತ ಎಂದು ಚರ್ಚೆಗಳು ನಡೆಯುತ್ತಿವೆ ಎಂದರು.



2021ರ ನಂಜನಗೂಡು ತಾಲೂಕಿನಲ್ಲಿ ಜರುಗಿದ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಟಿ.ಎಸ್.ರಾಜಪ್ಪ ಅಧ್ಯಕ್ಷರಾಗಿ ಯಶಸ್ವಿಗೊಳಿಸಿದ್ದರು.

ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ

ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಅಳವಡಿಕೆ ಬಗ್ಗೆಯೂ ಮುಖ್ಯಮಂತ್ರಿಗಳ ಜತೆ ಚರ್ಚಿಸಿದ್ದು,



ಅವರು ಅದರ ಬಗ್ಗೆ ಆಸಕ್ತಿ ತೋರಿದ್ದಾರೆ. ಈ ಹಿಂದೆ ತಾಂತ್ರಿಕ ಶಿಕ್ಷಣದಲ್ಲಿ ಕನ್ನಡವನ್ನು ಅಳವಡಿಸಲಾಗಿತ್ತು. ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಗ್ ಕಾಲೇಜಿನಲ್ಲಿ ಸಂಪೂರ್ಣ ಪಠ್ಯದ ವಿಷಯವನ್ನು ಕನ್ನಡಕ್ಕೆ ಅನುವಾದ ಮಾಡಿ ಕನ್ನಡ ಇಂಜಿನಿಯರಿಂಗ್ ಆರಂಭಿಸಿದರು. 13 ವಿದ್ಯಾರ್ಥಿಗಳು ದಾಖಲಾಗಿದ್ದರು. ಆದರೆ ಕಾಲಕ್ರಮೇಣ ಅವರು ಮತ್ತೆ ಇಂಗ್ಲಿಷ್ ಮಾಧ್ಯಮದ ಕಡೆ ಮುಖ ಮಾಡಿದ್ದಾರೆ. ಜಿಲ್ಲೆಯ ಕಾಲೇಜುಗಳಿಗೆ ಭೇಟಿ ನೀಡಿ ಏಕೆ ವಿದ್ಯಾರ್ಥಿಗಳು ಕನ್ನಡದಲ್ಲಿ ಶಿಕ್ಷಣ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ ಎಂದು ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ.

-ಮಡ್ಡಿಕೆರೆ ಗೋಪಾಲ್, ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್

ವಿದ್ಯಾರ್ಥಿಗಳು ಕನ್ನಡ ಭಾಷಾ ಪ್ರೇಮ ಬೆಳೆಸಿಕೊಳ್ಳಬೇಕು



ಮೈಸೂರು, ಜು.22(ಜಿಎ)– ವಿದ್ಯಾರ್ಥಿಗಳು ಕನ್ನಡ ಭಾಷಾ ಪ್ರೇಮ ಬೆಳೆಸಿಕೊಳ್ಳಬೇಕು. ಕನ್ನಡ ಸಾಹಿತ್ಯಕ್ಕೆ ವಿಶೇಷ ಗುಣವಿದ್ದು, ಮನಸ್ಸಿಗೆ ನೆಮ್ಮದಿ ನೀಡುವುದರ ಜೊತೆಗೆ ಸಾಮಾಜಿಕ ಬದುಕಿಗೆ ನೈತಿಕ ಶಕ್ತಿ ಒದಗಿಸುತ್ತದೆ. ಹೀಗಾಗಿ ಸಾಹಿತ್ಯ ಓದುವ ಹವ್ಯಾಸ ರೂಢಿಸಿಕೊಳ್ಳಿ ಎಂದು ಖ್ಯಾತ ವಾಗ್ಮಿ ಹಿರೇಮಗಳೂರು ಕಣ್ಣನ್ ತಿಳಿಸಿದ್ದಾರೆ.

ಮೈಸೂರು ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮಲ್ಲಿನ ಶಕ್ತಿಯನ್ನು ದೀಪ ಹಚ್ಚುವಂತಿರಬೇಕೆ ಹೊರತು, ಬೆಂಕಿ ಹಚ್ಚಬಾರದು. ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ಪ್ರೀತಿಯಿಂದ ಕಾಣಬೇಕು. ತಂದೆ–ತಾಯಿ, ಗುರುಗಳನ್ನು ಗೌರವಿಸಬೇಕು. ಜೀವನ ಉತ್ಸಾಹ ಹೊಂದಿ ಉತ್ತಮ ಸಂಸ್ಕೃತಿ ಸಂಸ್ಕಾರ ಬೆಳೆಸಿಕೊಳ್ಳಬೇಕು. ಶಿಸ್ತು, ಏಕಾಗ್ರತೆ ಮೈಗೂಡಿಸಿಕೊಂಡು ಛಲದಿಂದ ಅಭ್ಯಾಸ ಮಾಡಬೇಕು. ಇದರಿಂದ ಉನ್ನತ ಸ್ಥಾನ ತಲುಪಬಹುದು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಓದಿಗೆ ನೀಡುವಷ್ಟು ಆದ್ಯತೆಯನ್ನು ಸಾಂಸ್ಕೃತಿಕ, ಕ್ರೀಡೆ ಮತ್ತು ಸಾಹಿತ್ಯ ಕ್ಷೇತ್ರಕ್ಕೂ ನೀಡಿದರೆ ಸರ್ವತೋಮುಖ ವ್ಯಕ್ತಿತ್ವ ಅಭಿವೃದ್ಧಿ ಸಾಧ್ಯ. ಸಮಗ್ರ ಬೆಳವಣಿಗೆಗೆ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆ ಅವಶ್ಯಕ. ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಮಾತನಾಡಿ, ಸಾಮಾನ್ಯ ಬಸ್ ಕಂಡಕ್ಟರ್ ಭಾರತೀಯ ಚಿತ್ರರಂಗದ ಸೂಪರ್ ಸ್ಟಾರ್ ಆದ ರಜನೀಕಾಂತ್, ಮಹೇಂದ್ರ ಸಿಂಗ್ ಧೋನಿ, ಧೀರೂಭಾಯಿ ಅಂಬಾನಿ ಸೇರಿದಂತೆ ಅನೇಕ ಮಹನೀಯರು ತಮ್ಮ ಚಟುವಟಿಕೆಗಳಿಂದ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಯನ್ನು ಅಳವಡಿಸಿಕೊಂಡು ನೀವುಗಳು ಜೀವನದಲ್ಲಿ ಸಾಧನೆ ಮಾಡಿ ಎಂದು ತಿಳಿಸಿದರು.

ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 13 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮಹೇಶಪ್ಪ, ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್, ಅಂತಾರಾಷ್ಟ್ರೀಯ ಖೋ–ಖೋ ಕ್ರೀಡಾಪಟು ಎಂ.ವೀಣಾ ಮತ್ತು ಪ್ರಾಂಶುಪಾಲ ಪ್ರೊ.ಎಂ.ಪಿ. ವಿಜಯೇಂದ್ರಕುಮಾರ್ ಉಪಸ್ಥಿತರಿದ್ದರು.

ಮಣಿಪುರ ಅಮಾನವೀಯ ಘಟನೆ ಖಂಡಿಸಿ ಪ್ರತಿಭಟನೆ



ಮೈಸೂರು, ಜು.22(ಸಿಎನ್)–ಮಣಿಪುರದಲ್ಲಿ ಮೂವರು ಮಹಿಳೆಯರನ್ನು ವಿವಸ್ತ್ರಗೊಳಿಸಿ, ಅತ್ಯಾಚಾರ ಎಸಗಿದ ಅಮಾನವೀಯ ಕೃತ್ಯವನ್ನು ಖಂಡಿಸಿ, ವುಮೆನ್ ಇಂಡಿಯಾ ಮೂವ್‌ಮೆಂಟ್ ಮೈಸೂರು ವತಿಯಿಂದ ನಗರದ ಸೇಂಟ್ ಫಿಲೋಮಿನ ಚರ್ಚ್ ಮುಂಭಾಗದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ದೇಶದ ಮಹಿಳೆಯರು ಮತ್ತು ಆದಿವಾಸಿಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಪ್ರಧಾನಿ ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಆದಿವಾಸಿ ಮಹಿಳೆಯರ ಮೇಲಾಗುತ್ತಿರುವ ಶೋಷಣೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಗಂಭೀರವಾಗಿ ಪರಿಗಣಿಸಿ ರಾಷ್ಟ್ರಪತಿ ಆಡಳಿತ ಹೇರಿ ಶಾಂತಿ ನೆಲೆಸುವಂತೆ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಹಾಗೂ ಮಣಿಪುರ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಸಂಘದ ಕಾರ್ಯಕರ್ತೆ ಸಮೀನ ಮಾತನಾಡಿ, ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವು ಎಲ್ಲರೂ ತಲೆತಗ್ಗಿಸುವ ಪೈಶಾಚಿಕ ಕೃತ್ಯವಾಗಿದೆ. ಆದರೂ, ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಳ್ಳಲು ವಿಳಂಬ ಧೋರಣೆ ಅನುಸರಿಸುತ್ತಿವೆ. ಮಣಿಪುರದಲ್ಲಿ ಸಂಘರ್ಷ ಆರಂಭಗೊಂಡು ಮೂರು ತಿಂಗಳಾಗಿದ್ದರೂ ಆಡಳಿತ ವ್ಯವಸ್ಥೆ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಿಂಸಾಚಾರವನ್ನು ನಿಯಂತ್ರಣಕ್ಕೆ ತಂದು ಮಹಿಳೆಯರು ಹಾಗೂ ಮಕ್ಕಳು ನೆಮ್ಮದಿಯಿಂದ ಜೀವನ ಸಾಗಿಸಲು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರವು ಮಹಿಳೆಯರ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಲವು ಸ್ಥಳಗಳಲ್ಲಿ ಬದುಕಲು ಭಯದ ವಾತಾವರಣವಿದೆ. ಮಣಿಪುರದಲ್ಲಿ ಮೊದಲು ಶಾಂತಿ ಮರು ಸ್ಥಾಪಿಸಬೇಕು. ಮಹಿಳೆಯರ ಘನತೆಯನ್ನು ಕೇವಲ ಘೋಷಣೆಗಳಿಂದ ಕಾಪಾಡಲು ಸಾಧ್ಯವಿಲ್ಲ. ಇಡೀ ಸಂಘರ್ಷದ ಪ್ರಕರಣವನ್ನು ತನಿಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು. ಹಲವು ದಿನಗಳಿಂದ ಹಿಂಸಾಚಾರ ನಡೆದರೂ ಪ್ರಧಾನಿಯವರು ಒಂದೇ ಒಂದು ಮಾತನಾಡಿರಲಿಲ್ಲ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದ ಮೇಲೆ 30 ಸೆಕೆಂಡ್ ಮಾತನಾಡಿದ್ದಾರೆ. ಇದು ಅಕ್ಷಮ್ಯ. ಈ ರೀತಿಯ ಧೋರಣೆ ಸರಿಯಲ್ಲ ಎಂದು ಖಂಡಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಆಯಿಷಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜರೀಮ್ ಭಾನು, ಜಿಲ್ಲಾ ಉಪಾಧ್ಯಕ್ಷೆ ಜ್ಯೋತಿ, ಸಾನಿಯಾ, ಸಂಘದ ಕಾರ್ಯಕರ್ತರು ಹಾಗೂ ಮತ್ತಿತರರಿದ್ದರು.

ಎಸ್‌ಸಿ ಪಟ್ಟಿಗೆ ಮಡಿವಾಳ ಸಮುದಾಯ ಸೇರ್ಪಡೆಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಲು ಆಗ್ರಹ



ಮೈಸೂರು,ಜು.22(ಪಿಎಂ)– ರಾಜ್ಯದಲ್ಲಿ ಮಡಿವಾಳ ಸಮುದಾಯ ಅತ್ಯಂತ ಹಿಂದುಳಿದಿದ್ದು, ಪ್ರೊ.ಅನ್ನಪೂರ್ಣಮ್ಮ ವರದಿಯಂತೆ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿ (ಎಸ್‌ಸಿ) ಪಟ್ಟಿಗೆ ಸೇರ್ಪಡೆಗೊಳಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಮೈಸೂರು ಜಿಲ್ಲಾ ಮಡಿವಾಳರ ಮಹಾಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ.ರಾಜು, ಹೋರಾಟದ ಫಲವಾಗಿ ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಮೈಸೂರು ವಿವಿಯ ಪ್ರೊ.ಅನ್ನಪೂರ್ಣಮ್ಮ ಅವರನ್ನು ಮಡಿವಾಳ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನಕ್ಕೆ ನೇಮಕ ಮಾಡಿದ್ದರು. ಅದರಂತೆ ಅವರು ಅಧ್ಯಯನ ನಡೆಸಿ, ಮಡಿವಾಳ ಸಮುದಾಯವನ್ನು ಎಸ್‌ಸಿ ಪಟ್ಟಿಗೆ ಸೇರಿಸಬಹುದು ಎಂದು ಶಿಫಾರಸು ಮಾಡಿ ವರದಿ ನೀಡಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ನಮ್ಮ ಸಮುದಾಯದ ಸ್ಥಿತಿಗತಿ ಬಗ್ಗೆ ಗೊತ್ತಿದ್ದು, ಇವರು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ ಮಾಚಿದೇವರ ಜಯಂತಿ ಆಚರಣೆಗೆ ಕ್ರಮ ವಹಿಸಿದರು. ಚುನಾವಣಾ ಪೂರ್ವದಲ್ಲಿ ಮೈಸೂರು ಮತ್ತು ತುಮಕೂರಿನಲ್ಲಿ ನಡೆದ ಮಡಿವಾಳರ ಮಹಾ ಸಮಾವೇಶದಲ್ಲಿ ಎಸ್‌ಸಿ ಪಟ್ಟಿಗೆ ಸೇರ್ಪಡೆಗೆ ಶಿಫಾರಸ್ಸು ಮಾಡುವ ಭರವಸೆ ಸಹ ನೀಡಿದ್ದರು. ಅದರಂತೆ ಹಿಂದುಳಿದ ವರ್ಗಗಳ ಆಶಾಕಿರಣವಾಗಿರುವ ಸಿದ್ದರಾಮಯ್ಯನವರು ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಮಡಿವಾಳ ಸಮಾಜಕ್ಕೆ ಶೈಕ್ಷಣಿಕವಾಗಿ ಉತ್ತೇಜಿಸಲು ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ವಸತಿ ನಿಲಯಗಳನ್ನು ಸ್ಥಾಪಿಸುವುದರೊಂದಿಗೆ ಸಮುದಾಯ ಭವನಗಳನ್ನು ನಿರ್ಮಿಸಬೇಕು. ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮಡಿಕಟ್ಟೆಗಳ ಆಧುನೀಕರಣಕ್ಕೆ ಕ್ರಮ ವಹಿಸಬೇಕು. ವಚನ ಸಾಹಿತ್ಯದ ಸಂರಕ್ಷಕ ಶ್ರೀ ವೀರ ಮಡಿವಾಳರ ಮಾಚಿದೇವರ ಎಲ್ಲಾ ವಚನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಸುಲಭದಲ್ಲಿ ಓದುಗರಿಗೆ ದೊರೆಯುವಂತೆ ಮಾಡಬೇಕು ಎಂದು ಆಗ್ರಹಿಸಿದರು. ಸಂಘದ ಉಪಾಧ್ಯಕ್ಷ ಎಸ್.ಜೆ.ಪ್ರಶಾಂತ್, ಪ್ರಧಾನ ಕಾರ್ಯದರ್ಶಿ ಚೆನ್ನಕೇಶವ, ಖಜಾಂಚಿ ಸಿದ್ದಪ್ಪಾಜಿ, ಸಹಕಾರ್ಯದರ್ಶಿ ಕೆಂಪಶೆಟ್ಟಿ ಗೋಷ್ಠಿಯಲ್ಲಿದ್ದರು.

ಬೆಂಗಳೂರಿನಲ್ಲಿ ತಂದೆ–ತಾಯಿಯನ್ನು ಹತ್ಯೆ ಮಾಡಿದ್ದ ಮಗ ಕೊಡಗಿನಲ್ಲಿ ಬಂಧನ

ಮಡಿಕೇರಿ, ಜು. 22– ಬೆಂಗಳೂರಿನಲ್ಲಿ ತಂದೆ–ತಾಯಿಯನ್ನು ಹತ್ಯೆ ಮಾಡಿ ಪರಾರಿಯಾಗಿದ್ದ ಮಗ ಕೊಡಗಿನಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.



ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿರುವ ಬ್ಯಾಟರಾಯನಪುರ ನಿವಾಸಿ ಶರತ್(26) ಬಂಧಿತ ಯುವಕನಾಗಿದ್ದು, ಈತ ಜುಲೈ 17ರಂದು ತಂದೆ ಭಾಸ್ಕರ್(63) ಮತ್ತು ತಾಯಿ ಶಾಂತ(61) ಅವರುಗಳನ್ನು ರಾಡ್‌ನಿಂದ ತಲೆ ಮೇಲೆ ಹೊಡೆದು ಹತ್ಯೆ ಮಾಡಿ ಪರಾರಿಯಾಗಿದ್ದ. ಬೆಂಗಳೂರಿನಿಂದ ಮಂಗಳೂರಿಗೆ ತೆರಳಿದ್ದ ಈತ ನಂತರ ಕೊಡಗಿಗೆ ಬಂದು ಅರಣ್ಯ ಪ್ರದೇಶದಲ್ಲಿ ಎರಡು ದಿನಗಳ ಕಾಲ ಸುತ್ತಾಡುತ್ತಿದ್ದ ಎಂದು ಹೇಳಲಾಗಿದ್ದು, ಅನ್ನ ಆಹಾರವಿಲ್ಲದೇ ದಣಿದಿದ್ದ ಈತ ಅನ್ನಕ್ಕಾಗಿ ಅರಣ್ಯದಂಚಿನ ತೋಟದ ಮನೆಯೊಂದರ ಬಾಗಿಲು ಬಡಿದಿದ್ದಾನೆ. ಈತನ ವರ್ತನೆಯಿಂದ ಅನುಮಾನಗೊಂಡ ಮನೆಯವರು ಪೊಲೀಸರಿಗೆ ಮಾಹಿತಿ ನೀಡಿದ್ದರು. ತಕ್ಷಣವೇ ಸ್ಥಳಕ್ಕೆ ಧಾವಿಸಿ ಶರತ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಈತ ತಂದೆ–ತಾಯಿಯನ್ನು ಕೊಲೆ ಮಾಡಿ, ತಲೆ ತಪ್ಪಿಸಿಕೊಂಡು ಬಂದಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ಕೊಡಗು ಜಿಲ್ಲಾ ಪೊಲೀಸರು ಈ ಬಗ್ಗೆ ಬೆಂಗಳೂರಿನ ಕೊಡಿಗೆಹಳ್ಳಿ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದು, ಅವರು ಬಂದು ಶರತ್‌ನನ್ನು ಬಂಧಿಸಿ ಕರೆದೊಯ್ದಿದ್ದಾರೆ.

ಉದ್ಯೋಗ ಮೇಳದಲ್ಲಿ 105 ವಿಶೇಷಚೇತನರಿಗೆ ಉದ್ಯೋಗ ಭಾಗ್ಯ

● ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ನಡೆದ ಮೇಳ ● 350ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಭಾಗಿ

ಮೈಸೂರು,ಜು.22(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಶನಿವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ 350ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳಲ್ಲಿ 105 ಮಂದಿ ವಿಶೇಷಚೇತನರಿಗೆ ಉದ್ಯೋಗ ದೊರೆತಿದೆ.

ಮೈಸೂರಿನ ಮಾನಸಗಂಗೋತ್ರಿ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಸಮರ್ಥನಂ ಸಂಸ್ಥೆಯ ನೆರವಿನೊಂದಿಗೆ ಆಯೋಜಿಸಿದ್ದ ವಿಶೇಷಚೇತನರ ಉದ್ಯೋಗ ಮೇಳದಲ್ಲಿ ವಿವಿಧ ವಿದ್ಯಾರ್ಹತೆ ಹೊಂದಿದ್ದ 350ಕ್ಕೂ ಹೆಚ್ಚು ಆಕಾಂಕ್ಷಿಗಳು ಪಾಲ್ಗೊಂಡಿದ್ದರು.

ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಿಶೇಷಚೇತನರು ಸಂದರ್ಶನದಲ್ಲಿ ಪಾಲ್ಗೊಂಡರು. 105 ಮಂದಿ ವಿವಿಧ ಕಂಪನಿಗಳಲ್ಲಿ ಉದ್ಯೋಗಕ್ಕೆ ಆಯ್ಕೆಯಾದರೆ, ಇನ್ನಷ್ಟು ಮಂದಿ ಎರಡನೇ ಸುತ್ತಿನ ಸಂದರ್ಶನಕ್ಕೆ ಆಯ್ಕೆಯಾದರು. ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ಥಳದಲ್ಲೇ ನೇಮಕಾತಿ ಪತ್ರ ವಿತರಿಸಲಾಯಿತು.

ಅವಕಾಶ ನೀಡಬೇಕು: ಇದಕ್ಕೂ ಮುನ್ನ ಮೈಸೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಪಿ.ಜ್ಯೋತಿ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿ, ಸಮಸ್ಯೆ ಮೆಟ್ಟಿನಿಂತು ಸಾಮಾನ್ಯರಂತೆ ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯ ವಿಶೇಷಚೇತನರಿಗೂ ಇದೆ. ಕೆಲ ನ್ಯೂನತೆಯಿಂದಾಗಿ ವಿಕಲಚೇತನರಾಗಿರುತ್ತಾರೆ. ಇದರಿಂದ ಅವರು ಸಾಕಷ್ಟು ಸಮಸ್ಯೆ ಹಾಗೂ ಸವಾಲುಗಳನ್ನು ಎದುರಿಸಬೇಕಾದ ಸ್ಥಿತಿ ಎದುರಾಗುತ್ತದೆ ಎಂದರು.

ಎಲ್ಲದರ ನಡುವೆಯೂ ತಮಗೆ ಬೇಕಾಗಿರುವುದನ್ನು ಪಡೆಯಲು ವಿಶೇಷಚೇತನರು ಸಾಧನೆ ಮಾಡಬೇಕಾಗಿದೆ. ಸ್ಪರ್ಧಾತ್ಮಕ ಯುಗದಲ್ಲಿ ಹಲವು ವಿಕಲಚೇತನರು ಉನ್ನತ ಹುದ್ದೆಯನ್ನು ಅಲಂಕರಿಸಿರುವ ಉದಾಹರಣೆಗಳಿವೆ



ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿರುವ ವಿಶೇಷಚೇತನರು ದೊಡ್ಡ ಹುದ್ದೆಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿ ಯಶಸ್ಸುಗಳಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಬಿ.ಇಳಂಗೋವನ್ ಮಾತನಾಡಿ, ವಿಶೇಷಚೇತನರು ಇತರರಂತೆ ಬದುಕಬೇಕು. ಈ ನಿಟ್ಟಿನಲ್ಲಿ ನಾವು ನಿಮ್ಮೊಂದಿಗಿದ್ದೇವೆ ಎನ್ನುವ ಸಂದೇಶವನ್ನು ಈ ಉದ್ಯೋಗ ಮೇಳ ನೀಡುತ್ತಿದೆ. ವಿಶೇಷಚೇತನರ ಆರೋಗ್ಯ, ಜೀವನದ ಬಗ್ಗೆ ಕಾಳಜಿ ವಹಿಸುವ ಜೊತೆಗೆ ಅವರಿಗೆ ಉದ್ಯೋಗ ನೀಡಿ, ಸ್ವಾವಲಂಬಿ ಬದುಕು ಕಲ್ಪಿಸಿಕೊಡುವತ್ತಲೂ ಆಲೋಚನೆ ಮಾಡಿರುವುದು ಉತ್ತಮ ವಿಚಾರ ಎಂದು ಶ್ಲಾಘಿಸಿದರು.


ಕಾರ್ಯಕ್ರಮದಲ್ಲಿ ಆಯ್ಕೆ ಶ್ರೇಣಿ ಉಪನ್ಯಾಸಕರಾದ ಶಿವಕುಮಾರ ಸ್ವಾಮಿ, ಚೆಸ್ಕಾಂ ವೃತ್ತ ನಿರೀಕ್ಷಕ ಶಿವಮಾದಯ್ಯ, ಸಮರ್ಥನಂ ಸಂಸ್ಥೆಯ ವೀರಭದ್ರ, ಮುರುಗಮ್ಮ, ರಘು, ವಿಜಯ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಉದ್ಯೋಗ ಮತ್ತು ತರಬೇತಿ ಅಧಿಕಾರಿ ಕೆ.ಕುಶಾಲ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಸಮರ್ಥನಂ ಸಂಸ್ಥೆಯ ಶಿವರಾಜು ಸ್ವಾಗತಿಸಿದರೆ, ಸುಭಾಷ್ ಚಂದ್ರ ವಂದಿಸಿದರು.

ಚೌಪದಿ ಸರದಾರ ಮುದ್ದುರಾಮ




ಹಿರೇಮಗಳೂರು ಕಣ್ಣನ್

ಡಿವಿಜಿ ಅವರ ಐದು ಮಾತ್ರೆಗಳ ಗಣಗಳ ಪರಂಪರೆಯನ್ನು ಸ್ವಲ್ಪ ಮಾರ್ಪಾಡಿನೊಂದಿಗೆ ಮುಂದುವರೆಸಿದ ಕಾಗಲವಾಡಿ ಚಿಕ್ಕವೀರಯ್ಯ ಶಿವಪ್ಪ ಅರ್ಥಾತ್ ಕೆ.ಸಿ.ಶಿವಪ್ಪ ಅವರ ಕಾವ್ಯನಾಮವೇ 'ಮುದ್ದುರಾಮ'. ಇದರಡಿ ಸುಮಾರು 30 ಸಾವಿರಕ್ಕೂ ಅಧಿಕ ಚೌಪದಿ ರಚಿಸಿದ್ದಾರೆ. ಇವರ 'ಮುದ್ದುರಾಮ' ಕಾವ್ಯನಾಮ ಸಾಹಿತ್ಯ ಕ್ಷೇತ್ರದಲ್ಲಿ 'ಮುದ್ದುರಾಮ' ಪ್ರತಿಷ್ಠಾನವಾಗಿ ರೂಪುಗೊಂಡು ಸಾಹಿತ್ಯ ಸೇವೆಯಲ್ಲಿ ನಿರತವಾಗಿ, ಸಾಧನೆ ಮೆರೆದವರಿಗೆ ಪ್ರಶಸ್ತಿ ಪುರಸ್ಕಾರ ನೀಡುತ್ತಿದೆ. ಈ ಸಾಲಿನಲ್ಲಿ ಮುದ್ದುರಾಮ ಪ್ರಶಸ್ತಿ ವಾಗ್ಮಿ–ಚಿಂತಕ ಹಿರೇಮಗಳೂರು ಕಣ್ಣನ್ ಹಾಗೂ ಮುದ್ದುರಾಮ ಪುರಸ್ಕಾರ ಚೌಪದಿ ರಚನಾಕಾರ ಎಂ.ಮುತ್ತುಸ್ವಾಮಿಗೆ ಸಂದಿವೆ. ಇಂದು (ಭಾನುವಾರ) ಸಂಜೆ 6.30ಕ್ಕೆ ಮೈಸೂರು ಸರಸ್ವತಿಪುರಂನ ಜೆಎಸ್ಎಸ್ ಮಹಿಳಾ ಕಾಲೇಜು ನವಜ್ಯೋತಿ ಸಭಾಂಗಣದಲ್ಲಿ ಪ್ರಶಸ್ತಿ–ಪುರಸ್ಕಾರ ಸಮಾರಂಭ ನಡೆಯುತ್ತಿದೆ.



ಎಂ.ಮುತ್ತುಸ್ವಾಮಿ



ಕೆ.ಸಿ.ಶಿವಪ್ಪ

ಮೊದಲು ಸರಸಪ್ರಿಯ ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದರು. ಬಳಿಕ ವನಮಾಲಿ ಎಂದು ಬರೆಯಲಾರಂಭಿಸಿದರು. ಬಳಿಕ ಚೌಪದಿ ಬರೆಯಲಾರಂಭಿಸಿದ ಮೇಲೆ 'ಮುದ್ದುರಾಮ' ಎಂಬ ಕಾವ್ಯನಾಮದಿಂದ ಶುರು ಮಾಡಿದರು. ಸದ್ಯ 30 ಸಾವಿರಕ್ಕೂ ಅಧಿಕ ಚೌಪದಿ (ನಾಲ್ಕು ಸಾಲಿನವು) ಬರೆದಿದ್ದು, ಇವುಗಳದ್ದೇ ನಾಲ್ಕು ಸಂಪುಟಗಳು ಪ್ರಕಟವಾಗಿದ್ದು, ಇನ್ನೂ ನಾಲ್ಕು ಸಂಪುಟಗಳು ಪ್ರಕಟವಾಗಬೇಕಿದೆ. ಅವರು ಕಾಗಲವಾಡಿ ಚಿಕ್ಕವೀರಯ್ಯ ಶಿವಪ್ಪ. ಹೀಗಂದರೂ ಅನೇಕರಿಗೆ ಗೊತ್ತಾಗುವುದಿಲ್ಲ; **ಅವರೇ ಕೆ.ಸಿ.ಶಿವಪ್ಪ.**

ಚಾಮರಾಜನಗರ ಜಿಲ್ಲೆಯ ಕಾಗಲವಾಡಿಯಲ್ಲಿ 1937ರ ಜುಲೈ 26ರಂದು ಜನಿಸಿದ ಅವರು ಎಂಬತ್ತಾರು ವರ್ಷ ಪೂರೈಸಿ ಇದೇ ಜುಲೈ 26ಕ್ಕೆ ಎಂಬತ್ತೇಳಕ್ಕೆ ಕಾಲಿಡುತ್ತಿದ್ದಾರೆ. ಇಂಥ ಶಿವಪ್ಪ ಅವರು ಡಿವಿಜಿ ಅವರ ಪರಂಪರೆಯನ್ನು ಮುಂದುವರೆಸಿದವರು. ಹೇಗೆಂದರೆ ಕನ್ನಡ ಸಾಹಿತ್ಯದಲ್ಲಿ ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ'ವು ವಿಶಿಷ್ಟವಾದುದು. ಐದು ಮಾತ್ರೆಗಳ ಗಣಗಳನ್ನು ಬಳಸಿದ ಅವರ ಚೌಪದಿಗಳು ಇಂದಿಗೂ ಅನನ್ಯವಾದವು. ಈ ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿದವರು ಕೆ.ಸಿ.ಶಿವಪ್ಪ. ಅವರ ಚೌಪದಿಗಳಲ್ಲಿ ಏನುಂಟು, ಏನಿಲ್ಲ. ಅವು ಏಕಾಂತ ಮೀರಿ ಲೋಕಾಂತವಾ ಗಿವೆ. ಅವುಗಳು ಹೊಮ್ಮಿಸುವ ಚಿಂತನೆಗಳು, ಅಧ್ಯಾತ್ಮದ ಮಿಂಚುಗಳು ಗಮನಾರ್ಹ. ಸಂಖ್ಯೆಯ ದೃಷ್ಟಿಯಿಂದ 30 ಸಾವಿರ ಮೀರಿದ ಚೌಪದಿಗಳು ಗುಣಾತ್ಮಕವಾಗಿವೆ. ಅವರ ಶಿಸ್ತಿನ ಜೀವನ ಮಾದರಿಯಾದುದು. ಇದನ್ನೇ ಅವರು ಚೌಪದಿಯಲ್ಲಿ ಹಿಡಿದಿಟ್ಟಿದ್ದಾರೆ.

ಆಗಬೇಕಾದುದನು ಎಸಗು
ನಿಯಮಿತವಾಗಿ
ಮುಂದೂಡದಿರು ಕಾರ್ಯ
ನಾಳೆಗಿರಲೆಂದು
ಅಂದಂದೆ ಅರಳದಿರೆ
ಚೆಲುವೆಲ್ಲಿ ಮಲ್ಲಿಗೆಗೆ
ಅರಿ ದಿನದ ಔನ್ನತ್ಯ
ಮುದ್ದುರಾಮ

ಇದರಲ್ಲಿ ಕರ್ತವ್ಯವನ್ನು ಎಚ್ಚರಿಸುತ್ತಾರೆ. ನಾವು ಹೇಗಿರಬೇಕು? ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಇವುಗಳನ್ನು ಪ್ರಸಾರಗೊಳಿಸಿದವರು ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್. ಅವರು ಉದಯ ಟಿವಿಯಲ್ಲಿ ನಡೆಸಿಕೊಡುತ್ತಿದ್ದ ಹರಟೆ ಕಾರ್ಯಕ್ರಮದ ಆರಂಭವನ್ನು ಶಿವಪ್ಪ ಅವರ ಚೌಪದಿಯೊಂದನ್ನು ಉದಾಹರಿಸುತ್ತಿದ್ದರು. ಹೀಗೆ ಅವರು ಪ್ರಚಾರಗೊಳಿಸಿದ ಪರಿಣಾಮ ಅವು ಜನರ ನಾಲಿಗೆ ಮೇಲೆ ನಲಿದಾಡುವಂತಾದವು. ಅವುಗಳನ್ನು ನೆನಪಿಟ್ಟುಕೊಳ್ಳಲು ಸುಲಭವೆಂದು ಅವರು ಸಾಧಿಸಿ ತೋರಿಸಿದರು.

ಚುಚ್ಚುನುಡಿ ಕಚ್ಚುನುಡಿ ಇದೆ
ನೂರು ದಿನದಿನದಿ
ಹುಚ್ಚು ನಾಯಿಯ ಹಿಂದೆ
ಬಿದ್ದರಿದೆ ನೋವು
ಎಚ್ಚರದ ನಡೆಯಿಂದ
ಸಂಕಷ್ಟ ಪರಿಹಾರ
ಬೆಚ್ಚದಿರು ಕಷ್ಟದಲಿ
ಮುದ್ದುರಾಮ

ಎನ್ನುವ ಪ್ರಾಸದ ಈ ಚೌಪದಿಯಲ್ಲಿ ನಮ್ಮ ಬದುಕಿನಲ್ಲಿ ಎದುರಾಗುವ ಕಷ್ಟನಷ್ಟಗಳಿಗೆ ಕುಗ್ಗದೆ, ಬಗ್ಗದೆ ಹೇಗಿರಬೇಕು ಎಂದು ಅವರು ಸಲಹೆ ನೀಡುತ್ತಾರೆ. ಅವರ ಪ್ರತಿಭೆಯನ್ನು 1960ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ 'ಶುಕ್ರದೆಸೆ' ಎಂಬ ಅನುವಾದದ ಕಥಾಸಂಕಲನ ಪ್ರಕಟಿಸಿದ ಕೃತಿಗೆ, ಅವರ ಗುರುಗಳಾದ ತ.ಸು.ಶಾಮರಾಯರು ಮುನ್ನುಡಿ ಬರೆದು ಹರಸಿದ್ದಾರೆ. ಅವರ ಮುನ್ನುಡಿಯ ಕೊನೆಗೆ ಶಿವಪ್ಪ ಅವರ ಕನ್ನಡ ಶುದ್ಧವಾಗಿದೆ; ಭಾಷೆ ಸರಳವಾಗಿದೆ; ಶೈಲಿ ಮೋಹಕವಾಗಿದೆ. ಭಾಷಾಂತರವೆಂಬುದು ಒಂದು ಶ್ರೇಷ್ಠವಾದ ಕಲೆ; ಈ ಕಲೆಯಲ್ಲಿ 'ಸರಸಪ್ರಿಯ'ರು ಕೃತಕೃತ್ಯರಾಗಿದ್ದಾರೆ. ಇಷ್ಟು ಮುದ್ದಾಗಿ ತಮ್ಮ ಭಾಷಾಂತರ ಕೃತಿಯನ್ನು ಕನ್ನಡಕ್ಕೆ ನೀಡಿದ್ದಕ್ಕಾಗಿ ಅವರು ಅಭಿನಂದನಾರ್ಹರು. ಅವರ ಈ 'ಶುಕ್ರದೆಸೆ' ಅವರ ಶುಕ್ರದೆಸೆಯಾಗಿ, ಅವರ ಸಾಹಿತ್ಯಸೇವೆ ಸತ್ಕೀರ್ತಿದಾಯಕವಾಗಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ ಎಂದು ನುಡಿದಿದ್ದು ನಿಜವಾಯಿತು.

ಶಿವಪ್ಪ ಅವರದು ಮಿತವಾದ ಮಾತು. ಇದನ್ನೇ ಚೌಪದಿಯಲ್ಲಿ ಹೇಳಿದ್ದಾರೆ.

ಕೂಡಿಟ್ಟ ಸಂಪತ್ತ ನೀ
ಪೋಲು ಮಾಡುವೆಯಾ?
ಧನಕ್ಕಿಂತ ಬೆಲೆ ಅಧಿಕ
ಶಕ್ತಿಯುತ ನುಡಿಗೆ
ಕಂಡ ಕಂಡವರೊಡನೆ
ಚೆಲ್ಲದಿರು ಮಾತುಗಳ
ನುಡಿ ಮಿನುಗು ಮಾಣಿಕವೊ
ಮುದ್ದುರಾಮ

ಹೀಗೆ 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಮಾತಿಗೆ ಬೆಲೆ ಬರಬೇಕೆಂದರೆ ಎಗ್ಗಿಲ್ಲದೆ ಮಾತಾಡುವ ಬದಲು ಕಡಿಮೆ ಮಾತಾಡಬೇಕು ಎನ್ನುವ ಅವರ ಸೂಕ್ತ ಸಲಹೆ ಸಾರ್ವಕಾಲಿಕವಾದುದು. ಈ ಮೂಲಕ ಅವರ ಚೌಪದಿಗಳು ಸಮಕಾಲೀನವೂ, ಸಾರ್ವಕಾಲಿಕವೂ ಆಗುತ್ತವೆ.

ಹೆಚ್ಚಾಗಿ ಬಿಳಿ ಪಂಚೆ ಹಾಗೂ ಬಿಳಿ ಜುಬ್ಬದಲ್ಲಿ ಕಾಣಸಿಗುವ ಅವರದು ಕಡಿಮೆ ಊಟ, ತಿಂಡಿ. ಹಸಿವಾಗುವ ಮುನ್ನವೇ ಊಟ ಮಾಡುವವರಿಗೆ ಅವರು ಪ್ರಶ್ನಿಸುವುದು ಹೀಗೆ;

ತಿನ್ನು ನೀ ಮಿತವಾಗಿ
ಶುಚಿಯಾದ ತಿನಿಸುಗಳ
ಹಸಿವಾಗದಿರೆ ಬರಿದೆ
ತುರುಕದಿರು ಸತತ
ಸರಿ ನಿದ್ದೆ, ಸರಿ ಊಟ,
ವ್ಯಾಯಾಮ ಹಿತಕಾರಿ
ಕಸದ ಬುಟ್ಟಿಯೆ ಹೊಟ್ಟೆ?
ಮುದ್ದುರಾಮ


ಈ ಚೌಪದಿಯ ಮೂಲಕ ಆಹಾರವನ್ನು ಕಿರಿದುಗೊಳಿಸಬೇಕು ಎಂದು ಅವರು ಎಚ್ಚರಿಸುತ್ತಾರೆ. ಅಗತ್ಯವಿಲ್ಲದಿದರೂ ಹೊಟ್ಟೆಗಿಳಿಸುವ ಕ್ರಮಕ್ಕೆ ಅವರು ಹೊಟ್ಟೆಯೇನು ಕಸದ ಬುಟ್ಟಿಯೇ? ಎಂದು ಪ್ರಶ್ನಿಸಿದ್ದು ಸೂಕ್ತವಾಗಿದೆ. 'ಕಸ ತಿನ್ನುವುದಕ್ಕಿಂತ ತುಸು ತಿನ್ನಬೇಕು' ಎಂಬ ಗಾದೆಯಂತೆ ಅವರದು ರಚನೆಯಲ್ಲಿ ಕೂಡಾ. ಗಾತ್ರದಲ್ಲಿ ಚಿಕ್ಕವುಗಳಾದರೂ ಚೊಕ್ಕವಾಗಿವೆ, ಸತ್ವದಿಂದ ಕೂಡಿವೆ.


ಈ ಬಾಳನದಿ ಪಯಣ
ದೂರವಿರುವುದೆ ಕಡಿಮೆ
ಏಕೆ ಬೇಡದ ಜಗಳ
ಅಂಬಿಗನ ಜೊತೆಗೆ?
ನಲಿ ನೋಡಿ ಗಿರಿಬನದ
ತಂಗಾಳಿ ಬಹುಬಣ್ಣ
ಇಳಿ ತೊರೆಯ ತಿರುವಿನಲಿ
ಮುದ್ದುರಾಮ


ಎನ್ನುವ ಮೂಲಕ ಮೂರೇ ದಿನಗಳ ಬಾಳು ಎಂಬ ಅರಿವನ್ನು ಮೂಡಿಸುತ್ತಾರೆ. ನಿಸರ್ಗದ ಸೊಬಗನ್ನು ಕಂಡು ನಲಿಯುತ್ತಿರು ವೃಥಾ ಜಗಳ ಯಾಕಾಗಿ ಎಂದು ಕೇಳುತ್ತಾರೆ. ಇಷ್ಟೆಲ್ಲವನ್ನು ಬರೆದರೂ ಅವರಿಗೆ ತಾವು ಬರೆದುದು ನಿಮಿತ್ತ ಎನ್ನುವ ಎಚ್ಚರವಿದೆ. ಇದನ್ನೇ ಚೌಪದಿಯೊಂದರಲ್ಲಿ ಹೇಳಿದ್ದಾರೆ.


ನನ್ನದಿದು ನಾ ಬರೆದೆ ಎನುವ
ಅಮಲೇರಿದರೆ
ಪಾತಾಳದೊಳಬಿದ್ದೆ ನೀ
ಮೇರುವಿನಿಂದ
ನಿನ್ನದಲ್ಲದ ಪದಪುಂಜ
ಯಾರದೋ ಕರುಣೆಯದು
ಬರಿ ನಿಮಿತ್ತವೋ ನೀನು–
ಮುದ್ದುರಾಮ

ಇಂತಹ ವಿವೇಕ ಎಲ್ಲರಿಗೂ ಇರಬೇಕು ಎನ್ನುವ ಅರಿವನ್ನು ಅವರು ಮೂಡಿಸುತ್ತಾರೆ. ಹೀಗೆ ಸರಳವಾಗಿ ಬರೆಯುವ ಅವರ ಚೌಪದಿಗಳಿಗೆ ಅರ್ಥ ಬೇಕಿಲ್ಲ, ವ್ಯಾಖ್ಯಾನ ಅನಗತ್ಯ ಅವು ಓದಿಸಿಕೊಳ್ಳುವ ಗುಣ ಪಡೆದಿರುವುದರಿಂದ ನಿತ್ಯ ನಿರಂತರ, ಚಿರಂತನ.









✍ ಗಣೇಶ್ ಅಮೀನಗಡ

ಕೃತಿಗಳು

ರಾಗರತಿ, ಅನುರಾಗ, ರಾಧಾ ಮಾಧವ, ಚಿತ್ತಭಿತ್ತಿ, ಚಿತ್ತವೃತ್ತಿ, ಚಿತ್ರಾಂಬರ, ಚೆಂಬೆಳಕು, ಚಿದಾನಂದ, ಚೆಲುವೆ, ಚಂದ್ರಿಕೆ, ಚಾರುಲತೆ, ಚಿತ್ರಪತ್ರ (ಕವನ ಸಂಕಲನಗಳು), ಕೆಸಿಎಸ್ ಸಮಗ್ರ ಕಾವ್ಯ (ಸಂಪುಟ 1 – ನೆನಪು ಮಂದಾರ, ಸಂಪುಟ 2– ಚೈತ್ರ ಚೈತನ್ಯ), ಮುದ್ದುರಾಮನ ಮನಸು, ಮುದ್ದುರಾಮನ ಬದುಕು ಬೆಳಕು (ಚೌಪದಿಗಳ ಸಂಕಲನ), ಬದುಕಿಗೊಂದು ಭರವಸೆ, ಚಿತ್ತುಚಿತ್ತಾರ (ವ್ಯಕ್ತಿತ್ವ ವಿಕಸನ), ಮೌನಸ್ಪಂದನ, ಚಿತ್ತಪರಿಪಾಕ (ಚಿಂತನ ಚಿಡಿನುಡಿ ಸಂಚಯ), ಜೀವಸತ್ವಗಳು, ಬೆಡಗಿನ ಬಾಟಿಕ್, ಭೂಮಿ, ಶುಕ್ರದೆಸೆ (ಅನುವಾದ), ಅರವಿಂದ ದರ್ಶನ, ಮದಾನ, ವಿಶ್ವಧರ್ಮ ದರ್ಶನ ಸಂಪುಟ–2, ರಾಜೇಂದ್ರ ಚಿತ್ರಸಂಪುಟ, ರಾಜೇಂದ್ರ ನುಡಿನಮನ, ರಾಜೇಂದ್ರ ಕವನ ಕುಸುಮ (ಸಂಪಾದನೆ), ಬಾಳುಣ್ಣಿ, ಪಂಚತಂತ್ರದ ಕತೆಗಳು, ವಿನಯ ಕನ್ನಡ ಭಾರತಿ (ಇತರೆ), ಹೀಗೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ, ಸಂಪಾದಿಸಿದ್ದಾರೆ. ಇಂಗ್ಲಿಷಿನಲ್ಲಿಯೂ ಹಲವು ಕೃತಿಗಳು ಪ್ರಕಟಗೊಂಡಿವೆ.

ಪ್ರಶಸ್ತಿಗಳು

ಡಿವಿಜಿ ಮುಕ್ತಕ ಸಾಹಿತ್ಯ ಪ್ರಶಸ್ತಿ, ಕುಲಪತಿ ಕೆ.ಎಂ.ಮುನ್ಷಿ ಸನ್ಮಾನ, ರಮಣಶ್ರೀ ಶರಣ ಪ್ರಶಸ್ತಿ, ಬಸವ ವೇದಿಕೆಯ ವಚನ ಸಾಹಿತ್ಯಶ್ರೀ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸುವರ್ಣ ಗೌರವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಹಲಸಂಗಿ ಗೆಳೆಯರ ಪ್ರತಿಷ್ಠಾನ ಪ್ರಶಸ್ತಿ, ದಶಮಾನೋತ್ಸವ ಹೊಯ್ಸಳ ಪ್ರಶಸ್ತಿ, ಕೇಂದ್ರ ಸರ್ಕಾರದ ಎಕ್ಸ್‌ಲೆನ್ಸಿನ್ ಪ್ರಿಂಟಿಂಗ್ ಅವಾರ್ಡ್ (ಬೆಂಗಳೂರು ವಿವಿ ಪ್ರಕಟಣೆಗಳಿಗೆ), ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ದಸರಾ ಕವಿಗೋಷ್ಠಿಗಳ ಅಧ್ಯಕ್ಷತೆ, ಚಾಮರಾಜನಗರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಂತಾದ ಗೌರವಗಳು ಅವರಿಗೆ ಸಂದಿವೆ.


ಓದಿದ್ದು ಎಂಎಸ್ಸಿ; ಒಲಿದದ್ದು ಕಾವ್ಯ

ಚಾಮರಾಜನಗರ ಜಿಲ್ಲೆಯ ಕಾಗಲವಾಡಿಯಲ್ಲಿ ಜನಿಸಿದ ಅವರು ಕಾಗಲವಾಡಿ, ಚಾಮರಾಜನಗರದಲ್ಲಿ ಓದಿದ ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿಎಸ್ಸಿ ಆನರ್ಸ್ ಪಡೆದರು. ನಂತರ ಮೈಸೂರು ವಿಶ್ವವಿದ್ಯಾನಿಲಯದಿಂದ ಎಂಎಸ್ಸಿ ಪದವಿ ಪಡೆದ ಬಳಿಕ ಮದ್ರಾಸಿನ ಕೇಂದ್ರ ಚರ್ಮ ಸಂಶೋಧನಾಲಯದಲ್ಲಿ ಪ್ರಕಟಣಾಧಿಕಾರಿಯಾಗಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಸಾರಾಂಗದ ನಿರ್ದೇಶಕರಾದರು. ಅವರು ನಿರ್ದೇಶಕರಾಗಿದ್ದ ಅವಧಿಯಲ್ಲಿ ಬೆಂಗಳೂರು ಮುದ್ರಣಾಲಯ ಆರಂಭಿಸಿ, 500ಕ್ಕೂ ಅಧಿಕ ಪುಸ್ತಕಗಳನ್ನು ಪ್ರಕಟಿಸಿದರು. ಆಮೇಲೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾಗಿ, ಬೆಂಗಳೂರಿನ ವಿಧಾನಸೌಧದಲ್ಲಿ ಆರೋಗ್ಯ ಮತ್ತು ಸಹಕಾರ ಇಲಾಖೆಗಳಿಗೆ ವಿಶೇಷ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಬಳಿಕ ಮೈಸೂರಿನ ಜೆಎಸ್ಎಸ್ ವಿದ್ಯಾಪೀಠದ ಪ್ರಕಟಣ ವಿಭಾಗದ ಗೌರವ ನಿರ್ದೇಶಕರಾಗಿ ದುಡಿದರು. ಜೊತೆಗೆ ಬೆಂಗಳೂರು ದಕ್ಷಿಣ ರೋಟರಿ ಅಧ್ಯಕ್ಷರಾಗಿ, ಬೆಂಗಳೂರಿನ ಭಾರತೀಯ ವಿದ್ಯಾಭವನದ ಕರ್ನಾಟಕದ ಗೌರವ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಓದಿದ್ದು ಎಂಎಸ್ಸಿಯಾದರೂ ಕಾವ್ಯಕ್ಕೆ ಒಲಿದದ್ದು ಆಕಸ್ಮಿಕವಾದರೂ ಗಟ್ಟಿ ಕೃತಿಕಾರರಾದುದು ನಿಜ.


ಮಕ್ಕಳ ಚಿತ್ರಕಥೆ

ಬದುಕು ಕೇವಲ ಕಷ್ಟಗಳ ಸಂತೆ


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಮಗ ತನ್ನ ತಂದೆಯ ಬಳಿ ಅವಲತ್ತುಕೊಳ್ಳುತ್ತಿದ್ದ. ಬದುಕು ಕೇವಲ ಕಷ್ಟಗಳ ಸಂತೆಯೆಂದು ಅವನಿಗನ್ನಿಸುತ್ತಿತ್ತು "ಒಂದು ಸಮಸ್ಯೆ ಪರಿಹರಿಸಿಕೊಳ್ಳುತ್ತಿದ್ದಂತೆ ಇನ್ನೊಂದು ಬಂದೆರಗುತ್ತದೆ. "ಅಪ್ಪಾ, ಈ ಬದುಕನ್ನು ಎದುರಿಸುವುದು ಹೇಗೆ ಎಂಬುದೇ ಗೊತ್ತಾಗುತ್ತಿಲ್ಲ...!" ಎಂದು ಅಳಲು ತೋಡಿಕೊಂಡನು.




ಅಪ್ಪ ಅವನನ್ನು ಅಡುಗೆ ಮನೆಗೆ ಕರೆದೊಯ್ದು ಮೂರು ಪಾತ್ರೆಗಳಲ್ಲಿ ನೀರು ಸುರಿದು ಅದನ್ನು ಒಲೆಯ ಮೇಲಿಟ್ಟ. ಮೂರೂ ಪಾತ್ರೆಗಳ ನೀರು ಕುದಿಯಲಾರಂಭಿಸಿತು. ಆಗ ಆತ ಒಂದು ಪಾತ್ರೆಗೆ ಆಲೂಗೆಡ್ಡೆಯನ್ನು, ಇನ್ನೊಂದಕ್ಕೆ ಮೊಟ್ಟೆಯನ್ನು ಹಾಗು ಮತ್ತೊಂದಕ್ಕೆ ಕಾಫಿ ಬೀಜವನ್ನು ಹಾಕಿದ. ಅವು ಇನ್ನಷ್ಟು ಕಾಯುವುದನ್ನೇ ಗಮನಿಸುತ್ತಾ ಕುಳಿತ. ಮಗನಿಗೆ ಅಪ್ಪ ಏನು ಮಾಡುತ್ತಿದ್ದಾನೆಂಬುದೇ ಅರ್ಥವಾಗಲಿಲ್ಲ.



20 ನಿಮಿಷಗಳು ಕಳೆದ ಮೇಲೆ ಆತ ಎಲ್ಲಾ ಪಾತ್ರೆಗಳನ್ನೂ ಉರಿಯಿಂದ ಇಳಿಸಿದ. "ಈಗೇನು ನೋಡುತ್ತಿರುವೆ ಹೇಳು...?" ಎಂದು ಮಗನನ್ನು ಪ್ರಶ್ನಿಸಿದ. "ಆಲೂ, ಮೊಟ್ಟೆ, ಕಾಫಿ" ಎಂದ ಮಗ. "ಇನ್ನಷ್ಟು ಹತ್ತಿರದಿಂದ ಗಮನಿಸು" ಎಂದ ಅಪ್ಪ.



ಮಗ ಆಲೂಗೆಡ್ಡೆಯನ್ನು ಮುಟ್ಟಿದ ಅದು ಮೆತ್ತಗಾಗಿತ್ತು. ನಂತರ ಅಪ್ಪ ಮೊಟ್ಟೆಯನ್ನು ಕೈಗೆತ್ತಿಕೊಂಡು, ಅದನ್ನು ಒಡೆಯುವಂತೆ ಹೇಳಿದ. ಹೊರಗಿನ ಸಿಪ್ಪೆಯನ್ನು ತೆಗೆದು ನೋಡಿದರೆ, ಒಳ ಭಾಗ ಗಟ್ಟಿಯಾಗಿತ್ತು. ಕೊನೆಯಲ್ಲಿ ಕಾಫಿ ಗುಟುಕರಿಸುವುದಕ್ಕೆ ಹೇಳಿದ. ಕಾಫಿ ಹೀರುತ್ತಿದ್ದಂತೆಯೇ ಮಗನ ಮುಖದಲ್ಲಿ ಉಲ್ಲಾಸ ಮೂಡಿತು.



ಆಗ ತಂದೆ ವಿವರಣೆ ಕೊಟ್ಟ. "ಕುದಿಯುತ್ತಿರುವ ನೀರಿನಲ್ಲಿ ಆಲೂ, ಮೊಟ್ಟೆ, ಕಾಫಿ ಎಲ್ಲವೂ ಒಂದೇ ಬಗೆಯ ಸಂಕಷ್ಟಗಳನ್ನು ಎದುರಿಸಿದವು. ಆದರೆ ಪರಿಸ್ಥಿತಿಗೆ ಅವು ಪ್ರತಿಕ್ರಯಿಸಿದ ಬಗ್ಗೆ ಭಿನ್ನ. ಗಟ್ಟಿತನ ಹೊಂದಿದ್ದ ಆಲೂಗೆಡ್ಡೆ ಕುದಿ ನೀರಲ್ಲಿ ಮೆತ್ತಗಾಯಿತು. ಮೊಟ್ಟೆಯ ಹೊರಗಿನ ಬಿಳಿ ಭಾಗ ಒಡೆದರೆ ದ್ರವ ಭಾಗ ಚೆಲ್ಲುತ್ತದೆ. ಆದರೆ ನೀರಿನಲ್ಲಿ ಕುದಿಸಿದ ಮೊಟ್ಟೆಯ ಒಳ ಭಾಗ ಗಟ್ಟಿಯಾಯಿತು.



ಅಪ್ಪ ಮಾತು ಮುಂದುವರೆಸುತ್ತಾ, "ಕಾಫಿ ಕಥೆ ಭಿನ್ನ. ಅದು ಕುದಿ ನೀರಿನ ಸಹವಾಸಕ್ಕೆ ಬೀಳುತ್ತಲೇ ಆ ನೀರಿನ ಜಾಯಮಾನವನ್ನೇ ಬದಲಿಸಿ, ಹೊಸ ರುಚಿ ಹುಟ್ಟಿಗೆ ಕಾರಣವಾಯಿತು. ಬದುಕಿನಲ್ಲಿ ಕಷ್ಟಗಳು ಎದುರಾಗುವುದನ್ನು ತಡೆಯಲಾಗುವುದಿಲ್ಲ. ಆದರೆ ಅದಕ್ಕೆ ಪ್ರತಿಕ್ರಯಿಸುವ ನಿಟ್ಟಿನಲ್ಲಿ ನೀನು ಆಲೂಗೆಡ್ಡೆಯಾಗುವೆಯೊ..? ಮೊಟ್ಟೆಯೋ...? ಇಲ್ಲವೇ ಕಾಫಿಯೋ..? ಎಂಬುದು ನಿನಗೆ ಬಿಟ್ಟಿದ್ದು..!" ಎಂದ



ವಾರಭವಿಷ್ಯ

23.7.2023 ರಿಂದ 29.7.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಕುಜ–ಸಿಂಹ, ಬುಧ–ಕಟಕ, ಸಿಂಹ, ಗುರು–ಮೇಷ, ಶುಕ್ರ–ಸಿಂಹ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಪ್ರಮುಖ ವ್ಯವಹಾರಗಳಲ್ಲಿ ಯಶಸ್ಸು ಗಳಿಸಲು ಇನ್ನೂ ಸ್ವಲ್ಪ ಸಮಯ ಕಾಯಬೇಕು. ನಿರುದ್ಯೋಗಿಗಳಿಗೆ ಸಮಾಧಾನಕರ ಸುದ್ದಿ ಬರುವುದು. ಬಾಲ್ಯ ಮಿತ್ರರನ್ನು ಭೇಟಿ ಮಾಡಿ ಸಂತಸದ ಸಮಯವನ್ನು ಕಳೆಯುವಿರಿ. ಭೂ ವಿವಾದಗಳಿಂದ ಹೊರ ಬರುವಿರಿ. ವಾರದ ಮಧ್ಯೆದಲ್ಲಿ ನೆರೆಹೊರೆಯಲ್ಲಿ ಸಂಬಂಧಗಳು ಕೆಡಬಹುದು. ಜಾಣ್ಮೆ, ತಾಳ್ಮೆ ಈ ಸಮಯದ ಅವಶ್ಯಕತೆಯಾಗಿದೆ. ಆರೋಗ್ಯದಲ್ಲಿ ಸಣ್ಣಪುಟ್ಟ ತೊಂದರೆಗಳು ಕಾಡುತ್ತವೆ. ಶ್ರೀ ಗಣಪತಿ ಸೇವೆ, ಶುಭ ಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕೃಷಿ ಉತ್ಪನ್ನಗಳಿಗೆ, ಕೃಷಿ ಉಪಕರಣಗಳ ವ್ಯಾಪಾರಿಗಳಿಗೆ ಲಾಭದ ಸಾಧ್ಯತೆ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆ. ಸ್ಥಿರತೆ ಇಲ್ಲದ ನಿರ್ಧಾರಗಳಿಂದ ಕಾರ್ಯ ಯೋಜನೆಗಳು ಉಲ್ಟಾ ಹೊಡೆಯುವುದು. ಸ್ವಯಂಕೃತಾಪರಾಧಗಳಿಂದ ಚಿಂತೆಗೆ ಈಡಾಗುವಿರಿ. ಮನೆಯಲ್ಲಿ ಹಿರಿಯ ಚೇತನರಿಗೆ ಅನಾರೋಗ್ಯ, ಔಷಧೋಪಚಾರಕ್ಕೆ ಹಣ ವ್ಯಯ. ಪುಣ್ಯಕ್ಷೇತ್ರ ಭೇಟಿಯಿಂದ ಮನಃಶಾಂತಿ. ಶ್ರೀರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಹಳೆಯ ಸಮಸ್ಯೆಗಳು ಶುಭಾಂತ್ಯವನ್ನು ಕಾಣುವುದು. ಮನೆಯಲ್ಲಿ ಸಂತಸದ ವಾತಾವರಣ. ದೂರ ಸರಿದವರು ಹತ್ತಿರವಾಗುವರು. ಬೃಹತ್ ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ ಭರಪೂರ ಆದಾಯ. ಉಚ್ಚ ಶಿಕ್ಷಣಾರ್ಥಿಗಳಿಗೆ ಉತ್ತಮ ಪ್ರಗತಿ ಉಂಟು. ಶುಭ ಸಮಾಚಾರವೊಂದು ಬರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಸಾಗದು ಹಾಗೂ ವೃಥಾ ಅಲೆದಾಟ. ಪಿತ್ತ ಪ್ರಕೋಪ, ವೈದ್ಯರ ದರ್ಶನ. ಶ್ರೀ ವಿಷ್ಣು ನಾಮಸ್ಮರಣೆ. ಶುಭ ಸಂಖ್ಯೆ–4

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರವೆಲ್ಲ ಬ್ಯುಸಿಯಾಗಿರುತ್ತೀರಿ. ವಿವಿಧ ವ್ಯಕ್ತಿಗಳ ಒಡನಾಟ. ಧನಾಗಮವಾದರೂ ಅನಗತ್ಯ ವಿಷಯಗಳಿಗೆ ಹಣ ಪೋಲಾಗುವುದು. ವಿದ್ಯಾರ್ಥಿಗಳು ಆಲಸಿಗರಾಗುವರು. ನೆರೆಹೊರೆಯವರ ದೂಷಣೆಗೆ ಗುರಿಯಾಗುವಿರಿ. ಮನೆಯಲ್ಲಿ ಹಿರಿಯ ಚೇತನರ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗುವುದು. ವಾಹನ ವ್ಯಾಪಾರದಲ್ಲಿ ನಷ್ಟ ಉಂಟಾಗಬಹುದು. ಅಷ್ಟಮ ಶನಿದೇವನಿಂದ ನಿಮಗೆ ಬುದ್ಧಿ ಸ್ಥಂಬನವಾಗುವುದು. ಶ್ರೀದುರ್ಗಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಹೊಸ ಜನರ ಭೇಟಿ, ಹೊಸ ಚಟುವಟಿಕೆಗಳ ಪ್ರಾರಂಭ. ನೂತನ ಆವಿಷ್ಕಾರಗಳ ಪ್ರೇರಣೆ. ಬಂಧು ಬಾಂಧವರಲ್ಲಿ ಸಂತಸವನ್ನು ಹಂಚಿಕೊಳ್ಳಿ. ಹಣಕಾಸಿನ ಸ್ಥಿತಿ ಉತ್ತಮವಾಗಿರುತ್ತದೆ. ಪ್ರಮುಖ ನಿರ್ಧಾರಕ್ಕೆ ಮುನ್ನ ಅನುಭವಿ ವ್ಯಕ್ತಿಗಳೊಂದಿಗೆ ಸಮಾಲೋಚನೆ ಮಾಡಿ. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿಯಾಗುವುದು. ಜನೋಪಕಾರ ಕಾರ್ಯಗಳಲ್ಲಿ ತೊಡಗುವುದರಿಂದ ಸಾಮಾಜಿಕ ಮನ್ನಣೆ ದೊರಕುವುದು, ಆರೋಗ್ಯದ ಕಡೆಯೂ ಗಮನವಿರಲಿ. ಶ್ರೀ ಸುಂದರಕಾಂಡ ಪಠಿಸಿ. ಶುಭ ಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಫ.ಣ.ಶ.ಪೆ.ಪೊ)

ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು, ಆದರೆ ನೀವು ತಾಳ್ಮೆಗೆಡುವ ಅಗತ್ಯವಿಲ್ಲ. ಕೈಗೆ ಹಣ ಬಂದರೂ ಅದು ಬಿದಿರೆಲೆಗೆ ಬಿದ್ದ ನೀರಿನಂತೆ ಕ್ಷಣಾರ್ಧದಲ್ಲಿ ವ್ಯಯವಾಗುವುದು. ಅಷ್ಟಮದಲ್ಲಿ ಗುರು–ರಾಹು ಸಂಯೋಜನೆ ದೈಹಿಕವಾಗಿ ಪ್ರತಿಕೂಲ ಫಲವನ್ನೂ, ಅಪಘಾತವನ್ನೂ ನೀಡಬಹುದು. ಜೊತೆಗೆ ನೆರೆಹೊರೆಯಲ್ಲಿ ಅಸಮಾಧಾನ ಉಂಟಾಗಲು ಕಾರಣೀಭೂತರಾಗುತ್ತಾರೆ. ಗೋವು ಸೇವೆ ಮಾಡಿ. ಶುಭ ಸಂಖ್ಯೆ–5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಹರ್ಷ, ಉಲ್ಲಾಸಗಳ ವಾತಾವರಣದಲ್ಲಿ ವಾರಕ್ಕೆ ಸ್ವಾಗತ. ಆಪ್ತ ಮಿತ್ರರ ಸಮಾಗಮದಿಂದ ಮುದಿತವಾದ ಮನಸ್ಸು. ಧನ–ಕನಕ ಪ್ರಾಪ್ತಿಗಳ ಜೊತೆ ಮನೆಯಲ್ಲಿ ಶುಭ ಕಾರ್ಯವೂ ನಡೆಯುವುದು. ಎಷ್ಟು ಚತುರತೆ ತೋರಿದರೂ ವ್ಯಾಪಾರ, ವ್ಯವಹಾರಗಳಲ್ಲಿ ಹಿನ್ನಡೆಯನ್ನು ಅನುಭವಿಸುವಿರಿ. ಶ್ರೀಮತಿಯೊಂದಿಗೆ ಪುಣ್ಯಕ್ಷೇತ್ರ ಸಂದರ್ಶನದಿಂದ ಮನಸ್ಸಿಗೆ ನಿರಾಳ. ಮಕ್ಕಳಿಗೆ ಸಾಧನೆಗೆ ತಕ್ಕ ಪ್ರತಿಫಲ ದೊರಕುವುದು. ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–8.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು

ವಾರದಾರಂಭಕ್ಕೆ ಹರ್ಷದಾಯಕ ವಾತಾವರಣ ಇದ್ದಾಗ್ಯೂ ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರಕದು. ಗ್ರಹಗಳ ಬೆಂಬಲವಿಲ್ಲದ ಕಾರಣ ವ್ಯಾಪಾರ–ವ್ಯವಹಾರಗಳಲ್ಲಿ ಸುಖವಿಲ್ಲ. ಆದಾಯ ಮೀರಿದ ಖರ್ಚುಗಳು ವೃತ್ತಿ ಸ್ಥಳದಲ್ಲಿ ಪರಸ್ಪರ ಘರ್ಷಣೆಗೆ ಅವಕಾಶ ನೀಡದಂತೆ ನಡೆದುಕೊಳ್ಳಿ. ಗುಪ್ತ ಶತ್ರುಗಳ ಕಾರಸ್ಥಾನ ಬಲಯುತವಾಗಿದೆ. ಚತುರ್ಥ ಶನಿದೇವ ನಿಮ್ಮನ್ನು ತಪ್ಪು ಕೆಲಸಕ್ಕೆ ಪ್ರೇರೇಪಿಸಬಹುದು. ಆರೋಗ್ಯದ ಬಗ್ಗೆ ಉಪೇಕ್ಷೆ ಸಲ್ಲದು. ಶ್ರೀ ಸುಬ್ರಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ–7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮನೆಯಲ್ಲಿ ಅನ್ಯೋನ್ಯತೆಯಿಂದ ಸಂತೋಷ ಕಾಣುವುದು. ಆಸ್ತಿ ಹಂಚಿಕೆಗೆ ಸಂಬಂಧಿಸಿದ ವಿಚಾರಗಳಲ್ಲಿ ಆಶಾದಾಯಕ ಫಲ ದೊರಕೀತು. ಗ್ರಹಗಳಲ್ಲೇ ಪ್ರಧಾನನೆನಿಸಿದ ಗುರುವಿನ ಪೂರ್ಣಾನುಗ್ರಹ ನಿಮ್ಮ ಮೇಲಿದೆ. ದೃಢತೆಯಿಂದ ಮುನ್ನಡೆಯಿರಿ, ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ಉದ್ಯೋಗಾರ್ಥಿಗಳಿಗೆ ಶುಭ ವಾರ್ತೆ ಬರುವುದು. ಶ್ರೀಮತಿಯ ಮಾತನ್ನು ಗೌರವಿಸಿ, ಶುಭವಾಗುತ್ತೆ. ಶ್ರೀ ಗುರುರಾಯರ ಸೇವೆ. ಶುಭ ಸಂಖ್ಯೆ–1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಅನಿರೀಕ್ಷಿತ ಮೂಲಗಳಿಂದ ಧನ ಸಂಚಯ. ಮನೆಯಲ್ಲಿ ಹರ್ಷದ ವಾತಾವರಣ ಸ್ವಂತ ಜನರೇ ಮೋಸ ಮಾಡುವ ಸಾಧ್ಯತೆ. ಶತ್ರು ಜನರ ವೃದ್ಧಿ, ಜ್ಞಾತಿಗಳಲ್ಲಿ ವಿರೋಧ ಹಾಗೂ ಕಲಹ. ಭೂ ವಿವಾದಗಳು ಬಗೆಹರಿಯದೆ ಬೇಸರ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು. ರಾಜಕಾರಣಿಗಳಿಗೆ ವಿವಾದಗಳು ಸುತ್ತಿಕೊಳ್ಳುವುದು. ಪರಸ್ತ್ರೀಯರನ್ನು ಗೌರವದಿಂದ ನಿಮ್ಮ ಮಾನ ಪ್ರತಿಷ್ಠೆಗಳಿಗೆ ಧಕ್ಕೆಯಾಗದಂತೆ ವ್ಯವಹರಿಸಿ. ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದು, ಹಾಗೂ ಅಲ್ಪಸಿದ್ಧಿ, ಶರೀರಕ್ಕೆ ಸೌಖ್ಯವಿರದು. ಪರಾನ್ನ ಭೋಜನ, ಮಾನಸಿಕ ಸ್ಥಿರತೆಗೆ ದೈವದ ಮೊರೆ ಹೋಗಿ. ಬೇಡದ್ದಕ್ಕೆ ಹಣ ವ್ಯಯವಾಗುವುದು. ಗೃಹ ಶಾಂತಿ ಕಾಯ್ದುಕೊಳ್ಳುವುದು ನಿಮ್ಮ ಕೈಯ್ಯಲ್ಲೇ ಇದೆ. ವಾರಾಂತ್ಯಕ್ಕೆ ಗುರುಜನರ ಭೇಟಿಯಿಂದ ಜಟಿಲ ಸಮಸ್ಯೆಗೆ ಪರಿಹಾರ ದೊರಕುವುದು. ಮನೆಗೆ ಗೃಹ ಕೃತ್ಯ ವಸ್ತುಗಳ ಖರೀದಿ. ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–2.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ಕೆಲವೊಂದು ಶುಭ ಪ್ರಸಂಗಗಳಿಂದ ಉಲ್ಲಾಸಿತರಾಗಿರುವಿರಿ. ಮಕ್ಕಳಿಂದ ಹೆಚ್ಚಿನ ಸಂತೋಷ ಪ್ರಾಪ್ತಿ. ಧನಾಗಮದ ಜೊತೆಗೆ ವಿಲಾಸಿ ವಸ್ತು ಸಾಧನಗಳ ಖರೀದಿಯಿಂದ ಪರ್ಸ್ ಖಾಲಿ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಹಾಗೂ ಏಳಿಗೆಗೆ ಪೂರಕವಾದಂತಹ ವಾತಾವರಣ ನಿರ್ಮಾಣವಾಗಲಿದೆ. ನ್ಯಾಯಾಲಯ ವ್ಯವಹಾರಗಳು ನಿಮ್ಮ ಪರವಾಗಿರುತ್ತದೆ. ವಾರಾಂತ್ಯಕ್ಕೆ ಪಿಕ್‌ನಿಕ್ ಜೊತೆಗೆ ಪುಣ್ಯಕ್ಷೇತ್ರ ಸಂದರ್ಶನ. ಶ್ರೀದತ್ತ ಗುರು ಪೂಜೆ. ಶುಭ ಸಂಖ್ಯೆ–1.

ವಿದ್ಯಾವಂತರೇ ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿದ್ದಾರೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಾಸಕ ಅನಿಲ್ ಚಿಕ್ಕಮಾದು ವಿಷಾದ



ಹೆಚ್.ಡಿ.ಕೋಟೆ, ಜು.22- ತಂದೆ-ತಾಯಿಯ ಕನಸನ್ನು ನನಸು ಮಾಡುವುದೇ ವಿದ್ಯಾರ್ಥಿಗಳ ಕೆಲಸ ಎಂದು ತಿಳಿಸಿದ ಶಾಸಕ ಅನಿಲ್ ಚಿಕ್ಕಮಾದು ಇಂದು ಓದಿದ ವಿದ್ಯಾವಂತರೇ ತಮ್ಮ ತಂದೆ-ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ತಂದೆ ತಾಯಿ ತಮ್ಮ ಮಕ್ಕಳು ಉತ್ತಮ ವಿದ್ಯಾಭ್ಯಾಸ ಪಡೆದು ಉನ್ನತ ಮಟ್ಟದ ಹುದ್ದೆಗೆ ಹೋಗುವಂತಾಗಲಿ ಎಂದು ಕನಸುಗಳನ್ನು ಕಟ್ಟಿಕೊಂಡು ಶಾಲೆಗೆ ಕಳಿಸುತ್ತಾರೆ. ತಂದೆ ತಾಯಿಗಳ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪಾಠ ಪ್ರವಚನಗಳನ್ನು ಬಹಳ ಶ್ರದ್ಧೆಯಿಂದ ಕಲಿತು ಉತ್ತಮ ವ್ಯಕ್ತಿಯಾಗಿ ಬೆಳೆಯಲು ಮುಂದಾಗಬೇಕು ಎಂದರು.

ಇದಕ್ಕೆ ನಾನೇ ಉದಾಹರಣೆ ಎಂದು ಈ ಸಂದರ್ಭದಲ್ಲಿ ಹೇಳಿಕೊಳ್ಳುತ್ತೇನೆ. ಏಕೆಂದರೆ ನಾನು ರಾಜಕೀಯಕ್ಕೆ ಪ್ರವೇಶ ಮಾಡಿದಾಗ ತಾಲೂಕಿನ ಜನತೆ ಮೊದಲ ಬಾರಿಗೆ ಶಾಸಕನಾಗಿ ಆಶೀರ್ವದಿಸಿದರು, ತಾಲೂಕಿನ ಜನತೆ ಕೊಟ್ಟಂತಹ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಾಲೂಕನ್ನು ಅಭಿವೃದ್ಧಿ ಮಾಡಿದ್ದರ ಫಲವಾಗಿ ನಾನು ಮತ್ತೆ ಶಾಸಕನಾಗಿ ಆಯ್ಕೆಯಾಗಿದ್ದೇನೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ತಮಗೆ ಸಿಕ್ಕುವ ಉತ್ತಮ ಅವಕಾಶಗಳನ್ನು ಕಳೆದುಕೊಳ್ಳದೆ ಉತ್ತಮ ಪ್ರಜೆಯಾಗಿ ಬೆಳೆಯಬೇಕು. ನಿಮ್ಮ ತಂದೆ-ತಾಯಿ ಪಟ್ಟ ಶ್ರಮಕ್ಕೆ ಪ್ರತಿ ಫಲ ಸಿಗುವ ಕೆಲಸಗಳನ್ನು ಮಾಡುವುದರಲ್ಲಿ ಜಾಗ್ರತೆ ವಹಿಸಿ ಎಂದ ಅವರು ಸ್ನೇಹ ಮತ್ತು ಸಂಬಂಧಗಳನ್ನು ಮುಂದುವರೆಸಿಕೊಂಡು ಹೋಗಬೇಕು. ಓದಿದ ಎಷ್ಟೋ ಮಂದಿ ತಂದೆ ತಾಯಿಯನ್ನು ವೃದ್ಧಾಶ್ರಮಕ್ಕೆ ಬಿಡುವ ಪರಿಯನ್ನು ನೋಡಿದ್ದೇವೆ, ಆದರೆ ನಿಮ್ಮಿಂದ ಇದು ಆಗಬಾರದು, ತಂದೆ ತಾಯಿಗೆ ಒಳ್ಳೆ ಮಕ್ಕಳಾಗಿ ಜೀವಿಸಬೇಕು ಎಂದರು.

ಸಂಸ್ಕೃತಿ ಚಿಂತಕರಾದ ಶಂಕರ್ ದೇವನೂರು ಮಾತನಾಡಿ, ಪ್ರತಿಯೊಂದು ಜೀವಿಯೂ ಸಹ ತನ್ನ ಜೀವನವನ್ನು ಅನುಭವಿಸುತ್ತವೆ, ಆದರೆ ಮಾನವ ಮಾತ್ರ ತನ್ನ ಅನುಭವವನ್ನು ಹಲವಾರು ಮಾಧ್ಯಮದ ಮೂಲಕ ಅಭಿವ್ಯಕ್ತ ಪಡಿಸುತ್ತಾನೆ. ಅದು ಕಲೆಯಾಗಬಹುದು, ಸಾಹಿತ್ಯ, ಕ್ರೀಡೆ, ಸಂಗೀತ , ಇವೆಲ್ಲವು ಕೂಡ ಈ ನೆಲದಲ್ಲಿ ಆಳವಾಗಿ ಬೇರು ಬಿಟ್ಟು ಈ ನೆಲದ ಅಂತಸತ್ವವನ್ನು ಹೀರಿಕೊಂಡು, ಶ್ರೇಷ್ಠತೆಗೆ ಅನುವು ಮಾಡಿಕೊಡುತ್ತದೆ. ಇದನ್ನು ನಾವು ಅಭಿಮಾನ ಎಂದು ಕರೆಯುತ್ತೇವೆ ಎಂದರು.

ಜಗತ್ತಿನಲ್ಲಿ ಮೊದಲು ಋಷಿ ಸಂಸ್ಕೃತಿ ಇತ್ತು, ನಂತರದ ದಿನಗಳಲ್ಲಿ ಕೃಷಿಯ ಸಂಸ್ಕೃತಿ ಬಂತು, ಆದರೀಗ ಋಷಿಯ ಸಂಸ್ಕೃತಿ ಬಂದಿದ್ದು, ಋಷಿಗಾಗಿ ಮನುಷ್ಯ ಅನಾಚಾರ, ಅತ್ಯಾಚಾರದಂತ ದುಷ್ಕೃತ್ಯಗಳನ್ನು ಮಾಡುತ್ತಿದ್ದಾನೆ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಣೆ ಮಾಡುವುದರ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಮಧುಕುಮಾರ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಎಚ್.ಸಿ. ಮಂಜುನಾಥ್, ಕೊಡಸೀಗೆ ರಾಜೇಗೌಡ, ಪ್ರಕಾಶ್, ಪ್ರದೀಪ್, ವೆಂಕಟರಮಣ, ಅಶೋಕ್, ಪುಟ್ಟರಾಜು, ಏಜಾಜ್ ಪಾಷ, ಶಿವಪ್ಪ, ಚಾಮರಾಜು, ಅನಿಲ್, ಸೌಮ್ಯ, ಮುದ್ದು ಮಲ್ಲಯ್ಯ, ತಾಲೂಕು ದಂಡಾಧಿಕಾರಿ ಸಣ್ಣರಾಮಪ್ಪ, ಉಪ ತಹಸೀಲ್ದಾರ್ ಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಸಬ್ಬಿರ್, ಪ್ರಾಂಶುಪಾಲರಾದ ಕೆಂಪರಾಜು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ್, ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ದೈಹಿಕ ಶಿಕ್ಷಕ ಪುಟ್ಟರಾಜು, ಉಪನ್ಯಾಸಕರುಗಳಾದ, ಅರುಣ್ ಕುಮಾರ್, ನಿಂಗರಾಜು, ಶಿವಕುಮಾರ್, ಗಣೇಶ್, ರಘು, ಪುಟ್ಟರಾಜು, ಸತ್ಯರಾಜು, ಗದಿಗೆಪ್ಪ ಒಗಿ, ನಾಗರ್ಜುನ್, ಬೊಮ್ಮರಪ್ಪ, ಮಂಜುನಾಥ್, ಲಕ್ಷ್ಮಿ, ಬೊರಮ್ಮ, ಸಂಗೀತ, ನಿತ್ಯ, ಪೂರ್ಣಿಮ, ಸಿಂಧು, ಕಾಂತ್ಯಯಾನಿ, ಚಂದ್ರಮ್ಮ, ಇನ್ನು ಮುಂತಾದವರು ಹಾಜರಿದ್ದರು.

> ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಈಗಾಗಲೇ ನ್ಯಾಕ್ ತಂಡದಿಂದ ಬಿ ಪ್ಲಸ್ ದೊರೆತಿರುವುದರಿಂದ ಕೇಂದ್ರ ಸರ್ಕಾರದಿಂದ ಎರಡು ಕೋಟಿ ಹಣ ದೊರೆಯಲಿದ್ದು, ಇದರಿಂದ ಕಾಲೇಜು ಅಭಿವೃದ್ಧಿ ಕಾಣಲಿದೆ. ಅಲ್ಲದೇ ನನ್ನ ಅನುದಾನದಲ್ಲೂ ಸಹ ಸಾಕಷ್ಟು ಅಭಿವೃದ್ಧಿ ಕೆಲಸ ಆಗಿದೆ. ಮುಂದಿನ ದಿನಗಳಲ್ಲೂ ಇನ್ನು ಹೆಚ್ಚಿನ ಅನುದಾನ ನೀಡಿ ಕಾಲೇಜಿನ ಅಭಿವೃದ್ಧಿ ಮಾಡಲಾಗುವುದು.
> -ಅನಿಲ್ ಚಿಕ್ಕಮಾದು, ಶಾಸಕರು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಷ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹಿಡಿಂಬ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೊಲೈ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾನ್ ಕುಮಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹಿಡಿಂಬ (ತೆ)	4 ಪ್ರದರ್ಶನಗಳು
ಪ್ರಭಾ	
ಮಧುರಕಾವ್ಯ (ಕ)	4 ಪ್ರದರ್ಶನಗಳು

ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಕೆ.ಆರ್.ನಗರ, ಜು.22- ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಹಕಾರ ಸಂಘದ ಅಧ್ಯಕ್ಷರಾಗಿ ತೊಳಸಿ ರಾಮ ನಾಯಕ, ಉಪಾಧ್ಯಕ್ಷರಾಗಿ ಕುಮಾರ ಆಯ್ಕೆಯಾಗಿದ್ದಾರೆ. ಎಂದು ಸಹಕಾರ ಇಲಾಖೆಯ ಅಧಿಕಾರಿ ರವಿ ತಿಳಿಸಿದ್ದಾರೆ.

ಇಂದು ವಿನಾಯಕ ಬಡಾವಣೆಯ ಸರ್ಕಾರಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ತೊಳಸಿ ರಾಮ ನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ಕುಮಾರ್ ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ಅಧ್ಯಕ್ಷ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ರವಿ ಘೋಷಣೆ ಮಾಡಿದರು.

ಅಧ್ಯಕ್ಷ ತೋಳಸಿ ರಾಮ ನಾಯಕ ಮಾತನಾಡಿ ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರಿಗೂ ಅಭಿನಂದನೆ ಸಲ್ಲಿಸುತ್ತೇನೆ ಹಾಗೂ ಎಲ್ಲರ ವಿಶ್ವಾಸದೊಂದಿಗೆ ನಮ್ಮ ಸಹಕಾರ ಸಂಘವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಸಕಾಲದಲ್ಲಿ ಸದಸ್ಯರಿಗೆ ಸಾಲ ಸೌಲಭ್ಯ ನೀಡುವ ಜೊತೆಗೆ ಇನ್ನಿತರ ಕಾರ್ಯ ಚಟುವಟಿಕೆಯಲ್ಲೂ ಪಾಲ್ಗೊಳ್ಳುವಂತೆ ನೋಡಿಕೊಳ್ಳುತ್ತೇನೆ ಎಂಬ ಭರವಸೆ ನೀಡಿದರು.

ತೋಳಸಿರಾಮ ನಾಯಕ ಅಧ್ಯಕ್ಷರಾಗಿ ಆಯ್ಕೆ ಆಗುತ್ತಿದ್ದಂತೆ ಸದಸ್ಯರು ಮತ್ತು ಸ್ನೇಹಿತರು ಸಿಹಿ ಹಂಚಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಚುನಾವಣೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಮಂಜೇಗೌಡ, ನಿಕಟ ಪೂರ್ವ ಉಪಾಧ್ಯಕ್ಷ ಫಣಿರಾಜ್, ಸರ್ಕಾರಿ ನೌಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶಂಕ್ರೇಗೌಡ, ಡಿ.ಜೆ.ಕುಮಾರ್, ಬಿ.ಆರ್.ಕುಮಾರ್, ಬಿ.ಕಾಂತರಾಜ್, ಎಂ.ಕುಮಾರ್, ಬಿ.ಆರ್. ಮನು, ಟಿ.ಜಿ.ಸತೀಶ್, ಎಂ.ಎನ್.ರಾಧಾ, ಡಿ.ರುಕ್ಮಣಿ, ಎಂ.ಪಿ.ನಂಜುಂಡ, ಪ್ರಸನ್ನ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮೈಸೂರು-ಮಳವಳ್ಳಿ ಮುಖ್ಯರಸ್ತೆ ಸರಿಪಡಿಸದಿದ್ದಲ್ಲಿ ಉಗ್ರ ಹೋರಾಟ

ರಾಜ್ಯ ರೈತ ಸಂಘ (ಮೂಲ ಸಂಘಟನೆ) ಎಚ್ಚರಿಕೆ



ಬನ್ನೂರು, ಜು.22- ಮೈಸೂರು-ಮಳವಳ್ಳಿ ಮುಖ್ಯ ರಸ್ತೆಯ ಒಳಚರಂಡಿ ಕಾಮಗಾರಿ ವೇಳೆಯಲ್ಲಿ ಅಗೆಯಲಾದ ರಸ್ತೆಯನ್ನು ಕೂಡಲೇ ಡಾಂಬರೀಕರಣಗೊಳಿಸಿ ಆಗುತ್ತಿರುವ ಅನಾಹುತಗಳನ್ನು ತಡೆಯದಿದ್ದರೆ ಲೋಕೋಪಯೋಗಿ ಇಲಾಖೆ ಹಾಗೂ ಒಳಚರಂಡಿ ಇಲಾಖೆಯೇ ಅನಾಹುತಗಳಿಗೆ ಕಾರಣವೆಂದು ರಸ್ತೆ ಸರಿಪಡಿಸುವವರೆಗೂ ರಸ್ತೆಗೆ ಇಳಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ(ಮೂಲ ಸಂಘಟನೆ) ಜಿಲ್ಲಾಧ್ಯಕ್ಷ ನಾರಾಯಣ್ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಅತಿಥಿಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ ರೈತ ಹುತಾತ್ಮ ದಿನದ ಕಾರ್ಯಕ್ರಮದಲ್ಲಿ ರೈತ ಹೋರಾಟಗಾರ ಪ್ರೋ. ನಂಜುಂಡಸ್ವಾಮಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಈ ಬಾರಿ ಮುಂಗಾರು ಕೈಕೊಟ್ಟಿದ್ದು, ಕೆಆರ್‌ಎಸ್ ಅಣೆಕಟ್ಟೆಯಲ್ಲಿಯೇ ನೀರಿಲ್ಲದೇ ರೈತರು ಕಂಗೆಟ್ಟಿದ್ದಾರೆ. ರೈತಾಪಿ ವರ್ಗಕ್ಕೆ ಧೈರ್ಯ ತುಂಬುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೂಡಲೇ ರೈತರು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾಡಿರುವ ಸಾಲವನ್ನು ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ಸ್ವಾಮಿನಾಥನ್ ವರದಿಯನ್ನು ಜಾರಿಗೊಳಿಸಿ ರೈತರ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನಿಗದಿಗೊಳಿಸಬೇಕು. ರೈತರಿಗೆ ಅನುಕೂಲವಾಗುವಂತೆ ಎಲ್ಲ ಸಂದರ್ಭದಲ್ಲೂ ಬೆಳೆಗಳ ಖರೀದಿ ಕೇಂದ್ರವನ್ನು ಆರಂಭಿಸಿ ರೈತರಿಂದ ಬೆಳೆಯನ್ನು ಪಡೆದುಕೊಂಡು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಬೇಕೆಂದು ತಿಳಿಸಿದರು. ಪಹಣಿಗಾಗಿ ರೈತರು ಕಚೇರಿಗಳನ್ನು ಅಲೆಯುತ್ತಿದ್ದರೂ ಅವರ ಸಮಸ್ಯೆಗಳು ನೀಗುತ್ತಿಲ್ಲ. ಅಧಿಕಾರಿಗಳ ಮಟ್ಟದಲ್ಲಿಯೇ ಪಹಣಿಯನ್ನು ವಿತರಿಸಲು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಬನ್ನೂರು ಹಾಗೂ ಸುತ್ತಮುತ್ತಲಿನ ಗ್ರಾಮದಲ್ಲಿ ಸುಮಾರು 1 ಲಕ್ಷ ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆ ನಡೆಯುತ್ತಿದೆ. ಆದರೆ ಮುಂಗಾರು ಕೈಕೊಟ್ಟಿರುವುದರಿಂದ ರೈತರು ಬಿತ್ತನೆ ಕಾರ್ಯ ಮಾಡಲು ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ನೀರಾವರಿ ತಜ್ಞರು ಹಾಗೂ ರೈತರ ಬಹಿರಂಗ ಸಭೆಯನ್ನು ಕರೆದು ರೈತ ಮುಖಂಡರೊಂದಿಗೆ ಚರ್ಚಿಸಿ ನೀರನ್ನು ಬಿಡಲು ಆಗದ ಪಕ್ಷದಲ್ಲಿ ಬರ ಪ್ರದೇಶವೆಂದು ಘೋಷಿಸಿ ಎಕರೆಗೆ 50 ಸಾವಿರ ರೂ.ಗಳ ಪರಿಹಾರವನ್ನು ಘೋಷಣೆ ಮಾಡಿ ರೈತರ ಬಾಳಿಗೆ ಬೆಳಕಾಗಬೇಕೆಂದು ಅವರು ಆಗ್ರಹಿಸಿದರು.

ಅತ್ತಹಳ್ಳಿ ರಾಜು ಮಾತನಾಡಿ, ನರಗುಂದದ ಹೋರಾಟದಲ್ಲಿ ಮೃತರಾದ ರೈತರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ರೈತರ ಹುತಾತ್ಮ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ರೈತರಿಗೆ ಅನುಕೂಲವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರ್ಕಾರ 'ರೈತ ನಿಧಿ'ಯನ್ನು ಸ್ಥಾಪಿಸಿ ಬಜೆಟ್‌ನಲ್ಲಿ ಅದಕ್ಕೆ ಅನುದಾನವನ್ನು ಮೀಸಲಿಟ್ಟು, ರೈತರ ಅಭಿವೃದ್ಧಿಗೆ ಸಹಕಾರವನ್ನು ನೀಡಬೇಕೆಂದು ಕೋರಿದರು.

ಕಾರ್ಯಕ್ರಮದಲ್ಲಿ ಬೆಟ್ಟಹಳ್ಳಿ ಶಿವರಾಮು, ಎಂ.ವಿ. ಕೃಷ್ಣಪ್ಪ, ರಾಜು, ಯಾಚೇನಹಳ್ಳಿ ಚಿನ್ನಸ್ವಾಮಿ, ಬಾಣಗವಾಡಿ ಮಹದೇವ, ಕರಗೇಗೌಡ, ಜಯರಾಮು, ಪಾರ್ಥ, ಲೋಕೇಶ್, ಚಿಕ್ಕಮರಿಶೆಟ್ಟಿ, ಕುಚೇಲ, ಪಾಪಣ್ಣ ಚೆನ್ನಪ್ಪ, ಮಲಿಯೂರು ರಾಜಣ್ಣ ಸೇರಿದಂತೆ ಪ್ರಮುಖರು ಇದ್ದರು.

ನರಸೀಪುರದಲ್ಲಿ ಜೀವ ವಿಮಾ ಪ್ರತಿನಿಧಿಗಳ ಪ್ರತಿಭಟನೆ



ತಿ.ನರಸೀಪುರ ಜು 22- ವಿಮಾ ಪ್ರೀಮಿಯಂ ಹಾಗೂ ಸೇವೆಗಳ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಸಂಘಟನೆ ಪಟ್ಟಣದ ಎಲ್‌ಐಸಿ ಉಪಗ್ರಹ ಆಧಾರಿತ ಶಾಖೆಯಲ್ಲಿ ಭಿತ್ತಿ ಪತ್ರ ಪ್ರದರ್ಶನದ ಮೂಲಕ ಪ್ರತಿಭಟನೆ ನಡೆಸಿತು.

ಅಖಿಲ ಭಾರತ ಜೀವವಿಮಾ ಪ್ರತಿನಿಧಿಗಳ ಸಮ್ಮೇಳನದ ನಿರ್ಣಯದ ಮೇರೆಗೆ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಟ್ಟಣದ ಶಾಖಾ ಕಚೇರಿ ಮುಂಭಾಗದಲ್ಲಿ ಸೇರಿದ ಜೀವ ವಿಮಾ ಪ್ರತಿನಿಧಿಗಳು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು. ಎಲ್‌ಐಸಿ ಪ್ರೀಮಿಯಂಗಳ ಹಾಗೂ ಜಿಎಸ್‌ಟಿ ಸೇವೆಗಳ ಮೇಲೆ ವಿಧಿಸುತ್ತಿರುವ ಪ್ರೀಮಿಯಂ ಜಿಎಸ್‌ಟಿ ಹಿಂಪಡೆಯಬೇಕು. ಗ್ರೂಪ್ ಟರ್ಮ್ ಇನ್ಶೂರೆನ್ಸ್ ಪ್ರೀಮಿಯಂ ಮೊತ್ತವನ್ನು ಕಡಿಮೆ ಮಾಡಿ ವಿಮಾ ಮೊತ್ತವನ್ನು 25 ಲಕ್ಷಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿದರು.

ಪ್ರತಿನಿಧಿಗಳ ಗ್ರಾಜ್ಯುಯಿಟಿಯನ್ನು 10 ಲಕ್ಷಕ್ಕೆ ಏರಿಸಬೇಕು. ಪ್ರತಿನಿಧಿಗಳ ಕಲ್ಯಾಣ ನಿಧಿಯನ್ನು ಸ್ಥಾಪಿಸಿ, ಆರೋಗ್ಯ ನಿಧಿ, ಪಿಂಚಣಿ, ಸಾಮಾಜಿಕ ಭದ್ರತೆ ಒದಗಿಸಬೇಕು. ಭೀಮಾಸುಗಮ್, ಆನ್ಲೈನ್ ಮಾರಾಟ, ನೇರ ಮಾರಾಟಗಳನ್ನು ನಿಗಮ ಸ್ಥಗಿತಗೊಳಿಸಬೇಕು.

ಗ್ರೂಪ್ ಟರ್ಮ್ ಇನ್ಶೂರೆನ್ಸ್ ಅನ್ನು 85 ವರ್ಷದವರಿಗೆ ವಿಸ್ತರಿಸಬೇಕು. ಸಿಎಲ್‌ಐಎ ಪೋರ್ಟಲ್ ಪ್ರಾರಂಭಿಸಿ ಅಭಿವೃದ್ಧಿ ಅಧಿಕಾರಿಗಳಿಗೆ ನೀಡುವ ಸೇವಾ ಸೌಲಭ್ಯವನ್ನು ಸಿಎಲ್‌ಐಎಗಳಿಗೂ ವಿಸ್ತರಿಸಬೇಕು. ಬಾಕಿ ಇರುವ ಪ್ರತಿನಿಧಿಗಳ ಬೇಡಿಕೆಗಳನ್ನು ಕೂಡ ಈಡೇರಿಸುವಂತೆ ಪ್ರತಿಭಟನಾಕಾರರು ನಿಗಮವನ್ನು ಒತ್ತಾಯಿಸಿದರು. ಮೈಸೂರು ವಿಭಾಗದ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಸಂಘಟನೆಯ ಕರೆಯ ಮೇರೆಗೆ ಎಲ್ಲಾ ಎಲ್‌ಐಸಿ ಪ್ರತಿನಿಧಿಗಳ ಬೇಡಿಕೆಗಳಿಗಾಗಿ ಶಾಖೆಯ ಮುಂದೆ ಭಿತ್ತಿಪತ್ರಗಳನ್ನು ಅಂಟಿಸಿ ಪ್ರತಿಭಟನೆ ವ್ಯಕ್ತಪಡಿಸಿದರು. ಸಂಘಟನೆಯ ಮೈಸೂರು ವಿಭಾಗೀಯ ಅಧ್ಯಕ್ಷ ಸಿದ್ದಲಿಂಗ ಒಡೆಯರ್ ಎಸ್ ಸೋಮಶೇಖರ, ವೀರಭದ್ರಸ್ವಾಮಿ, ಕೆ. ಪ್ರಕಾಶ ಅಂಕಪ್ಪ, ಎಚ್. ಎನ್. ವೀರೇಶ್, ಅಂಬಿಕಾ, ಶಿವರುದ್ರಮ್ಮ, ಸುನೀತ, ಸುಮ, ಮಹಾದೇವಸ್ವಾಮಿ, ಲಿಂಗೇಗೌಡ, ರಾಜು, ಮರಿಸ್ವಾಮಿ ಮುಂತಾದವರು ಹಾಜರಿದ್ದರು.

ಮಾಯಿಗೌಡನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಸಾವಿತ್ರಮ್ಮ, ಉಪಾಧ್ಯಕ್ಷರಾಗಿ ಯಶೋಧಮ್ಮ ಅವಿರೋಧ ಆಯ್ಕೆ



ಚುಂಚನಕಟ್ಟೆ, ಜು.22- ಸಾಲಿಗ್ರಾಮ ತಾಲೂಕಿನ ಮಾಯಿಗೌಡನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸಾವಿತ್ರಮ್ಮ, ಉಪಾಧ್ಯಕ್ಷರಾಗಿ ಕಗ್ಗಳ ಯಶೋಧಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶುಕ್ರವಾರ ಪಂಚಾಯತಿ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಾವಿತ್ರಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಯಶೋಧಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಲಿಲ್ಲ. ಇದರಿಂದ ಚುನಾವಣಾಧಿಕಾರಿ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎನ್. ಪ್ರಸನ್ನ ಅವರು ಇವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಅಧ್ಯಕ್ಷ -ಉಪಾಧ್ಯಕ್ಷರ ಆಯ್ಕೆ ಪ್ರಕಟಿಸುತ್ತಿದ್ದಂತೆಯೇ ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಮ್ಮನಹಳ್ಳಿ ಉದಯ್, ಮಾಜಿ ಅಧ್ಯಕ್ಷರಾದ ಹಾಡ್ಯ ಮಹೇಶ್, ವೀರಭದ್ರಪ್ಪ, ಮಾಜಿ ಸದಸ್ಯ ಮಲ್ಲಿಕಾರ್ಜುನ, ಮುಖಂಡರಾದ ಅಶ್ವಥ, ಕಗ್ಗಳ ನಟೇಶ, ಕಾಂತರಾಜು, ಅಂಕನಹಳ್ಳಿ ಷಣ್ಮುಖ, ಯತೀಶ್, ಬೀರೇಗೌಡ ಅವರುಗಳು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣಾ ಸಭೆಯಲ್ಲಿ ಗಿರಿಜಮ್ಮ, ಕಾತ್ಯಾಯಿನಿ, ಮಾದೇವ, ವಂದನ, ದೊಡ್ಡೇಗೌಡ, ಯಶೋಧ, ಕುಮಾರಾಚಾರ್, ಚಂದ್ರಯ್ಯ, ಆಶಾ, ಕಮಲಮ್ಮ, ಗೌಡಯ್ಯ, ಕುಮಾರಸ್ವಾಮಿ, ಶೋಭಾ, ಪಿಡಿಒ ಧನಂಜಯ,ಕಾರ್ಯದರ್ಶಿ ತನುಶ್ರೀ ಹಾಜರಿದ್ದರು.

ಹೊಟ್ಟೆನೋವಿನಿಂದ ಬಳಲುತ್ತಿದ್ದ ಬಾಲಕಿಗೆ ದಸಂಸ ನೆರವು

ಬಡ ಬಾಲಕಿಗೆ ಉಚಿತ ಶಸ್ತ್ರಚಿಕಿತ್ಸೆ ನೆರವೇರಿಸಿದ ವೈದ್ಯರು



ಹುಣಸೂರು.ಜು.22- ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದ 13 ವರ್ಷದ ಬಾಲಕಿಗೆ ದಸಂಸದ ವತಿಯಿಂದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ಪ್ರಾಣಾಪಾಯದಿಂದ ಪಾರು ಮಾಡಲಾಗಿದೆ.

ತಾಲೂಕು ಕಟ್ಟೆಮಳಲವಾಡಿ ಗ್ರಾಮದ ಹಾವಾಡಿಗ ಸೋಮ ಮತ್ತು ಲಕ್ಷ್ಮಿ ದಂಪತಿಯ ಪುತ್ರಿ 13 ವರ್ಷದ ಲಲಿತ ಎಂಬ ಬಾಲಕಿ ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದಳು. ವಿಷಯ ತಿಳಿದ ದ.ಸಂ.ಸ ದ ನಿಂಗರಾಜ್ ಮಲ್ಲಾಡಿ ಈ ಬಾಲಕಿಯನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆತಂದು ವೈದ್ಯಾಧಿಕಾರಿಗಳಾದ ಡಾ.ಉಮೇಶ್ ಅವರ ಬಳಿ ತೋರಿಸಿ ಆಸ್ಪತ್ರೆಗೆ ದಾಖಲು ಮಾಡಿದರು.

ವೈದ್ಯಾಧಿಕಾರಿಗಳು ಬಾಲಕಿಯನ್ನು ಪರೀಕ್ಷಿಸಿ, ಅಪೆಂಡಿಸೈಟಿಸ್‌ನಿಂದ ಬಳಲುತ್ತಿದ್ದು, ತಕ್ಷಣವೇ ಶಸ್ತ್ರಚಿಕಿತ್ಸೆ ಅಗತ್ಯವಿದೆ. ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಕರೆದು ಕೊಂಡು ಹೋಗುವಂತೆ ತಿಳಿಸಿದರು. ಬಾಲಕಿಯನ್ನು ತುರ್ತು ವಾಹನದಲ್ಲಿ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರಚಿಕಿತ್ಸೆ ಮಾಡಿಸಲಾಯಿತು. ಬಾಲಕಿ ಕುಟುಂಬ ತೀರಾ ಬಡವರಾಗಿದ್ದು, ಆಸ್ಪತ್ರೆಯ ವೆಚ್ಚವನ್ನು ಬರಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ದಸಂಸ ಮನವಿಗೆ ಸ್ಪಂದಿಸಿದ ಮುಖ್ಯಸ್ಥರಾದ ಡಾಕ್ಟರ್ ರಾಜೇಂದ್ರ ಕುಮಾರ್ ಅವರು ಬಾಲಕಿ ಲಲಿತಳಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡುವಂತೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅದರಂತೆ ವೈದ್ಯಾಧಿಕಾರಿಗಳು ಮತ್ತು ಅವರ ತಂಡ ಅಪೆಂಡಿಸೈಟಿಸ್‌ನಿಂದಾಗಿ ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಲಲಿತಳಿಗೆ ಶಸ್ತ್ರಚಿಕಿತ್ಸೆ ಮಾಡಿ ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ.

ವಿದ್ಯಾರ್ಥಿ ಸಂಘಗಳು ನಾಯಕತ್ವದ ಗುಣ ಬೆಳೆಸುತ್ತವೆ



ನಂಜನಗೂಡು, ಜು.22- ವಿದ್ಯಾರ್ಥಿಗಳು ವಿದ್ಯಾರ್ಥಿ ಜೀವನದಲ್ಲೇ ಶಾಲಾ ಮಂತ್ರಿ ಮಂಡಲದಂತಹ ಮತ್ತು ವಿದ್ಯಾರ್ಥಿ ಸಂಘಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಚಿಕ್ಕ ವಯಸ್ಸಿನಲ್ಲೇ ನಾಯಕತ್ವ ಗುಣ ಬೆಳೆಸಿಕೊಳ್ಳಬೇಕು ಎಂದು ವಿಶ್ವಕರ್ಮ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ತಿಳಿಸಿದರು.

ನಗರದ ಜೆಎಸ್‌ಎಸ್ ಬಾಲಕಿಯರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶನಿವಾರ ವಿದ್ಯಾರ್ಥಿ ಸಂಘ ಹಾಗೂ ಶಾಲಾ ಮಂತ್ರಿಮಂಡಲವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಲೆಗಳಲ್ಲಿ ವಿದ್ಯಾರ್ಥಿಗಳಲ್ಲಿನ ಹಿಂಜರಿಕೆ, ಕೀಳರಿಮೆಗಳನ್ನು ಹೋಗಲಾಡಿಸಿ, ನಾಯಕತ್ವದ ಗುಣ ಬೆಳೆಸುವಲ್ಲಿ ವಿದ್ಯಾರ್ಥಿ ಸಂಘಗಳ ಪಾತ್ರ ಪ್ರಮುಖವಾದುದು, ಶಾಲಾ ಮಂತ್ರಿ ಮಂಡಲವು ವಿದ್ಯಾರ್ಥಿಗಳಿಗೆ ರಾಜಕೀಯ ಪ್ರಜ್ಞೆಯನ್ನು ಬೆಳೆಸುತ್ತದೆ. ಇದರಿಂದ ನಮ್ಮ ದೇಶದ ಆಡಳಿತ ವೈಖರಿಯನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ಅರ್ಥೈಸಲು ಸಹಕಾರಿಯಾಗಲಿದೆ ಎಂದರು.

ವಿದ್ಯಾರ್ಥಿಗಳನ್ನು ಸಾಂಸ್ಕೃತಿಕವಾಗಿ ಮುನ್ನಲೆಗೆ ತರುವಲ್ಲಿ ಶಾಲೆ ಮುಂಚೂಣಿಯಲ್ಲಿದೆ, ಉತ್ತಮವಾದ ವಾತಾವರಣ ಕಲ್ಪಿಸಲಾಗಿದೆ, ವೈಯಕ್ತಿಕವಾಗಿ ನಾನು, ನಮ್ಮ ಕಾಲದಲ್ಲಿ ಹೆಚ್ಚಿನ ಉನ್ನತ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗಲಿಲ್ಲ, ಬಡತನದಿಂದ ವಿದ್ಯಾಭ್ಯಾಸವನ್ನು ಅರ್ಧದಲ್ಲೆ ತೊರೆಯುವ ಸಂದರ್ಭಗಳು ಹೆಚ್ಚಿವೆ, ಬಡ ವಿದ್ಯಾರ್ಥಿಗಳ ಶಾಲಾ ಶುಲ್ಕ ಪುಸ್ತಕ, ಸಮವಸ್ತ್ರ ಸೇರಿದಂತೆ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಬದ್ಧನಾಗಿದ್ದೇನೆ ಎಂದು ಹೇಳಿದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮೌಲ್ಯಗಳು ಮರೆಯಾಗುತ್ತಿವೆ. ಇದರಿಂದಾಗಿ ಸಂಬಂಧಗಳ ಬೆಲೆ ಅರಿಯದೆ ವೃದ್ಧಾಶ್ರಮಗಳು ಅನಾಥಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದನ್ನು ಹೋಗಲಾಡಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣವನ್ನು ಬೋಧಿಸುವ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಬಿತ್ತಿ ಬೆಳಸಬೇಕು, ಅಲ್ಲದೆ ವಿದ್ಯಾರ್ಥಿಗಳಿರುವ ಪ್ರತಿಭೆಯನ್ನು ಅನಾವರಣಗೊಳಿಸಿ, ವೇದಿಕೆ ಕಲ್ಪಿಸಿಕೊಡಲು ಸಹಕರಿಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲರಾದ ನಂದಿನಿ ಮಾತನಾಡಿ, ನಂದಕುಮಾರ್ ಅವರು ಶಾಲೆಗೆ ವಿದ್ಯಾರ್ಥಿಗಳ ಜ್ಞಾನ ಹೆಚ್ಚಿಸುವ ವೃತ್ತಪತ್ರಿಕೆಗಳು ಹಾಗೂ ಶಾಲೆಯ ಶುಲ್ಕ ಭರಿಸಲಾಗದ ವಿದ್ಯಾರ್ಥಿಗಳಿಗೆ ಸಹಾಯ ಹಸ್ತ ನೀಡಿ, ಪ್ರೋತ್ಸಾಹಿಸುತ್ತಿದ್ದಾರೆ. ಕ್ರೀಡಾಚಟುವಟಿಕೆಗಳಿಗೂ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಈ ರೀತಿಯಾಗಿ ಜೆಎಸ್‌ಎಸ್ ಸಂಸ್ಥೆಯ ಸಹಕಾರ, ಸಮಾಜದ ಪ್ರಮುಖರ ಬೆಂಬಲ ದೊರೆಯುವುದರಿಂದ ಉತ್ತಮ ಶೈಕ್ಷಣಿಕ ವಾತಾವರಣ ರೂಪುಗೊಂಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅನಿಲ್ ಕುಮಾರ್, ಜಯಶೀಲ, ಗೌರಾಂಬಿಕಾ, ಹಾಜೀರಾ ಬೇಗಂ, ಶಾರದ, ಕಾವ್ಯ ಪ್ರಕಾಶ್ ಉಪಸ್ಥಿತರಿದ್ದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

● ಐಎಎಸ್ ಅಧಿಕಾರಿಗಳ ದುರ್ಬಳಕೆ ಆರೋಪ ● ಸದನದಿಂದ ಬಿಜೆಪಿ ಶಾಸಕರ ಅಮಾನತಿಗೆ ಖಂಡನೆ



ಮೈಸೂರು,ಜು.22(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ಮೈಸೂರು ನಗರ ಮತ್ತು ಗ್ರಾಮಾಂತರ ಘಟಕದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಬಿಜೆಪಿ ಮತ್ತು ಜೆಡಿಎಸ್ ಶಾಸಕರಿಗೆ ಸದನದಲ್ಲಿ ಚರ್ಚಿಸಲು ಅವಕಾಶವನ್ನೇ ನೀಡದೇ ಏಕಪಕ್ಷೀಯವಾಗಿ ವರ್ತಿಸಿದ್ದಲ್ಲದೇ, ಬಿಜೆಪಿಯ 10 ಶಾಸಕರನ್ನು ಸಸ್ಪೆಂಡ್ ಮಾಡುವ ಮೂಲಕ ಸರ್ವಾಧಿಕಾರಿ ಧೋರಣೆ ಅನುಸರಿಸಿದರು ಎಂದು ಆರೋಪಿಸಿದರು.

ಒಮ್ಮೆ ಸ್ಪೀಕರ್ ಹುದ್ದೆ ಸ್ವೀಕರಿಸಿದ ಬಳಿಕ ಯಾವುದೇ ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುವಂತಿಲ್ಲ. ಆದರೆ ಸ್ಪೀಕರ್ ಯು.ಟಿ.ಖಾದರ್ ಅವರು ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ಪ್ರತಿಪಕ್ಷ ಮೈತ್ರಿಕೂಟದ ಸಭೆಗೆ ಭೇಟಿ ನೀಡಿ, ಸೋನಿಯಾ ಗಾಂಧಿಯವರನ್ನು ಭೇಟಿಯಾಗಲು ಅರ್ಧ ಗಂಟೆ ಕಾದು ಕುಳಿತು ಭೋಜನ ಸವಿದು ಬಂದಿದ್ದಾರೆ. ಇದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾಘಟಬಂಧನ ಮೈತ್ರಿಕೂಟದ ಸಭೆಗೆ ಆಗಮಿಸಿದ್ದ ಕಾಂಗ್ರೆಸ್ ಮತ್ತು ಇತರೆ ಪಕ್ಷಗಳ ನಾಯಕರಿಗೆ ಆತಿಥ್ಯ ನೀಡಲು 30ಕ್ಕೂ ಹೆಚ್ಚು ಐಎಎಸ್ ಅಧಿಕಾರಿಗಳನ್ನು ರಾಜ್ಯ ಸರ್ಕಾರ ನಿಯೋಜಿಸಿತ್ತು. ಆ ಮೂಲಕ ಸರ್ಕಾರ ಕಾನೂನು ಉಲ್ಲಂಘಿಸಿದ್ದು, ಕೂಡಲೇ ರಾಜ್ಯಪಾಲರು ಮಧ್ಯೆ ಪ್ರವೇಶಿಸಿ ಸೂಕ್ತ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ರೈತರ ಕಿಸಾನ್ ಸಮ್ಮಾನ್ ನಿಧಿಯಡಿ ಪ್ರತಿವರ್ಷ 4 ಸಾವಿರ ರೂ. ರೈತರ ಖಾತೆಗೆ ಜಮಾ ಮಾಡುವುದನ್ನು ಈ ಸರ್ಕಾರ ಸ್ಥಗಿತಗೊಳಿಸಿದೆ. ನೀರಾವರಿ ಯೋಜನೆಗಳಿಗೆ ಅನುದಾನ ಕಡಿತಗೊಳಿಸುವ ಮೂಲಕ ರೈತ ವಿರೋಧಿ ಧೋರಣೆಯನ್ನು ಸರ್ಕಾರ ಅನುಸರಿಸಿದೆ. ನೇಕಾರರು, ಮೀನುಗಾರರು, ಆಟೋ, ಟ್ಯಾಕ್ಸಿ ಕ್ಯಾಬ್ ಚಾಲಕರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ನಿಲ್ಲಿಸಲಾಗಿದೆ. ರಾಜ್ಯ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ 48 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಸರ್ಕಾರ ಮಾತನಾಡುತ್ತಲೇ ಇಲ್ಲ ಎಂದು ದೂರಿದರು.

ಜೈನ ಮುನಿಗಳನ್ನು ಅಮಾನುಷವಾಗಿ ಹತ್ಯೆ ಮಾಡಿದ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡದಿರುವುದು ಖಂಡನೀಯ. ಎಸ್‌ಸಿ–ಎಸ್‌ಟಿ ವರ್ಗಗಳಿಗೆ ಮೀಸಲಾದ ಹಣವನ್ನು ಇತರೆ ಯೋಜನೆಗಳಿಗೆ ವರ್ಗಾಯಿಸುವ ಮೂಲಕ ಈ ಸರ್ಕಾರ ದಲಿತ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಆಪಾದಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ. ಶಿಷ್ಟಾಚಾರದ ವ್ಯಾಪ್ತಿಗೆ ಬಾರದ ವ್ಯಕ್ತಿಗಳ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ್ದು ಏಕೆ? ಎಂದು ವಿಧಾನಸಭೆ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗೆ ಸರ್ಕಾರ ಉತ್ತರವನ್ನೇ ಕೊಡಲಿಲ್ಲ. ಮುಖ್ಯಮಂತ್ರಿ ಇಲ್ಲವೇ ಸಚಿವ ಸ್ಥಾನದಲ್ಲಿ ಇರುವವರಿಗೆ ಆತಿಥ್ಯ ನೀಡಲು ಅಧಿಕಾರಿಗಳನ್ನು ನಿಯೋಜನೆ ಮಾಡುವುದು ಇದೆ. ಆದರೆ ಜಾಮೀನು ಪಡೆದು ಹೊರಗೆ ಇರುವ ರಾಜಾ, ಲಾಲೂ ಪ್ರಸಾದ್ ಯಾದವ್ ಅಂತಹವರಿಗೆ ಆತಿಥ್ಯ ನೀಡಲು ಐಎಎಸ್ ಅಧಿಕಾರಿಗಳನ್ನು ನಿಯೋಜನೆ ಮಾಡಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಷ್ಟರ ಮಟ್ಟಿಗೆ ಸ್ಪೀಕರ್ ಯು.ಟಿ.ಖಾದರ್ ನಡೆದುಕೊಂಡರು ಎಂದರೆ, ಊಟಕ್ಕೆ ಹೋಗುವವರು ಹೋಗಬಹುದು ಎಂದು ಉಪಸಭಾಪತಿಗಳನ್ನು ಕೂರಿಸಿ, ಅವರು ಎದ್ದು ಹೋದರು. ಇಂತಹ ಸಂದರ್ಭದಲ್ಲಿ ಸ್ಪೀಕರ್ ಆದವರು ಸಮಾಧಾನಪಡಿಸಿದ ನಿದರ್ಶನಗಳಿವೆ. ವೈಕುಂಠ ಬಾಳಿಗ ಅವರು ಸಭಾಧ್ಯಕ್ಷರಾಗಿದ್ದಾಗ ಸದನದ ಘನತೆ–ಗೌರವ ಎತ್ತಿಹಿಡಿದಿದ್ದರು ಎಂದು ಹೊಸ ಶಾಸಕರಾದ ನಮಗೆ ಪಾಠ ಮಾಡಿದಾಗ ಹೇಳಿಕೊಟ್ಟಿದ್ದಾರೆ. ಖಾದರ್ ಅವರು ಸಮಾಧಾನಪಡಿಸುವಂತಹ ಯಾವುದೇ ಕ್ರಮ ವಹಿಸದೇ ಏಕಾಏಕಿ 10 ಬಿಜೆಪಿ ಶಾಸಕರನ್ನು ಸಸ್ಪೆಂಡ್ ಮಾಡಿದರು ಎಂದು ಕಿಡಿಕಾರಿದರು.

ಜಮೀರ್ ಅಹಮದ್ ಮೈಕ್ ಕಿತ್ತು ಎಸೆದಿದ್ದರು. ಸಿದ್ದರಾಮಯ್ಯನವರು ಸದನದ ಬಾಗಿಲಿಗೆ ಒದ್ದಿದ್ದರು, ಇದನ್ನು ತಡೆಯಲು ಬಂದ ಪೊಲೀಸ್ ಅಧಿಕಾರಿಯಾಗಿದ್ದ ಶಂಕರ ಬಿದರಿಯವರ ತಳ್ಳಿದ್ದರು. ಅಂದು ನಾವು ಇವರನ್ನು ಸಸ್ಪೆಂಡ್ ಮಾಡಿದ್ವಾ? ಇವರಿಗೆ ನಾಚಿಕೆಯಾಗಬೇಕು ಎಂದು ಹರಿಹಾಯ್ದರು.

ಮಾಜಿ ಸಚಿವರಾದ ಸಿ.ಹೆಚ್.ವಿಜಯಶಂಕರ್, ಕೋಟೆ ಎಂ.ಶಿವಣ್ಣ, ವಿಧಾನಪರಿಷತ್ ಮಾಜಿ ಸದಸ್ಯರಾದ ತೋಂಟದಾರ್ಯ, ಸಿದ್ದರಾಜು, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಹರ್ಷವರ್ಧನ್, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಡಿ.ರೂಪ, ಮುಖಂಡರಾದ ಯಶಸ್ವಿ ಸೋಮಶೇಖರ್, ಬಿ.ಪಿ.ಮಂಜುನಾಥ್, ಶ್ರೀನಿವಾಸಗೌಡ, ಶಂಕರ್, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಜಯನಗರ ಒಂದನೇ ಹಂತದ ಬಡಾವಣೆ ಅಭಿವೃದ್ಧಿಗೆ ಆದ್ಯತೆ: ಶಾಸಕ ಹರೀಶ್‌ಗೌಡ



ಮೈಸೂರು, ಜು.22(ಎಸ್‌ಪಿಎನ್)– ವಿಜಯನಗರ ಒಂದನೇ ಹಂತದ ಬಡಾವಣೆಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ಮೂಲಸೌಕರ್ಯ ಒದಗಿಸಲಾಗುವುದು ಎಂದು ಶಾಸಕ ಹರೀಶ್ ಗೌಡ ಭರವಸೆ ನೀಡಿದರು.

ಮೈಸೂರು ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನ ಎದುರಿನ ಉದ್ಯಾನವನದ ಯೋಗಮಂಟಪದಲ್ಲಿ ವಿಜಯನಗರ ಒಂದನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಭಿನಂದನೆ ಸಮಾರಂಭ ಹಾಗೂ ಜನಸಂಪರ್ಕ ಸಭೆಯಲ್ಲಿ ಶಾಸಕರು ಮಾತನಾಡಿದರು.

ಈ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ವಿಜಯನಗರ ಒಂದನೇ ಹಂತದ ಅಭಿವೃದ್ಧಿಗೆ ಒತ್ತು ನೀಡುವಂತೆ ಸಲಹೆ ನೀಡಿದ್ದಾರೆ. ಇಲ್ಲಿನ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಈಜುಕೊಳ, ಯೋಗಮಂಟಪ, ಅಪೂರ್ಣಗೊಂಡಿರುವ ಗ್ರಂಥಾಲಯ ಕಟ್ಟಡ ಸೇರಿದಂತೆ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಮನವಿ ಮಾಡಿದ್ದಾರೆ. ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಕುರಿತು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಮೈಸೂರಿನಲ್ಲಿ ವಿಜಯನಗರ ಉತ್ತಮ ಬಡಾವಣೆಯಾಗಿದೆ. ಇಲ್ಲಿನ ರಸ್ತೆ ಉದ್ಯಾನವನ, ಫುಟ್‌ಪಾತ್ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದು ಆಶ್ವಾಸನೆ ನೀಡಿದರು. ಈ ಕಾರ್ಯಕ್ರಮಕ್ಕೆ ಬರುವ ಮೊದಲು ಈ ಬಡಾವಣೆಯಲ್ಲಿ ಸಾಕಷ್ಟು ಸಮಸ್ಯೆಗಳ ಪಟ್ಟಿ ಬರಬಹುದು ಅಂದುಕೊಂಡಿದ್ದೆ. ಆದರೆ, ಸಣ್ಣಪುಟ್ಟ ಬೇಡಿಕೆಗಳ ಮನವಿಗಳು ಬಂದಿವೆ. ವಿಜಯನಗರ ಬಡಾವಣೆಯಲ್ಲಿ ನಾಯಿಗಳ ಕಾಟ ಹೆಚ್ಚಾಗಿವೆ ಎಂಬ ದೂರಿದೆ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಲು ಸೂಚಿಸುತ್ತೇನೆ ಎಂದು ಭರವಸೆ ನೀಡಿದರು.

ಇಲ್ಲಿನ ಮತದಾರರು ಸುಸಂಸ್ಕೃತರು ಹಾಗೂ ವಿದ್ಯಾವಂತರು, ನನ್ನ ಹುಟ್ಟುಹಬ್ಬ ಪ್ರಯುಕ್ತ ಹಾಗೂ ಮೊದಲ ಬಾರಿ ಶಾಸಕನಾಗಿ ಆಯ್ಕೆಯಾಗಿದ್ದಕ್ಕೆ ಮತದಾರರು ಅಭಿನಂದಿಸಿ, ಅಪಾರ ಪ್ರೀತಿ ತೋರಿದ್ದಾರೆ. ಇದನ್ನು ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದರು.

ಈ ವೇಳೆ ಮಹಾನಗರ ಪಾಲಿಕೆ ಸದಸ್ಯ ಎಂ.ಸುಬ್ಬಯ್ಯ, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕಾಳಿಂಗು, ಕಾರ್ಯದರ್ಶಿ ಯು.ಬಿ.ಉದಯ ಕುಮಾರ್, ಗೌರವಾಧ್ಯಕ್ಷ ಎಂ.ಕೆ.ನಂಜಯ್ಯ, ಉಪಾಧ್ಯಕ್ಷ ಕೆ.ಕೃಷ್ಣಪ್ಪ, ಜಂಟಿ ಕಾರ್ಯದರ್ಶಿ ಹೆಚ್.ಎ.ಪ್ರಭಾಕರ್, ಖಜಾಂಚಿ ಎನ್.ಕೆ.ರಮೇಶ್, ನಿರ್ದೇಶಕರಾದ ಸಿ.ನಾರಾಯಣಗೌಡ, ನರಸೇಗೌಡ, ಶ್ರೀನಿವಾಸ, ಎಂ.ಕೆ.ದೇವಯ್ಯ, ಪಿ.ಎಂ.ಎಸ್.ಗೌಡ, ಜಿ.ಟಿ.ವೆಂಕಟೇಗೌಡ, ಜಿ.ಆರ್.ಚೆನ್ನಕೇಶವ, ಕೆ.ಹನುಮಂತೇಗೌಡ, ಸಿ.ಜೆ.ಮೂರ್ತಿ, ಡಿ.ಎನ್.ಚಂದ್ರಶೇಖರ್, ಟಿ.ವಿ.ಹನುಮಪ್ಪ, ದಿವಾಕರ್ ದಾಸ್, ವೆಂಕಟರಮಣ, ಆರ್.ರಘು, ಎಸ್.ಸುಬ್ರಹ್ಮಣ್ಯ, ವೈ.ಟಿ.ಮಂಜುನಾಥ್, ಶ್ರೇಯಸ್ ಕುಮಾರ್, ಗೌರಿಕಿತ್ತೂರ್ ಗೌಡ, ಅಲಮೇಲು ಪ್ರದೀಪ್ ಉಪಸ್ಥಿತರಿದ್ದರು.

ಹೊಗೇನಕಲ್ ಜಲಪಾತದಲ್ಲಿ ಇಬ್ಬರು ಯುವಕರು ನೀರು ಪಾಲು



ಹನೂರು, ಜು.22– ಹೊಗೇನಕಲ್ ಜಲಪಾತದಲ್ಲಿ ಈಜಾಡಲು ತೆರಳಿದ್ದ ಇಬ್ಬರು ಯುವಕರು ಜಲಸಮಾಧಿಯಾದ ಘಟನೆ ಸಂಭವಿಸಿದೆ.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಶಬರಿ ಮತ್ತು ಅಜಿತ್ ಎಂಬುವವರೇ ಮೃತರಾದವರಾಗಿದ್ದು, 12 ಮಂದಿ ಸ್ನೇಹಿತರೊಂದಿಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಪೂಜೆ ಸಲ್ಲಿಸಲು ಇವರು ಆಗಮಿಸಿದ್ದರು. ಹಿಂತಿರುಗುವಾಗ ಹೊಗೇನಕಲ್ ಜಲಪಾತಕ್ಕೆ ತೆರಳಿದ್ದಾರೆ. ಈ ವೇಳೆ ಈಜಾಡಲು ನೀರಿಗೆ ಇಳಿದಿದ್ದು ಈಜು ಬಾರದೆ ಅಜಿತ್ ಮತ್ತು ಶಬರಿ ಮೃತಪಟ್ಟಿದ್ದಾರೆ. ಈ ಸಂಬಂಧ ಮಹದೇಶ್ವರ ಬೆಟ್ಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ 44
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು